ಬುಧವಾರ, ಮೇ 19, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 139 | ಪುಟ 12
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಕೋವಿಡ್: 58 ಸಾವಿರ ಮಂದಿ ಚೇತರಿಕೆ 8

ಆಳ-ಅಗಲ 'ಸಿಬಿಐ ಪಂಜರದ ಗಿಳಿ'

'ಗ್ರಾಮಮಟ್ಟದಲ್ಲಿ ಕೋವಿಡ್ ಕಾರ್ಯಪಡೆ' 4

ಸೆನ್ಸೆಕ್ಸ್	ನಿಫ್ಟಿ	₹/$
50,193 ▲	15,108 ▲	73.05 ▲

ಪರೀಕ್ಷೆ ಹೆಚ್ಚಾದರೆ ಸೋಂಕಿತರ ಸಂಖ್ಯೆಯೂ ಏರಿಕೆ • ವೈದ್ಯಕೀಯ ಕ್ಷೇತ್ರದ ತಜ್ಞರ ಕಳವಳ

ಸೋಂಕು ದೃಢ ಪ್ರಮಾಣ ಏರಿಕೆ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಕೊರೊನಾ ಸೋಂಕು ದೃಢ ಪ್ರಮಾಣವು ನಿರಂತರ ಏರುಗತಿಯಲ್ಲಿ ಸಾಗುತ್ತಿರುವ ಹೊತ್ತಿನಲ್ಲಿ ಪರೀಕ್ಷೆಗಳ ಸಂಖ್ಯೆಯನ್ನು ಇಳಿಕೆ ಮಾಡುವ ಮೂಲಕ ಕೋವಿಡ್ ನಿಯಂತ್ರಣದಲ್ಲಿದೆ ಎಂದು ಬಿಂಬಿಸಲು ಸರ್ಕಾರ ಹೊರಟಿದೆಯೇ ಎಂಬ ಅನುಮಾನ ಮೂಡಿದೆ.

ಕರ್ನಾಟಕದ 17 ಜಿಲ್ಲೆಗಳಲ್ಲಿ ಸೋಂಕು ದೃಢ ಪ್ರಮಾಣವು ರಾಜ್ಯದ ಒಟ್ಟು ಸರಾಸರಿಗಿಂತ (ಕಳೆದ ಒಂದು ವಾರದ ಸರಾಸರಿ ಶೇ 27.52) ಅಧಿಕವಾಗಿದೆ.

ಸದ್ಯ ರಾಜ್ಯದಲ್ಲಿ 68 ಸರ್ಕಾರಿ ಹಾಗೂ 128 ಖಾಸಗಿ ಪ್ರಯೋಗಾಲಯಗಳು ಕಾರ್ಯನಿರ್ವಹಿಸುತ್ತಿವೆ. ಇವು ದಿನವೊಂದಕ್ಕೆ 2 ಲಕ್ಷಕ್ಕೂ ಅಧಿಕ ಮಾದರಿಗಳನ್ನು ಆರ್‌ಟಿ-ಪಿಸಿಆರ್ ವಿಧಾನದ ಮೂಲಕ ಪರೀಕ್ಷೆ ಮಾಡುವ ಸಾಮರ್ಥ್ಯ ಹೊಂದಿವೆ. ಈಗ ಇವುಗಳ ಶೇ 50ರಷ್ಟು ಸಾಮರ್ಥ್ಯವನ್ನು ಮಾತ್ರ ಬಳಸಿಕೊಳ್ಳಲಾಗುತ್ತಿದ್ದು, ಪರೀಕ್ಷೆಗಳ ಸಂಖ್ಯೆಯನ್ನು ಲಕ್ಷದ ಗಡಿಯ ಆಸುಪಾಸಿಗೆ ಇಳಿಕೆ ಮಾಡಲಾಗಿದೆ.

ಕೋವಿಡ್ ಎರಡನೇ ಅಲೆಯನ್ನು ಸಮರ್ಥವಾಗಿ ಎದುರಿಸಲು ಪರಿಣಾಮಕಾರಿಯಾಗಿ ಪರೀಕ್ಷೆ ಮತ್ತು ಸಂಪರ್ಕ ಪತ್ತೆ ನಡೆಸಬೇಕೆಂದು ಕೋವಿಡ್ ತಾಂತ್ರಿಕ ಸಲಹಾ ಸಮಿತಿಯು ಸರ್ಕಾರಕ್ಕೆ ಸೂಚಿಸಿತ್ತು. ಅದೇ ರೀತಿ, ನಿತ್ಯ ಸರಾಸರಿ 1.50 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲು ಸಮಿತಿಯ ತಜ್ಞರು ಶಿಫಾರಸು ಮಾಡಿದ್ದರು.

ಪ್ರಜಾವಾಣಿ ವಿಶೇಷ

ಏಪ್ರಿಲ್ ಕೊನೆಯ ವಾರದಲ್ಲಿ ನಿತ್ಯ ಸರಾಸರಿ 1.70 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿತ್ತು. ದಿನವೊಂದಕ್ಕೆ ನಡೆಸಲಾದ ಪರೀಕ್ಷೆಗಳ ಸಂಖ್ಯೆ 1.89 ಲಕ್ಷ ದಾಟಿತ್ತು. ಇದರಿಂದಾಗಿ ಹೊಸ ಪ್ರಕರಣಗಳ ಸಂಖ್ಯೆ ಕೂಡ 50 ಸಾವಿರದ ಗಡಿಯಲ್ಲಿತ್ತು.

4ನೇ ಪುಟ ನೋಡಿ



ಮಂಗಳವಾರ 58,395 ಜನ ಗುಣಮುಖರಾಗಿದ್ದು, ಒಂದೇ ದಿನದಲ್ಲಿ ಚೇತರಿಸಿಕೊಂಡವರ ಅತೀ ಹೆಚ್ಚು ಸಂಖ್ಯೆ ಇದಾಗಿದೆ. 30,309 ಹೊಸ ಪ್ರಕರಣಗಳು ಪತ್ತೆಯಾಗಿವೆ

ಡಾ.ಕೆ ಸುಧಾಕರ್, ಆರೋಗ್ಯ ಸಚಿವ



ಪಾಸಿಟಿವಿಟಿ ದರ ಶೇ 5 ಕ್ಕಿಂತ ಇಳಿಕೆಯಾದರೆ ಸೋಂಕು ಕಡಿಮೆಯಾಗಿದೆ ಎಂದರ್ಥ. ಪಾಸಿಟಿವಿಟಿ ದರ ಶೇ 20 ಕ್ಕಿಂತ ಕಡಿಮೆ ಇರುವ ಜಿಲ್ಲೆಗಳು ಒಂದೆರಡಷ್ಟೇ ಇವೆ

ಸಿದ್ದರಾಮಯ್ಯ, ವಿರೋಧ ಪಕ್ಷದ ನಾಯಕ

ಸೋಂಕು ದೃಢ ಪ್ರಮಾಣ ಅಧಿಕವಿರುವ ಜಿಲ್ಲೆಗಳು

ಕಳೆದ ಒಂದು ವಾರದ ಪ್ರಕರಣಗಳನ್ನು ಆಧರಿಸಿ

ಜಿಲ್ಲೆ	ಸೋಂಕು ದೃಢ ಪ್ರಮಾಣ (%)
ಬಳ್ಳಾರಿ	41.22
ಉತ್ತರ ಕನ್ನಡ	39.20
ಬೆಳಗಾವಿ	37.77
ಮೈಸೂರು	34.80
ಗದಗ	34.58
ತುಮಕೂರು	33.98
ಚಾಮರಾಜನಗರ	33.72
ಉಡುಪಿ	32.77
ಹಾಸನ	31.86
ಧಾರವಾಡ	30.44

15 ದಿನ ಮುಂಚೆ ಲಸಿಕೆ ಪೂರೈಕೆ: ಮೋದಿ ಭರವಸೆ

ನವದೆಹಲಿ: ಕೋವಿಡ್ ನಿರೋಧಕ ಲಸಿಕಾ ಕಾರ್ಯಕ್ರಮಕ್ಕೆ ಬೇಕಾಗುವ ಲಸಿಕೆಗಳನ್ನು 15 ದಿನ ಮುಂಚಿತವಾಗಿಯೇ ರಾಜ್ಯಗಳಿಗೆ ಪೂರೈಸಲು ಎಲ್ಲ ಪ್ರಯತ್ನಗಳೂ ನಡೆಯುತ್ತಿವೆ. ಇದರಿಂದಾಗಿ ರಾಜ್ಯಗಳು ಲಸಿಕೆ ನೀಡಿಕೆಗೆ ಪೂರ್ವ ಸಿದ್ಧತೆ ಮಾಡಿಕೊಳ್ಳುವುದು ಸಾಧ್ಯವಾಗುತ್ತದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ಲಸಿಕೆ ಪೂರೈಕೆ ಹೆಚ್ಚಿಸಲು ಶ್ರಮಿಸಲಾಗುವುದು ಎಂದೂ ಅವರು ಭರವಸೆ ಕೊಟ್ಟಿದ್ದಾರೆ.

ಲಸಿಕೆ ಕೊರತೆಗೆ ಸಂಬಂಧಿಸಿ ವಿರೋಧ ಪಕ್ಷಗಳು ಸರ್ಕಾರದ ವಿರುದ್ಧ ತೀವ್ರ ಟೀಕಾಪ್ರಹಾರ ನಡೆಸುತ್ತಿರುವ ಸಂದರ್ಭದಲ್ಲಿ ಪ್ರಧಾನಿ ಈ ಆಶ್ವಾಸನೆ ನೀಡಿದ್ದಾರೆ.

ಒಂಬತ್ತು ರಾಜ್ಯಗಳ ಅತಿ ಹೆಚ್ಚು ಕೋವಿಡ್ ಪ್ರಕರಣಗಳು ಇರುವ 46 ಜಿಲ್ಲೆಗಳ ಜಿಲ್ಲಾಧಿಕಾರಿಗಳ ಜತೆಗೆ ಪ್ರಧಾನಿಯವರು ವಿಡಿಯೊ ಕಾನ್ಫರೆನ್ಸ್ ಮೂಲಕ ಮಂಗಳವಾರ ಮಾತನಾಡಿದರು. ಈ ರಾಜ್ಯಗಳ ಮುಖ್ಯಮಂತ್ರಿಗಳೂ ಹಾಜರಿದ್ದರು.



ಕೆಲವು ರಾಜ್ಯಗಳಲ್ಲಿ ಪ್ರಕರಣಗಳು ಕಡಿಮೆಯಾಗುತ್ತಿವೆ. ಕೆಲವೆಡೆ ಹೆಚ್ಚುತ್ತಿವೆ. ಸಂಖ್ಯೆ ಇಳಿಮುಖವಾಗುತ್ತಿರುವ ಈ ಸಂದರ್ಭದಲ್ಲಿ ನಾವು ಹೆಚ್ಚು ಜಾಗರೂಕರಾಗಿ ಇರಬೇಕಿದೆ

ನರೇಂದ್ರ ಮೋದಿ, ಪ್ರಧಾನಿ

ಕೋವಿಡ್ ವಿರುದ್ಧದ ಹೋರಾಟದಲ್ಲಿ ಲಸಿಕೆಯೇ ಅತ್ಯಂತ ಪ್ರಬಲ ಅಸ್ತ್ರ. ಹಾಗಾಗಿ, ಲಸಿಕೆಯ ಬಗ್ಗೆ ಇರುವ ಮಿಥ್ಯೆಗಳನ್ನು ಒಡೆದುಹಾಕುವಂತೆಯೂ ಮೋದಿ ಕರೆ ಕೊಟ್ಟಿದ್ದಾರೆ.

ಸ್ಥಳೀಯ ಮಟ್ಟದಲ್ಲಿಯೇ ಕೋವಿಡ್ ನಿರ್ವಹಣೆಯ ಕಾರ್ಯತಂತ್ರಕ್ಕೆ ಸರ್ಕಾರ ಒತ್ತು ನೀಡುತ್ತಿದೆ.

8ನೇ ಪುಟ ನೋಡಿ

ಪ್ರಜಾವಾಣಿ DH ಕೋವಿಡ್ ಪರಿಹಾರ ನಿಧಿ



ಆಸ್ಪತ್ರೆಗಳ ಮುಂದೆ ಏದುಸಿರು ಬಿಡುವ ರೋಗಿಗಳನ್ನು ಹೊತ್ತುನಿಂತ ಆಂಬುಲೆನ್ಸ್‌ಗಳು, ಆಪ್ತರ ಜೀವ ಉಳಿಸಲು ಪ್ರಾಣವಾಯುವಿಗಾಗಿ ಅಂಗಲಾಚುವವರು, ಚಿತಾಗಾರಗಳ ಮುಂದೆ ಸಾಲು ಸಾಲು ಮೃತದೇಹಗಳು... ರಾಜ್ಯದಲ್ಲಿ ಕಳೆದ ಕೆಲವು ವಾರಗಳಿಂದ ಇಂತಹದ್ದೇ ಹೃದಯವಿದ್ರಾವಕ ನೋಟಗಳು. ಕೋವಿಡ್-19 ಕಾಣಿಸಿಕೊಂಡ ದಿನದಿಂದ ಇಲ್ಲಿಯವರೆಗೂ 22 ಲಕ್ಷಕ್ಕೂ ಅಧಿಕ ಜನ ಕಾಯಿಲೆಪೀಡಿತರಾಗಿದ್ದು, 22 ಸಾವಿರಕ್ಕೂ ಅಧಿಕ ಜನ ಮೃತಪಟ್ಟಿದ್ದಾರೆ. ಈ ಅಂಕಿ-ಸಂಖ್ಯೆಗಳು ಅಧಿಕೃತ ಮಾಹಿತಿಯಷ್ಟೆ. ನೈಜ ಚಿತ್ರಣ ಇನ್ನೂ ಕರಾಳವಾಗಿದೆ. ಎರಡನೇ ಅಲೆ ಪ್ರಾರಂಭವಾಗಿ ಈಗಾಗಲೇ ಎರಡು ತಿಂಗಳಿಗೂ ಅಧಿಕ ಸಮಯ ಕಳೆದಿದೆ.

ಕಳೆದ ವರ್ಷ ಲಾಕ್‌ಡೌನ್ ಆದಂತಹ ಸಂದರ್ಭದಲ್ಲಿ ನಡೆಸಿದ ಸಮೀಕ್ಷೆಯ ವೇಳೆ ಪ್ರತೀ ಹತ್ತು ಜನರಲ್ಲಿ ಏಳು ಜನರು ನಿರುದ್ಯೋಗಿಗಳಾಗಿದ್ದರು. ಈ ಪಿಡುಗು ಆರಂಭವಾದಾಗಿನಿಂದ ಕನಿಷ್ಠ ಒಂದು ಲಕ್ಷ ಮಹಿಳಾ ಗಾರ್ಮೆಂಟ್ ಕಾರ್ಮಿಕರು ಉದ್ಯೋಗ ಕಳೆದುಕೊಂಡಿದ್ದಾರೆ. ಕೋವಿಡ್‌ನ ಮೊದಲನೇ ಅಲೆಯ ಹೊಡೆತದ ಈ ಅಂಕಿ ಅಂಶಗಳು, ಅಸಂಘಟಿತ ವಲಯದ ಕಾರ್ಮಿಕರು ಮತ್ತೆ ತೀವ್ರ ಸಂಕಷ್ಟಕ್ಕೆ ಸಿಲುಕಿರುವ ದಾರುಣ ಸನ್ನಿವೇಶದ ಕಿರುಚಿತ್ರಣವನ್ನು ನೀಡಬಲ್ಲವು.

ಇಂತಹ ಸನ್ನಿವೇಶದಲ್ಲಿ, ಕೋವಿಡ್ ಪರಿಹಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ಸ್ವಯಂಸೇವಾ ಸಂಸ್ಥೆಗಳಿಗೆ 'ಡೆಕ್ಕನ್ ಹೆರಾಲ್ಡ್' ಹಾಗೂ 'ಪ್ರಜಾವಾಣಿ' ಪತ್ರಿಕೆಗಳು ಬೆಂಬಲ ನೀಡಲು ನಿರ್ಧರಿಸಿವೆ. ನೀವು ನೀಡುವ ದೇಣಿಗೆಯ ಪ್ರತೀ ಪೈಸೆಯೂ ಸಂಕಷ್ಟಕ್ಕೆ ಒಳಗಾಗಿರುವ ಅರ್ಹ ಫಲಾನುಭವಿಗೆ ನೇರವಾಗಿ ಸೇರಿ, ಅವರ ಕಣ್ಣೀರು ಒರೆಸಲು ನೆರವಾಗಲಿದೆ.

₹ 1000 ಮತ್ತು ಅದಕ್ಕಿಂತ ಹೆಚ್ಚಿನ ದೇಣಿಗೆ ನೀಡಿದವರ ಹೆಸರನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುವುದು. ಈ ದೇಣಿಗೆಗೆ 80ಜಿ ಅನ್ವಯ ಆದಾಯ ತೆರಿಗೆಯಲ್ಲಿ ವಿನಾಯಿತಿ ಸಿಗಲಿದೆ.

ಹೀಗಾಗಿ, ನಿಮ್ಮ ಕೈಲಾದ ದೇಣಿಗೆಯನ್ನು (ಅದರ ಪ್ರಮಾಣ ಎಷ್ಟೇ ಇರಲಿ) ನೀಡಿ ಸಂಕಷ್ಟದಲ್ಲಿ ಸಿಲುಕಿದವರ ಬೆಂಬಲಕ್ಕೆ ನಿಲ್ಲುವ ಮಾನವೀಯ ಕಾರ್ಯದಲ್ಲಿ ಕೈಜೋಡಿಸುವಂತೆ ಕೋರುತ್ತೇವೆ.

ಆನ್‌ಲೈನ್ ಹಣ ವರ್ಗಾವಣೆ ಮೂಲಕ ಡೆಕ್ಕನ್ ಹೆರಾಲ್ಡ್-ಪ್ರಜಾವಾಣಿ ಪರಿಹಾರ ನಿಧಿ ಟ್ರಸ್ಟ್‌ಗೆ ದೇಣಿಗೆ ನೀಡಬಹುದು:
(Canara Bank, Cantonment Branch; A/C NO.0404101200385, IFSC CODE : CNRB0000404)

ದೇಣಿಗೆದಾರರು ತಾವು ನೀಡಿದ ದೇಣಿಗೆ ವಿವರದ ಜತೆಗೆ ಹೆಸರು, ವಿಳಾಸ ಹಾಗೂ ಸಂಪರ್ಕ ಸಂಖ್ಯೆಯನ್ನು dept.finc@printersmysore.co.in ಈ ಇ-ಮೇಲ್‌ಗೆ ಕಳುಹಿಸಲು ವಿನಂತಿ. ಇದರಿಂದ ದೇಣಿಗೆದಾರರಿಗೆ ರಸೀದಿ ಕಳಿಸಲು ಅನುಕೂಲವಾಗುತ್ತದೆ.

ರಾಜ್ಯ ಕೋವಿಡ್ ಅಂಕಿ-ಅಂಶ

22,72,374 ▲	ಒಟ್ಟು ಸೋಂಕಿತರು (22,42,065 ನಿನ್ನೆಯ ವಿವರ)
5,75,028 ▼	ಸಕ್ರಿಯ ಪ್ರಕರಣಗಳು
16,74,487 ▲	ಗುಣಮುಖರಾದವರು
22,838 ▲	ಒಟ್ಟು ಸಾವು

ದಿನದ ಏರಿಕೆ

ಹೊಸ ಪ್ರಕರಣ	30,309	▼
ಗುಣಮುಖ	58,395	▲
ಸಾವು	525	▲

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ರಾಜ್ಯಕ್ಕೆ ಬಂದ 2 ಲಕ್ಷ ಕೋವಿಶೀಲ್ಡ್ ಲಸಿಕೆ

ಬೆಂಗಳೂರು: 'ರಾಜ್ಯಕ್ಕೆ ಎರಡು ಲಕ್ಷ ಕೋವಿಶೀಲ್ಡ್ ಲಸಿಕೆ ಪೂರೈಕೆ ಆಗಿದೆ' ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ತಿಳಿಸಿದ್ದಾರೆ.

18ರಿಂದ 44 ವರ್ಷ ವಯೋಮಾನದವರಿಗೆ ಉಚಿತವಾಗಿ ನೀಡಲು ರಾಜ್ಯ ಸರ್ಕಾರ 2 ಕೋಟಿ ಡೋಸ್ ಕೋವಿಶೀಲ್ಡ್ ಮತ್ತು 1 ಕೋಟಿ ಡೋಸ್ ಕೊವ್ಯಾಕ್ಸಿನ್ ಖರೀದಿಗೆ ಉತ್ಪಾದನಾ ಕಂಪನಿಗೆ ಈಗಾಗಲೇ ಹಣ ಪಾವತಿಸಿದೆ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ಪ್ರಿಯ ವಿದ್ಯಾರ್ಥಿಗಳೇ, ಕೋವಿಡ್‌ನಿಂದಾಗಿ ಈ ವರ್ಷ ತರಗತಿಗಳಿಗೆ ಖುದ್ದಾಗಿ ಹಾಜರಾಗಲು ನಿಮಗೆ ಸಾಧ್ಯವಾಗದಿರಬಹುದು. ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ಬರೆಯುವ ನಿಮಗಾಗಿ ಅನುಭವಿ ಶಿಕ್ಷಕರು ನೀಡಿರುವ ಮಾರ್ಗದರ್ಶನ ದಿಕ್ಸೂಚಿಯಲ್ಲಿ..

ಪುಟ-5

ಇಂದಿನ ಪಾಡ್‌ಕಾಸ್ಟ್ ವಿಶೇಷ

ಪ್ರಜಾವಾಣಿ ಕನ್ನಡ ಧ್ವನಿ
ಝಣ ಝಣ ಕಾಂಚಾಣ

ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಚಿನಕುರಳಿ

ಪ್ರಕಾಶ್ ಶೆಟ್ಟಿ



ಆಡಳಿತ–ವಿಪಕ್ಷ ಟೂಲ್‌ಕಿಟ್ ಕಚ್ಚಾಟ

ಭಾರತದ ವರ್ಚಸ್ಸಿಗೆ ಧಕ್ಕೆ ತರಲು ಯತ್ನ: ಬಿಜೆಪಿ ಆರೋಪಕ್ಕೆ ಕಾಂಗ್ರೆಸ್ ಆಕ್ರೋಶ

ನವದೆಹಲಿ (ಪಿಟಿಐ): ಕೊರೊನಾ ರೂಪಾಂತರ ಸೋಂಕು ಒಂದೆಡೆ ದೇಶವನ್ನು ಬಾಧಿಸುತ್ತಿದ್ದರೆ, ಇನ್ನೊಂದೆಡೆ ಆಡಳಿತಾರೂಢ ಬಿಜೆಪಿ ಮತ್ತು ವಿರೋಧ ಪಕ್ಷ ಕಾಂಗ್ರೆಸ್ ನಡುವೆ ಕೆಸರೆರಚಾಟಕ್ಕೆ ವಸ್ತುವಾಗಿದೆ. ಟ್ವಿಟರ್ ಸಾಮಾಜಿಕ ಜಾಲತಾಣದಲ್ಲಿ ಪರಸ್ಪರರ ವಿರುದ್ಧ ಈ ಪಕ್ಷಗಳ ಮುಖಂಡರು, ವಕ್ತಾರರು ವಾಗ್ದಾಳಿ ನಡೆಸಿದ್ದಾರೆ.

'ಕಾಂಗ್ರೆಸ್ ಪಕ್ಷ ರೂಪಾಂತರ ಸೋಂಕನ್ನು 'ಇಂಡಿಯಾ ತಳಿ' ಮತ್ತು 'ಮೋದಿ ತಳಿ' ಎಂದು ಕರೆದಿದ್ದು, ಈ ಮೂಲಕ ದೇಶ ಮತ್ತು ಪ್ರಧಾನಿ ಮೋದಿ ಅವರ ಹೆಸರಿಗೆ ಕಳಂಕ ತರಲು ಯತ್ನಿಸುತ್ತಿದೆ' ಎಂದು ಬಿಜೆಪಿ ಆರೋಪಿಸಿದೆ. #ಕಾಂಗ್ರೆಸ್‌ಟೂಲ್‌ಕಿಟ್‌ಎಕ್ಸ್‌ಪೋಸ್ಡ್ ಹ್ಯಾಷ್‌ಟ್ಯಾಗ್ ಬಳಸಿ ಟ್ವಿಟರ್‌ನಲ್ಲಿ ದಾಳಿ ನಡೆಸಿತು.

'ಪ್ರಧಾನಿ ಮೋದಿ ವರ್ಚಸ್ಸಿಗೆ ಧಕ್ಕೆ ತರಲು ಕಾಂಗ್ರೆಸ್ ಕೋವಿಡ್ ಪಿಡುಗನ್ನು ಒಂದು 'ಅವಕಾಶ'ವಾಗಿ ಬಳಸಿಕೊಳ್ಳುತ್ತಿದೆ. ಕಾಂಗ್ರೆಸ್‌ನ ಪ್ರಚಾರ ಕಾರ್ಯತಂತ್ರ ಎನ್ನಲಾದ ಪತ್ರಗಳನ್ನು ಪ್ರದರ್ಶಿಸಿ ಇದು ಆ ಪಕ್ಷದ ಟೂಲ್‌ಕಿಟ್ ಆಗಿದೆ. ವಿದೇಶಿ ಪತ್ರಕರ್ತರ ನೆರವಿನಿಂದ ದೇಶದ ಹೆಸರಿಗೆ ಕಪ್ಪುಚುಕ್ಕೆ ತರುವ ಯಾವುದೇ ಅವಕಾಶವನ್ನು ಕಾಂಗ್ರೆಸ್ ಕೈಬಿಡುತ್ತಿಲ್ಲ' ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಅವರು ಟೀಕಿಸಿದರು.

'ರೂಪಾಂತರ ಸೋಂಕಿಗೆ ಭಾರತದ ಹೆಸರು ನೀಡಲಾಗದು ಎಂದು ವಿಶ್ವ ಆರೋಗ್ಯ ಸಂಸ್ಥೆ ಹೇಳಿದೆ. ಆದರೂ ಕಾಂಗ್ರೆಸ್ ಇಂಥ ಯತ್ನ ನಡೆಸಿದೆ. ಅಲ್ಲದೆ ಕುಂಭಮೇಳವನ್ನು 'ತ್ವರಿತವಾಗಿ ಸೋಂಕು ಹರಡಿದ ಕುಂಭ' ಎಂದು ಕರೆಯಲು ಸೂಚಿಸಿದೆ' ಎಂದು ಆರೋಪಿಸಿದರು.

ದೂರು ನೀಡಲು ಕಾಂಗ್ರೆಸ್ ನಿರ್ಧಾರ: ಕಾಂಗ್ರೆಸ್ ಇದನ್ನು ಸಾರಾಸಗಟು ಅಲ್ಲಗಳೆದಿದೆ. 'ನಕಲಿ ಟೂಲ್ ಕಿಟ್ ಮೂಲಕ ಕಾಂಗ್ರೆಸ್ ವರ್ಚಸ್ಸು ಹಾಳುಮಾಡಲು ಬಿಜೆಪಿ ಯತ್ನಿಸುತ್ತಿದೆ. ಈ ಸಂಬಂಧ ಬಿಜೆಪಿ ಅಧ್ಯಕ್ಷ ಜೆ.ಪಿ. ನಡ್ಡಾ ಮತ್ತು ವಕ್ತಾರ ಸಂಬಿತ್ ಪಾತ್ರಾ ವಿರುದ್ಧ ಪೊಲೀಸರಿಗೆ ದೂರು ನೀಡಲಾಗುವುದು' ಎಂದಿದೆ.

ಎಐಸಿಸಿ ಸಂಶೋಧನಾ ವಿಭಾಗದ ಮುಖ್ಯಸ್ಥ ರಾಜೀವ್ ಗೌಡ, 'ಬಿಜೆಪಿ ನಕಲಿ ಟೂಲ್‌ಕಿಟ್ ಮೂಲಕ ಅಪಪ್ರಚಾರ ಮಾಡುತ್ತಿದೆ. ಪಿಡುಗಿನ ಈ ಸಮಯದಲ್ಲಿ ಜನರಿಗೆ ನೆರವಾಗುವುದನ್ನು ಬಿಟ್ಟು, ನಾಚಿಕೆಯಿಲ್ಲದೇ ಸುಳ್ಳು ಆರೋಪಗಳನ್ನು ಮಾಡುತ್ತಿದೆ' ಎಂದು ಟ್ವೀಟ್ ಮಾಡಿದ್ದಾರೆ.

ಇನ್ನೊಂದೆಡೆ ಕಾಂಗ್ರೆಸ್ ವಕ್ತಾರರಾದ ಸುಪ್ರಿಯಾ ಶ್ರೀನಾಥೆ ವರ್ಚುವಲ್ ಸುದ್ದಿಗೋಷ್ಠಿಯಲ್ಲಿ, 'ಬಿಜೆಪಿ ವಕ್ತಾರರು ಹೇಳಿರುವಂತೆ ಯಾವುದೇ ಟೂಲ್‌ಕಿಟ್ ಇಲ್ಲ. ಸುಳ್ಳು ಆರೋಪಕ್ಕಾಗಿ ಬಿಜೆಪಿ ವಕ್ತಾರರ ವಿರುದ್ಧ ಕಾನೂನು ಕ್ರಮ ಜರುಗಿಸಲಾಗುವುದು' ಎಂದು ತಿಳಿಸಿದ್ದಾರೆ.

ಪಕ್ಷದ ಮುಖ್ಯ ವಕ್ತಾರ ರಣದೀಪ್ ಸುರ್ಜೇವಾಲಾ ಅವರು, 'ಬಿಜೆಪಿಯೇ ನಕಲಿ ಟೂಲ್ ಕಿಟ್ ಅನ್ನು ರೂಪಿಸಿದೆ. ಆ ಪಕ್ಷದ ಎಲ್ಲ ನಕಲಿ ಭಕ್ತರು ಮತ್ತು ಮಾಧ್ಯಮದಲ್ಲಿ ಇರುವ ಗೆಳೆಯರು ಒಂದು ಕಾರ್ಯಸೂಚಿಯೊಂದಿಗೆ ಸಕ್ರಿಯರಾಗಿದ್ದಾರೆ' ಎಂದಿದ್ದಾರೆ.

ಜೆ.ಪಿ.ನಡ್ಡಾ ಮತ್ತು ವಕ್ತಾರರ ವಿರುದ್ಧ ಪ್ರಕರಣ ದಾಖಲಿಸುತ್ತೇವೆ. ಅವರ ಕುಕೃತ್ಯಗಳನ್ನು ಹೆಚ್ಚು ದಿನ ಮುಚ್ಚಿಡಲಾಗದು ಎಂದು ಪ್ರತಿಪಾದಿಸಿದರು.

ಬಿಜೆಪಿ ಮತ್ತು ಸರ್ಕಾರದ ವಿರುದ್ಧ ದಾಳಿಗೆ ಟ್ವಿಟರ್ ವೇದಿಕೆಯನ್ನು ಕಾಂಗ್ರೆಸ್ ಕೂಡ ಬಳಸಿಕೊಂಡಿದ್ದು, ಈಗಾಗಲೇ #ಜನ್‌ಕೀ ಬಾತ್, #ಜನ್ ಲೂಟ್ ಸರ್ಕಾರ್, #ಅರೆಸ್ಟ್ ಮೀ ಟೂ ಸೇರಿ ವಿವಿಧ ಹ್ಯಾಷ್‌ಟ್ಯಾಗ್‌ಗಳ ಮೂಲಕ ಸರ್ಕಾರದ ಕಾರ್ಯವೈಖರಿಯನ್ನು ಟೀಕಿಸುತ್ತಿದೆ.

'ತೌತೆ': 33 ಸಾವು, ಸಾವಿರಾರು ಮನೆಗಳಿಗೆ ಹಾನಿ

ಮಹಾರಾಷ್ಟ್ರ, ಗುಜರಾತ್ ತತ್ತರ

ಪ್ರಜಾವಾಣಿ ವಾರ್ತೆ

ಮುಂಬೈ/ಅಹಮದಾಬಾದ್ (ಪಿಟಿಐ, ಎಎಫ್‌ಪಿ): ತೌತೆ ಚಂಡಮಾರುತವು ಮಹಾರಾಷ್ಟ್ರ ಮತ್ತು ಗುಜರಾತ್‌ನಲ್ಲಿ ಭಾರಿ ಅನಾಹುತ ಸೃಷ್ಟಿಸಿದೆ. ಎರಡೂ ರಾಜ್ಯಗಳಲ್ಲಿ ಒಟ್ಟು 33 ಮಂದಿ ಮೃತಪಟ್ಟಿದ್ದಾರೆ. 90ಕ್ಕೂ ಹೆಚ್ಚು ಜನರು ನಾಪತ್ತೆಯಾಗಿದ್ದಾರೆ.

ಮಂಗಳವಾರ, ಮಹಾರಾಷ್ಟ್ರ ಕರಾವಳಿಯಲ್ಲಿ ಚಂಡಮಾರುತದ ಪರಿಣಾಮ ಗಾಳಿಗೆ ಎದ್ದ ಸಮುದ್ರದ ದೈತ್ಯ ಅಲೆಗಳು ಗೇಟ್‌ವೇ ಆಫ್ ಇಂಡಿಯಾ, ಚೌಪಾಟಿ ಮತ್ತು ಮೆರಿನ್ ಡ್ರೈವ್ ಪ್ರದೇಶದಲ್ಲಿ ಟನ್‌ಗಟ್ಟಲೆ ಕಸವನ್ನು ತಂದುಹಾಕಿವೆ. ಇದರ ವಿಡಿಯೊಗಳು ವೈರಲ್ ಆಗಿವೆ. ಮುಂಜಾಗ್ರತಾ ಕ್ರಮ ತೆಗೆದುಕೊಂಡಿದ್ದರಿಂದ ಹೆಚ್ಚಿನ ಅನಾಹುತ ಸಂಭವಿಸಿಲ್ಲ ಎಂದು ಸ್ಥಳಕ್ಕೆ ಭೇಟಿ ನೀಡಿದ ಮುಂಬೈ ಮೇಯರ್ ಕಿಶೋರಿ ಪೆಡ್ನೇಕರ್ ತಿಳಿಸಿದ್ದಾರೆ.

ಗೇಟ್‌ವೇ ಆಫ್ ಇಂಡಿಯಾ ಬಳಿ ಸಮುದ್ರಕ್ಕೆ ಮುಖಮಾಡಿರುವ ಸುರಕ್ಷತಾ ಗೋಡೆ ಮತ್ತು ಕಬ್ಬಿಣದ ಗೇಟ್‌ಗಳನ್ನು ಚಂಡಮಾರುತ ಹಾನಿಗೊಳಿಸಿದೆ. ಗಾಳಿಯ ಹೊಡೆತಕ್ಕೆ ಸುತ್ತಮುತ್ತಲಿನ ಕೆಲವು ಕಲ್ಲುಗಳು ಸಹ ಸ್ಥಳಾಂತರಗೊಂಡಿವೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ. ಐತಿಹಾಸಿಕ ಸ್ಮಾರಕದ ಮುಖ್ಯ ರಚನೆಗೆ ಯಾವುದೇ ಹಾನಿಯಾಗಿಲ್ಲ. ಆದರೆ ಅದರ ಸಮೀಪವಿರುವ ಫುಟ್‌ಪಾತ್‌ನ ಒಂದು ಭಾಗ ಹಾನಿಗೊಂಡಿದೆ.

ನಿರೀಕ್ಷೆಯಂತೆ, ಸೌರಾಷ್ಟ್ರ ಕರಾವಳಿಯ ಮೂಲಕ ತೌತೆ ಚಂಡಮಾರುತವು ಸೋಮವಾರ ಮಧ್ಯರಾತ್ರಿ ಗುಜರಾತ್ ಪ್ರವೇಶಿಸಿತು. ನೆಲಪ್ರವೇಶದ ನಂತರ ಚಂಡಮಾರುತದ ತೀವ್ರತೆ ಕಡಿಮೆಯಾಗಿದೆ. ನೆಲ ಪ್ರವೇಶಿಸುವಾಗ ಗಾಳಿಯು ಪ್ರತಿಗಂಟೆಗೆ 150-170 ಕಿ.ಮೀ. ವೇಗದಲ್ಲಿ ಬೀಸುತ್ತಿತ್ತು. ಮಂಗಳವಾರ ಮಧ್ಯಾಹ್ನದ ವೇಳೆಗೆ 120 ಕಿ.ಮೀ. ವೇಗಕ್ಕೆ ಕುಸಿದಿದೆ ಎಂದು ಹವಾಮಾನ ಇಲಾಖೆ ಹೇಳಿದೆ.

ತೌತೆ ಚಂಡಮಾರುತವು ಇತ್ತೀಚಿನ ದಶಕಗಳಲ್ಲಿಯೇ ಅತ್ಯಂತ ತೀವ್ರವಾದುದಾಗಿತ್ತು. ಆದರೆ, ಅತ್ಯುತ್ತಮ ಮುನ್ಸೂಚನೆ ವ್ಯವಸ್ಥೆಯಿಂದಾಗಿ ಅಪಾಯದ ಪ್ರದೇಶದಲ್ಲಿದ್ದ ಸುಮಾರು ಎರಡು ಲಕ್ಷ ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರಿಸಲಾಗಿತ್ತು. ಹಾಗಾಗಿ, ಸಾವು ನೋವಿನ ಪ್ರಮಾಣ ಗಣನೀಯವಾಗಿ ತಗ್ಗಿದೆ.



ಹಾನಿ ಗುಜರಾತ್‌ನ ಗಿರ್ ಸೋಮನಾಥ್‌ನಲ್ಲಿ ತೌತೆ ಚಂಡಮಾರುತದ ಪರಿಣಾಮ ಅರಬ್ಬಿ ಸಮುದ್ರದ ಬೃಹತ್ ಅಲೆಗಳ ಹೊಡೆತಕ್ಕೆಸಿಲುಕಿ ಹಾನಿಗೀಡಾದ ದೋಣಿಯೊಂದನ್ನು ಮೀನುಗಾರರು ಮಂಗಳವಾರ ಪರಿಶೀಲಿಸಿದರು –ಪಿಟಿಐ ಚಿತ್ರ


ಎಲ್ಲ ಹೊಸ ಮುಖಗಳು: ವಿಜಯನ್ ಅಳಿಯನಿಗೂ ಸಚಿವ ಹುದ್ದೆ

ಕೇರಳ ಸಂಪುಟದಲ್ಲಿ ಶೈಲಜಾಗೆ ಸ್ಥಾನ ಇಲ್ಲ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಕೋವಿಡ್ ನಿರ್ವಹಣೆ ಕಾರ್ಯಕ್ಕೆ ಜಾಗತಿಕ ಮೆಚ್ಚುಗೆಗೆ ಪಾತ್ರರಾಗಿದ್ದ ಆರೋಗ್ಯ ಸಚಿವೆ ಕೆ.ಕೆ. ಶೈಲಜಾ ಅವರಿಗೆ ಪಿಣರಾಯಿ ವಿಜಯನ್ ನೇತೃತ್ವದ ಸತತ ಎರಡನೇ ಅವಧಿಯ ಕೇರಳ ಸಚಿವ ಸಂಪುಟದಲ್ಲಿ ಸ್ಥಾನ ಸಿಕ್ಕಿಲ್ಲ. ವಿಜಯನ್ ಅವರನ್ನು ಬಿಟ್ಟು, ಮೊದಲ ಅವಧಿಯಲ್ಲಿ ಸಚಿವರಾಗಿದ್ದ ಯಾರಿಗೂ ಎರಡನೇ ಅವಧಿಯ ಸಂಪುಟದಲ್ಲಿ ಅವಕಾಶ ಕೊಟ್ಟಿಲ್ಲ.

ವಿಜಯನ್ ಅವರ ಅಳಿಯ, ಡಿವೈಎಫ್‌ಐ ರಾಷ್ಟ್ರೀಯ ಅಧ್ಯಕ್ಷ ಮೊಹಮ್ಮದ್ ರಿಯಾಜ್, ಸಿಪಿಎಂ ರಾಜ್ಯ ಕಾರ್ಯದರ್ಶಿ (ಹಂಗಾಮಿ) ಎ. ವಿಜಯರಾಘವನ್ ಅವರ ಹೆಂಡತಿ ಆರ್. ಬಿಂದು ಸಂಪುಟದಲ್ಲಿ ಸ್ಥಾನ ಪಡೆಯಲಿರುವ ಹೊಸಬರಲ್ಲಿ ಸೇರಿದ್ದಾರೆ.



ಶೈಲಜಾ

ಹೊಸ ಮುಖಗಳು ಮತ್ತು ಯುವ ಜನರನ್ನು ಮುನ್ನೆಲೆಗೆ ತರಲು ಪಕ್ಷವು ಬಯಸಿದೆ. ಹಾಗಾಗಿಯೇ ಹೊಸಬರಿಗೆ ಸಚಿವ ಸ್ಥಾನ ನೀಡಲಾಗಿದೆ ಎಂದು ಪಕ್ಷದ ಮುಖಂಡರು ಹೇಳಿದ್ದಾರೆ.

ಆರೋಗ್ಯ ಖಾತೆಯನ್ನು ಅತ್ಯುತ್ತಮವಾಗಿ ನಿರ್ವಹಿಸಿದ್ದ ಶೈಲಜಾ ಅವರಿಗೆ ಸಚಿವ ಸ್ಥಾನ ನೀಡಬೇಕು ಎಂದು ಪಕ್ಷದ ಒಂದು ವರ್ಗವು ಬಲವಾಗಿ ಪ್ರತಿಪಾದಿಸಿತ್ತು. ಅವರು ಮುಖ್ಯಮಂತ್ರಿಯಾಗುವ ಸಾಧ್ಯತೆ ಇದೆ ಎಂದೂ ಚುನಾವಣೆಗೆ ಮುನ್ನ ನಡೆದ ಕೆಲವು ಸಮೀಕ್ಷೆಗಳು ಅಂದಾಜಿಸಿದ್ದವು. ಎಲ್ಲ ಹೊಸ ಮುಖಗಳೇ ಬೇಕು ಎಂಬ ಸಲಹೆಯನ್ನು ವಿಜಯನ್ ಮುಂದಿಟ್ಟಿದ್ದರು. ಸತತ ಎರಡನೇ ಅವಧಿಯಲ್ಲಿ ದೊರೆತ ಭಾರಿ ಗೆಲುವಿನಿಂದಾಗಿ ವಿಜಯನ್ ಅವರು ಸಿಪಿಎಂನ ಪ್ರಶ್ನಾತೀತ ನಾಯಕರಾಗಿದ್ದಾರೆ. ಹಾಗಾಗಿ, ಭಿನ್ನಮತದ ಧ್ವನಿಗೆ ಹೆಚ್ಚು ಮಹತ್ವ ಲಭಿಸುವುದಿಲ್ಲ ಎಂದು ಪಕ್ಷದ ಮೂಲಗಳು ಹೇಳಿವೆ.

ಶೈಲಜಾ ಅವರಿಗೆ ಪಕ್ಷದ ಸಚೇತಕಿ ಹುದ್ದೆ ನೀಡಲು ನಿರ್ಧರಿಸಲಾಗಿದೆ. ಪಕ್ಷದ ನಿರ್ಧಾರಕ್ಕೆ ಬದ್ಧ ಎಂದು ಅವರು ಹೇಳಿದ್ದಾರೆ.

8ನೇ ಪುಟ ನೋಡಿ

ಹಂಪಿ: ನೂರು ಜನ ಮಾರ್ಗದರ್ಶಿಗಳ ಖಾತೆಗೆ ತಲಾ ₹10,000 ಜಮೆ

ಗೈಡ್‌ಗಳಿಗೆ ಸುಧಾಮೂರ್ತಿ ನೆರವು

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಕೆಲಸವಿಲ್ಲದೆ ಸಂಕಷ್ಟದಲ್ಲಿ ದಿನ ದೂಡುತ್ತಿದ್ದ ವಿಶ್ವಪ್ರಸಿದ್ಧ ಹಂಪಿಯ ಗೈಡ್‌ಗಳಿಗೆ ಇನ್ಫೊಸಿಸ್ ಫೌಂಡೇಷನ್ ಮುಖ್ಯಸ್ಥೆ ಸುಧಾ ಮೂರ್ತಿ ಅವರು ಆರ್ಥಿಕ ನೆರವು ನೀಡಿದ್ದಾರೆ.



ಸುಧಾಮೂರ್ತಿ

ನೂರು ಗೈಡ್‌ಗಳ ಖಾತೆಗೆ ನೇರವಾಗಿ ತಲಾ ₹10,000 ಹಣ ವರ್ಗಾವಣೆ ಮಾಡಿದ್ದಾರೆ. ಹೋದ ವರ್ಷ ಕೋವಿಡ್‌ನಿಂದ ಹಂಪಿಯಲ್ಲಿ ಪ್ರವಾಸೋದ್ಯಮ ಚಟುವಟಿಕೆಗಳು ಸ್ಥಗಿತಗೊಂಡಾಗಲೂ ಅವರು ಪ್ರವಾಸಿ ಮಾರ್ಗದರ್ಶಿಗಳ ನೆರವಿಗೆ ಧಾವಿಸಿದ್ದರು.

ಹಿಂದಿನ ವರ್ಷ ಕೋವಿಡ್ ಲಾಕ್‌ಡೌನ್ ಘೋಷಿಸಿದಾಗ ಗೈಡ್‌ಗಳು ಕೆಲಸ ಕಳೆದುಕೊಂಡಿದ್ದರು. ಕೋವಿಡ್ ಪ್ರಕರಣಗಳ ಸಂಖ್ಯೆ ತಗ್ಗಿದಾಗ ಪ್ರವಾಸೋದ್ಯಮ ಚೇತರಿಕೆ ಕಾಣಲಾರಂಭಿಸಿತು. ಡಿಸೆಂಬರ್, ಜನವರಿಯಲ್ಲಿ ಪ್ರವಾಸಿಗರು ಹಂಪಿಗೆ ಬರಲಾರಂಭಿಸಿದರು. ಫೆಬ್ರುವರಿಯಲ್ಲಿ ಬಿಸಿಲು ಹೆಚ್ಚಾಗುತ್ತಿದ್ದಂತೆ ಪ್ರವಾಸಿಗರ ಸಂಖ್ಯೆ ಇಳಿಮುಖಗೊಂಡಿತು. ನಂತರದ ದಿನಗಳಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ ಹೆಚ್ಚಾಗಿದ್ದರಿಂದ ಹಂಪಿಗೆ ಪ್ರವಾಸಿಗರ ಭೇಟಿ ನಿರ್ಬಂಧಿಸಲಾಯಿತು. ಗೈಡ್‌ಗಳು ಕೆಲಸವಿಲ್ಲದೆ ಕೂರುವಂತಾಯಿತು.

ಸರ್ಕಾರ ಮಾಡಬೇಕಾದ ಕೆಲಸ ಸುಧಾಮೂರ್ತಿ ಅವರು ಮಾಡಿದ್ದಾರೆ. ಸಣ್ಣ ಸಹಾಯವಾದರೂ ನಮ್ಮ ಮಟ್ಟಿಗೆ ಇದು ಬಹಳ ದೊಡ್ಡದು

ಗೋಪಾಲ್, ಹಂಪಿ ಗೈಡ್



ಅನೇಕರು ಉದ್ಯೋಗ ಖಾತ್ರಿ ಯೋಜನೆಯಡಿ ಕೆಲಸಕ್ಕೆ ಸೇರಿದರು. ಮತ್ತೆ ಕೆಲವರು ತರಕಾರಿ, ಹಣ್ಣು ಮಾರಾಟ ಮಾಡಿ ಬದುಕು ಕಟ್ಟಿಕೊಳ್ಳಲು ಮುಂದಾದರು. ಆದರೆ, ಹೆಚ್ಚಿನವರಿಗೆ ಗೈಡ್ ಕೆಲಸ ಬಿಟ್ಟರೆ ಬೇರೆ ಕೆಲಸ ಗೊತ್ತಿಲ್ಲದೆ ಅನಿವಾರ್ಯವಾಗಿ ಮನೆಯಲ್ಲಿ ಕೂತಿದ್ದರು. ಅವರಿಗೆ ಈ ನೆರವು ಈಗ ಆಸರೆಯಾಗಿದೆ.

'ನಮ್ಮಲ್ಲಿ ಬಹುತೇಕ ಮಂದಿ ಆಯಾ ದಿನ ಗೈಡ್ ಮಾಡಿ ಸಿಗುವ ಹಣದಿಂದಲೇ ಜೀವನ ಸಾಗಿಸುತ್ತಾರೆ. ಈಗ ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಒಳಗಾಗಿದ್ದಾರೆ. ಸುಧಾಮೂರ್ತಿ ಅವರು ನೆರವು ನೀಡಿರುವುದರಿಂದ 2-3 ತಿಂಗಳು ಹೇಗೋ ಜೀವನ ನಡೆಸಬಹುದು' ಎಂದು ಗೈಡ್‌ಗಳಾದ ಗೋಪಾಲ್, ವಿಶ್ವನಾಥ ಮಾಳಗಿ ತಿಳಿಸಿದ್ದಾರೆ.

'ಸುಧಾಮೂರ್ತಿ ಅವರಿಗೆ ಕಲೆ, ಸಾಹಿತ್ಯ, ಸಂಸ್ಕೃತಿ ಬಗ್ಗೆ ವಿಶೇಷ ಒಲವು ಇದೆ. ಗೈಡ್‌ಗಳನ್ನು ಅದರ ಭಾಗವೆಂದು ಪರಿಗಣಿಸಿ ನೆರವು ನೀಡಿದ್ದಾರೆ. ನಮಗೆ ಕೊಟ್ಟಿರುವ ಆರ್ಥಿಕ ನೆರವಿನಲ್ಲಿ ಸ್ವಲ್ಪ ಹಣ ತೆಗೆದಿಟ್ಟು, ಸರ್ಕಾರಿ ಶಾಲೆಯ ಬಡ ಮಕ್ಕಳಿಗೆ ಪಠ್ಯಪುಸ್ತಕ, ನೋಟ್ ಬುಕ್ ವಿತರಿಸಲು ಯೋಚಿಸಲಾಗಿದೆ' ಎಂದು ಹೇಳಿದ್ದಾರೆ.

'ಸರ್ಕಾರವು ಬೀದಿ ಬದಿ ವ್ಯಾಪಾರಿಗಳು, ಆಟೊ, ಕ್ಯಾಬ್ ಚಾಲಕರಿಗೆ ಆರ್ಥಿಕ ನೆರವು ನೀಡಿದೆ. ಆದರೆ, ಅವರಿಗೆ ರಾಜ್ಯದಲ್ಲಿರುವ ನೂರಾರು ಗೈಡ್‌ಗಳೇಕೆ ಕಾಣಿಸುತ್ತಿಲ್ಲ? ಪ್ರವಾಸೋದ್ಯಮ ಬೆಳವಣಿಗೆಯಲ್ಲಿ ಗೈಡ್‌ಗಳ ಪಾತ್ರವೂ ಮುಖ್ಯ. ಆದರೆ, ಸರ್ಕಾರ ನಮ್ಮನ್ನು ಪರಿಗಣಿಸಿಯೇ ಇಲ್ಲ' ಎಂದು ಗೈಡ್ ಹುಸೇನ್ ಅಳಲು ತೋಡಿಕೊಂಡಿದ್ದಾರೆ.

ಈ ಸಂಬಂಧ ಮಾಹಿತಿಗೆ ಸುಧಾ ಮೂರ್ತಿ ಅವರನ್ನು ಸಂಪರ್ಕಿಸಿದಾಗ ಅವರು ಲಭ್ಯರಾಗಲಿಲ್ಲ.

'ಕೋವಿಡ್: ಅನಾಥ ಮಕ್ಕಳ ಪೋಷಣೆಗೆ ವ್ಯವಸ್ಥೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್‌ನಿಂದಾಗಿ ತಂದೆ-ತಾಯಿಯನ್ನು ಕಳೆದುಕೊಂಡು ಅನಾಥರಾದ ಮಕ್ಕಳ ಪೋಷಣೆಗೆ ರಾಜ್ಯ ಸರ್ಕಾರ ಸಿದ್ಧವಿದ್ದು, ಅವರ ಪಾಲನೆ, ಪೋಷಣೆ ಸೇರಿ ಎಲ್ಲ ರೀತಿಯ ನೆರವು ನೀಡಲಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದ್ದಾರೆ.



ಶಶಿಕಲಾ ಜೊಲ್ಲೆ

'ಅನಾಥರಾದ ಮಕ್ಕಳ ಸಂಖ್ಯೆಯ ಬಗ್ಗೆ ಮಾಹಿತಿ ಪಡೆಯಲು ಸೇವಾ ಸಂಸ್ಥೆಗಳ ನೆರವನ್ನು ಕೇಳಿದ್ದೇವೆ. ಅವರು ಮಕ್ಕಳ ಬಗ್ಗೆ ಮಾಹಿತಿ ನೀಡಬೇಕೇ ಹೊರತು, ಸಾಕುವ ಜವಾಬ್ದಾರಿ ಹೊರುವಂತಿಲ್ಲ. ಸರ್ಕಾರವೇ ಆ ವ್ಯವಸ್ಥೆ ಮಾಡುತ್ತದೆ' ಎಂದು ಅವರು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಈ ಸಂಬಂಧ ಮಾಹಿತಿ ಕೇಳಲು ದಿನಕ್ಕೆ ಕನಿಷ್ಠ 60 ಕರೆಗಳು ಬರುತ್ತಿವೆ. ಆದರೆ, ಮಕ್ಕಳನ್ನು ಸರ್ಕಾರದ ಸುಪರ್ದಿಗೆ ನೀಡಲು ಜನರು ಮುಂದೆ ಬರುತ್ತಿಲ್ಲ. ಮಂಡ್ಯ ಮತ್ತು ಚಾಮರಾಜನಗರದ ಎರಡು ಪ್ರಕರಣಗಳಲ್ಲಿ ಮುಂದೆ ಬಂದಿದ್ದಾರೆ ಎಂದು ಅವರು ಹೇಳಿದರು.

ಅನಾಥ ಮಕ್ಕಳನ್ನು ಗುರುತಿಸಿ ಪುನರ್ವಸತಿಗಾಗಿ ಸರ್ಕಾರ 1098 ಎಂಬ ಸಹಾಯವಾಣಿ ಆರಂಭಿಸಿದೆ. ಐಎಎಸ್ ಅಧಿಕಾರಿ ಮೋಹನ್ ರಾಜ್ ಅವರನ್ನು ನೋಡಲ್ ಅಧಿಕಾರಿಯನ್ನಾಗಿ ನೇಮಿಸಲಾಗಿದೆ. ಇಂಥ ಮಕ್ಕಳಿಗೆ ಕೌಟುಂಬಿಕ ವಾತಾವರಣ ಒದಗಿಸುವುದು ಸರ್ಕಾರದ ಆದ್ಯ ಕರ್ತವ್ಯ ಎಂದು ಜೊಲ್ಲೆ ತಿಳಿಸಿದರು.

ಅಲ್ಲದೆ, ಅಪ್ಪ-ಅಮ್ಮ ಇಬ್ಬರೂ ಕೋವಿಡ್‌ನಿಂದ ಆಸ್ಪತ್ರೆಗೆ ದಾಖಲಾಗಿದ್ದರೆ ಅವರು ಗುಣಮುಖರಾಗಿ ಬರುವವರೆಗೆ ಅವರ ಮಕ್ಕಳ ಪಾಲನೆ ಪೋಷಣೆಗೆ ಸರ್ಕಾರ ವಸತಿ ಶಾಲೆಗಳಲ್ಲಿ ವ್ಯವಸ್ಥೆ ಮಾಡಲಿದೆ. 18 ವರ್ಷದೊಳಗಿನವರು ಇದರ ಪ್ರಯೋಜನ ಪಡೆಯಬಹುದು ಎಂದೂ ತಿಳಿಸಿದರು.

ಮಕ್ಕಳ ಆರೈಕೆಗೆ ವಿಶೇಷ ಕೇಂದ್ರ: ಆರು ವರ್ಷದೊಳಗಿನ ಮಕ್ಕಳ ಆರೈಕೆಗೆ ವಿಶೇಷ ಕ್ವಾರಂಟೈನ್ ಸೌಲಭ್ಯ ಮತ್ತು ದತ್ತು ಸಂಸ್ಥೆಗಳನ್ನು ಗೊತ್ತುಪಡಿಸಲಾಗುವುದು. 7 ರಿಂದ 18 ವರ್ಷದೊಳಗಿನ ಮಕ್ಕಳಿಗೆ ಆರೈಕೆಗೆ ವಿಶೇಷ ಕೇಂದ್ರ, 18 ವರ್ಷದವರೆಗಿನ ಮಕ್ಕಳಿಗೆ ವಸತಿ ಶಾಲೆ ಮೀಸಲಿಡಲು ತೀರ್ಮಾನಿಸಲಾಗಿದೆ.

ಯಾವುದೇ ಲಕ್ಷಣಗಳಿಲ್ಲದ ಕೋವಿಡ್ ಪೀಡಿತ ಮಕ್ಕಳಿಗೆ ವಿಶೇಷ ಪಿಡಿಯಾಟ್ರಿಕ್ ಕೋವಿಡ್ ಕೇರ್ ಸೆಂಟರ್‌ಗಳಲ್ಲಿ (ಸಿಸಿಸಿ) ಚಿಕಿತ್ಸೆ ನೀಡಲು ಅನುಕೂಲವಾಗುವಂತೆ 30 ಜಿಲ್ಲೆಗಳಲ್ಲಿ ಪ್ರತ್ಯೇಕ ಕೋವಿಡ್ ಕೇರ್ ಸೆಂಟರ್ ಸ್ಥಾಪಿಸಲಾಗುವುದು. ಲಕ್ಷಣ ಇರುವ ಕೋವಿಡ್ ಸೋಂಕಿತ ಮಕ್ಕಳಿಗೆ ತಾಲ್ಲೂಕು ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ಮಕ್ಕಳ ಕೋವಿಡ್ ಕೇರ್ ಸೆಂಟರ್‌ನಲ್ಲಿ ವಿಶೇಷ ಆರೈಕೆ ಮತ್ತು ಇಲಾಖೆಯಿಂದ ವಿಶೇಷ ಆರೈಕೆದಾರರ ನೇಮಕ ಮಾಡಲಾಗುವುದು ಎಂದು ಜೊಲ್ಲೆ ತಿಳಿಸಿದರು.

ಯಾರಿಗೆಲ್ಲ ಸಿಗಲಿದೆ ಸೌಲಭ್ಯ: ಕೋವಿಡ್‌ನಿಂದ ತಂದೆ- ತಾಯಿ ಮೃತಪಟ್ಟಿದ್ದರೆ, ತಂದೆ, ತಾಯಿ ಇಬ್ಬರೂ ಆಸ್ಪತ್ರೆಗೆ ದಾಖಲಾಗಿದ್ದರೆ, ಕೋವಿಡ್‌ನಿಂದ ಒಬ್ಬರು ಮೃತಪಟ್ಟು, ಇನ್ನೊಬ್ಬರು ಆಸ್ಪತ್ರೆಗೆ ದಾಖಲಾಗಿದ್ದರೆ, ಒಬ್ಬರು ಮೃತರಾಗಿ ಇನ್ನೊಬ್ಬರು ಬೇರೆ ಪ್ರದೇಶದಲ್ಲಿ ವಾಸವಾಗಿದ್ದರೆ ಅಂತಹವರ ಮಕ್ಕಳಿಗೆ ಅನಾಥ ಭಾವನೆ ಬರಬಾರದು ಎಂಬ ಕಾರಣಕ್ಕೆ ಸರ್ಕಾರ ನೆರವಿಗೆ ಬರಲಿದೆ ಎಂದು ಸಚಿವೆ ಶಶಿಕಲಾ ಜೊಲ್ಲೆ ತಿಳಿಸಿದರು.

ಮಕ್ಕಳ ಮೇಲೆ ಲಸಿಕೆ ಪ್ರಯೋಗಕ್ಕೆ ಶೀಘ್ರ ಚಾಲನೆ

ನವದೆಹಲಿ: 'ಮಕ್ಕಳ ಮೇಲೆ ಕೋವ್ಯಾಕ್ಸಿನ್ ಲಸಿಕೆಯ ಮೊದಲ ಪ್ರಯೋಗವು 10-12 ದಿನದಲ್ಲಿ ಆರಂಭವಾಗಲಿದೆ' ಎಂದು ನೀತಿ ಆಯೋಗದ ಸದಸ್ಯರೂ ಆದ ಕೋವಿಡ್-19 ಕುರಿತ ಕಾರ್ಯಪಡೆಯ ಅಧ್ಯಕ್ಷ ವಿ.ಕೆ.ಪಾಲ್ ಮಂಗಳವಾರ ತಿಳಿಸಿದರು.

ಕೊರೊನಾ ಸೋಂಕಿನ ಮೂರನೇ ಅಲೆಯಲ್ಲಿ ಮುಖ್ಯವಾಗಿ ಮಕ್ಕಳ ಮೇಲೆ ಗಂಭೀರವಾದ ಪರಿಣಾಮ ಬೀರಬಹುದು ಎಂಬ ಕಳವಳದ ಹಿಂದೆಯೇ ಈ ಬೆಳವಣಿಗೆ ನಡೆದಿದೆ.

ಭಾರತದ ಔಷಧ ಮಹಾನಿಯಂತ್ರಕರು (ಡಿಸಿಜಿಐ) ಈಗಾಗಲೇ ಹೈದರಾಬಾದ್ ಮೂಲದ ಭಾರತ್ ಬಯೊಟೆಕ್ ಸಂಸ್ಥೆಗೆ ಮಕ್ಕಳ ಮೇಲೆ ಪ್ರಯೋಗ ನಡೆಸಲು ಅನುಮತಿ ನೀಡಿದೆ. 2 ರಿಂದ 18 ವರ್ಷ ವಯಸ್ಸಿನ 525 ಆರೋಗ್ಯ ಸ್ವಯಂಸೇವಕರ ಮೇಲೆ ಲಸಿಕೆಯ ಪ್ರಯೋಗ ಕೈಗೊಳ್ಳಲು ಅನುಮತಿ ನೀಡಲಾಗಿದೆ.



ಪ್ರಯೋಗದ ಅವಧಿಯಲ್ಲಿ ಲಸಿಕೆಯನ್ನು 28 ದಿನಗಳ ಅಂತರದಲ್ಲಿ ಎರಡು ಡೋಸ್ ನೀಡಲಾಗುತ್ತದೆ. ತದನಂತರ ಅವರ ಮೇಲೆ ಸೂಕ್ಷ್ಮವಾಗಿ ನಿಗಾ ಇರಿಸಲಿದ್ದು, ಎಷ್ಟು ಮಂದಿಗೆ ಸೋಂಕು ತಗುಲಬಹುದು ಎಂದು ಪರಿಶೀಲಿಸಲಾಗುತ್ತದೆ. ಕಳೆದ ಡಿಸೆಂಬರ್‌ನಲ್ಲಿ ನಡೆದಿದ್ದ ಐಸಿಎಂಆರ್‌ನ ಸೆರೊ ಸಮೀಕ್ಷೆಯಲ್ಲಿ ವಯಸ್ಕರು ಮತ್ತು ಮಕ್ಕಳ ಮೇಲೆ ಕೋವಿಡ್ ಪ್ರತಿಕಾಯಗಳು ಸೃಷ್ಟಿಯಾಗಿದ್ದವರ ಪ್ರಮಾಣವನ್ನು ಅಂದಾಜು ಮಾಡಲಾಗಿತ್ತು. 18 ವರ್ಷ ಮೀರಿದ ವಯಸ್ಕರಲ್ಲಿ ಈ ಪ್ರಮಾಣ ಶೇ 21.4ರಷ್ಟು ಇದ್ದರೆ, 10-17 ವರ್ಷದವರಲ್ಲಿ ಇದು ಶೇ 25.3ರಷ್ಟಿತ್ತು.

ಕೊರೊನಾ ಸೋಂಕು ಪೀಡಿತರಾಗುವ ಬಹುತೇಕ ಮಕ್ಕಳಲ್ಲಿ ಯಾವುದೇ ರೋಗ ಲಕ್ಷಣಗಳು ಕಾಣಿಸಿಕೊಳ್ಳುವುದಿಲ್ಲ. ಹೀಗಾಗಿ ಮಾಸ್ಕ್ ಧರಿಸುವುದನ್ನು ಹಾಗೂ ಪರಸ್ಪರ ಅಂತರ ಕಾಯ್ದುಕೊಳ್ಳುವ ಕುರಿತು ಮಕ್ಕಳಲ್ಲಿಯೂ ಜಾಗೃತಿ ಮೂಡಿಸಬೇಕು ಎಂದು ಪಾಲ್ ಅವರು ಅಭಿಪ್ರಾಯಪಟ್ಟರು.

ಬುಧವಾರದ ಉಷ್ಣಾಂಶ 33° ಗರಿಷ್ಠ 22° ಕನಿಷ್ಠ

ಹವಾಮಾನ ಮುನ್ಸೂಚನೆ
ನಗರದಲ್ಲಿ ಭಾಗಶಃ ಮೋಡ ಕವಿದ ವಾತಾವರಣ. ಸಂಜೆ ವೇಳೆಗೆ ಸಾಧಾರಣ ಮಳೆ ಆಗುವ ಸಾಧ್ಯತೆ

ಮುನ್ಸೂಚನೆ: ಗುರುವಾರ 32° 22° | ಶುಕ್ರವಾರ 30° 20° | ಶನಿವಾರ 29° 20°

ಸೂರ್ಯೋದಯ: 5:54 ಸೂರ್ಯಾಸ್ತ : 6:38 ಚಂದ್ರೋದಯ: ಬೆ. 11:58 ಚಂದ್ರಾಸ್ತ: ರಾ. 12:11 ಮಂಗಳವಾರದ ಹವಾಮಾನ : ಗರಿಷ್ಠ 33° ಕನಿಷ್ಠ 21°

ಪ್ರಜಾವಾಣಿ

ಪೂರ್ಣ ಶುಲ್ಕ ಪಾವತಿಸದಿದ್ದರೆ 'ಫಲಿತಾಂಶ' ಇಲ್ಲ!

ಪ್ರಜಾವಾಣಿ ವಾರ್ತೆ

ಬೆಂಗಳೂರು: 2020–21ನೇ ಶೈಕ್ಷಣಿಕ ಸಾಲಿನ ಶುಲ್ಕವನ್ನು ಸಂಪೂರ್ಣ ಪಾವತಿಸಿಲ್ಲ ಎಂಬ ಕಾರಣಕ್ಕೆ ನಗರದ ಹಲವು ಖಾಸಗಿ ಶಾಲೆಗಳು ವಿದ್ಯಾರ್ಥಿಗಳ ಫಲಿತಾಂಶವನ್ನು ತಡೆಹಿಡಿದಿವೆ ಎಂದು ಆರೋಪಿಸಲಾಗಿದೆ. ಕೆಲವು ಶಿಶುವಿಹಾರಗಳು ಕೂಡಾ ಮಕ್ಕಳ ಫಲಿತಾಂಶವನ್ನು ನೀಡಿಲ್ಲ ಎಂದು ಪೋಷಕರು ದೂರಿದ್ದಾರೆ.

'ನಿಮ್ಮ ಮಗುವಿನ ಯುಕೆಜಿ ಶುಲ್ಕವನ್ನು ಸಂಪೂರ್ಣ ಪಾವತಿಸದಿದ್ದರೆ ಮುಂದಿನ ತರಗತಿಗೆ ಬಡ್ತಿ ನೀಡುವುದಿಲ್ಲ' ಎಂದು ವೈಟ್ ಫೀಲ್ಡ್‌ನಲ್ಲಿರುವ ಪ್ರತಿಷ್ಠಿತ ಶಾಲೆಯೊಂದು ಪೋಷಕರಿಗೆ ವಾಟ್ಸ್‌ಆ್ಯಪ್ ಸಂದೇಶ ಕಳುಹಿಸಿದೆ.

'ರಾಜ್ಯ ಸರ್ಕಾರದ ನಿರ್ದೇಶನದಂತೆ ಒಟ್ಟು ಶುಲ್ಕದ ಶೇ 70ರಷ್ಟನ್ನು ನಾನು ಪಾವತಿಸಿದ್ದೆ. ಆದರೆ, ಈಗ, ನಿಮ್ಮ ಮಗುವಿಗೆ ಮುಂದಿನ ತರಗತಿಗೆ ಬಡ್ತಿ ನೀಡಬೇಕಿದ್ದರೆ ಪೂರ್ಣ ಶುಲ್ಕ ಪಾವತಿಸಬೇಕು ಎಂದು ಶಾಲೆಯವರು ಒತ್ತಾಯಿಸುತ್ತಿದ್ದಾರೆ. ಅಲ್ಲದೆ, ವರ್ಗಾವಣೆ ಪ್ರಮಾಣಪತ್ರ ಕೂಡಾ ಕೊಡುತ್ತಿಲ್ಲ' ಎಂದು ಪೋಷಕರೊಬ್ಬರು ದೂರಿದ್ದಾರೆ.

'2020–21ನೇ ಶೈಕ್ಷಣಿಕ ಸಾಲಿನ ಫಲಿತಾಂಶ ಬುಧವಾರ (ಮೇ 19) ಪ್ರಕಟವಾಗಲಿದೆ. ಶುಲ್ಕ ಪಾವತಿಸಿದ ವಿದ್ಯಾರ್ಥಿಗಳ ಫಲಿತಾಂಶವನ್ನು ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಕಳುಹಿಸಲಾಗುವುದು. ಶುಲ್ಕ ಬಾಕಿ ಉಳಿಸಿಕೊಂಡವರು ಹಣವನ್ನು ಬ್ಯಾಂಕ್ ಖಾತೆಗೆ ಜಮೆ ಮಾಡಬೇಕು' ಎಂದು ಶಾಲೆಯಿಂದ ಪೋಷಕರೊಬ್ಬರಿಗೆ ಮೊಬೈಲ್ ಸಂದೇಶ ಬಂದಿದೆ.

'ಶುಲ್ಕ ಸಂಬಂಧಿಸಿದ ದೂರುಗಳ ಪರಿಶೀಲನೆಗೆ ಸಾರ್ವಜನಿಕ ಶಿಕ್ಷಣ ಇಲಾಖೆ ರಚಿಸಿದ ಸಮಿತಿ, ಇಂಥ ಶಾಲೆಗಳ ಮೇಲೆ ಕ್ರಮ ತೆಗೆದುಕೊಳ್ಳಲು ತಯಾರಿಲ್ಲ. ಯಾಕೆಂದರೆ, ಶೇ 70 ಶುಲ್ಕ ಸಂಗ್ರಹಿಸಬೇಕೆಂದು ಸರ್ಕಾರ ಹೊರಡಿಸಿರುವ ಆದೇಶ ವಿರುದ್ಧದ ಪ್ರಕರಣ ಹೈಕೋರ್ಟ್‌ನಲ್ಲಿ ವಿಚಾರಣೆ ಹಂತದಲ್ಲಿದೆ' ಎಂದೂ ಪೋಷಕರು ಹೇಳಿದ್ದಾರೆ.

ಉನ್ನತ ಶಿಕ್ಷಣ ಸಂಸ್ಥೆಗಳಲ್ಲೂ ಶುಲ್ಕ ಗೊಂದಲ: ಶಾಲೆಗಳಷ್ಟೆ ಅಲ್ಲದೆ, ಉನ್ನತ ಶಿಕ್ಷಣ ಸಂಸ್ಥೆಗಳ ವಿದ್ಯಾರ್ಥಿಗಳೂ ಶುಲ್ಕ ಸಮಸ್ಯೆ ಎದುರಿಸುತ್ತಿದ್ದಾರೆ. ಶುಲ್ಕ ಪಾವತಿಸದ ಕಾರಣಕ್ಕೆ ಕೆಲವು ಫಾರ್ಮಸಿ ಕಾಲೇಜುಗಳು ವಿದ್ಯಾರ್ಥಿಗಳಿಗೆ ಆನ್‌ಲೈನ್ ತರಗತಿಯನ್ನೇ ಸ್ಥಗಿತಗೊಳಿಸಿದ್ದು, ಕೆಲವರು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಮನೋಹರ್ ನೇತೃತ್ವದ ಪ್ರವೇಶಾತಿ ಮೇಲುಸ್ತುವಾರಿ ಸಮಿತಿಗೆ ದೂರು ನೀಡಿದ್ದಾರೆ. 'ಈ ಸಮಿತಿ ನೋಟಿಸ್ ನೀಡಿದ್ದರೂ ಕಾಲೇಜುಗಳು ಆನ್‌ಲೈನ್ ತರಗತಿ ಸ್ಥಗಿತಗೊಳಿಸಿದೆ' ಎಂದು ಆಚಾರ್ಯ ಮತ್ತು ಬಿಎಂ ರೆಡ್ಡಿ ಕಾಲೇಜ್ ಆಫ್ ಫಾರ್ಮಸಿಯಲ್ಲಿ ಕಲಿಯುವ ವಿದ್ಯಾರ್ಥಿಯ ಪೋಷಕರು ಹೇಳಿದರು.

ಕ್ಷಯ ರೋಗ: ದೂರವಾಣಿ ಮೂಲಕ ಪರೀಕ್ಷೆ

ಬೆಂಗಳೂರು: ಕೋವಿಡ್ ಕಾರಣ ಕ್ಷಯ ರೋಗಿಗಳ ಮನೆಗಳಿಗೆ ಭೇಟಿ ನೀಡಲು ಸಾಧ್ಯವಾಗದೇ ಇರುವುದಕ್ಕೆ ದೂರವಾಣಿ ಮೂಲಕವೇ ಪರೀಕ್ಷೆ ಮತ್ತು ಚಿಕಿತ್ಸೆ ಬಗ್ಗೆ ಸಮಾಲೋಚನೆ ನಡೆಸಲು ಜಿಲ್ಲಾ ಕ್ಷಯ ರೋಗ ನಿಯಂತ್ರಣಾಧಿಕಾರಿಗಳಿಗೆ ಸೂಚಿಸಲಾಗಿದೆ.

ಈ ಸಂಬಂಧ ಆರೋಗ್ಯ ಇಲಾಖೆಯ ಆಯುಕ್ತ ಡಾ. ತ್ರಿಲೋಕ್ ಚಂದ್ರ ಸುತ್ತೋಲೆ ಹೊರಡಿಸಿದ್ದಾರೆ. ಕೋವಿಡ್ ಎಲ್ಲೆಡೆ ಹರಡುತ್ತಿರುವ ಕಾರಣ ಕ್ಷಯ ರೋಗಿಗಳ ಮನೆಗೆ ಭೇಟಿ ಮಾಡಲು ಸಮಸ್ಯೆಯಾಗುತ್ತಿರುವುದು ಗಮನಕ್ಕೆ ಬಂದಿದೆ. ಕ್ಷಯ ರೋಗ ನಿಯಂತ್ರಣಾಧಿಕಾರಿಗಳು ತಮ್ಮ ವ್ಯಾಪ್ತಿಯಲ್ಲಿ ನಿತ್ಯ 20 ಕ್ಷಯ ರೋಗಿಗಳನ್ನು ದೂರವಾಣಿ ಮೂಲಕ ಸಂಪರ್ಕಿಸಿ, ಆರೋಗ್ಯ ವಿಚಾರಿಸಬೇಕು. ರೋಗಿಗಳ ದಾಖಲಾತಿಗಳನ್ನು ಪುಸ್ತಕದಲ್ಲಿ ನಮೂದಿಸಿ, ಅದನ್ನು ವಾರಕ್ಕೊಮ್ಮೆ ರಾಜ್ಯ ಕ್ಷಯ ರೋಗ ಕೇಂದ್ರಕ್ಕೆ ಕಳುಹಿಸಬೇಕು ಎಂದು ತಿಳಿಸಿದ್ದಾರೆ. ಸರಿಯಾದ ಹಾಗೂ ಸಮರ್ಪಕವಾದ ಮಾಹಿತಿ ಒದಗಿಸಬೇಕು. ತಪ್ಪು ಮಾಹಿತಿ ದಾಖಲಿಸುವವರ ವಿರುದ್ಧ ಕ್ರಮ ಕೈಗೊಳ್ಳಲಾಗುತ್ತದೆ ಎಂದು ಸುತ್ತೋಲೆಯಲ್ಲಿ ಎಚ್ಚರಿಕೆ ನೀಡಿದ್ದಾರೆ.

ನಗರದಲ್ಲಿ ಇಂದು

ಬಂಟರ ಸಂಘದಿಂದ 'ಉಚಿತ ಆಮ್ಲಜನಕ ಅಭಿಯಾನ' ಉದ್ಘಾಟನೆ: ಉಪಮುಖ್ಯಮಂತ್ರಿ ಸಿ.ಎನ್.ಅಶ್ವತ್ಥನಾರಾಯಣ, ಅಧ್ಯಕ್ಷತೆ- ಬಂಟರ ಸಂಘದ ಅಧ್ಯಕ್ಷ ಆರ್. ಉಪೇಂದ್ರ ಶೆಟ್ಟಿ, ಅತಿಥಿಗಳು–ವಸತಿ ಸಚಿವ ವಿ.ಸೋಮಣ್ಣ, ಶಾಸಕ ಎಂ.ಕೃಷ್ಣಪ್ಪ, ಹಿಂದುಳಿದ ವರ್ಗಗಳ ಆಯೋಗದ ಅಧ್ಯಕ್ಷ ಕೆ.ಜಯಪ್ರಕಾಶ್ ಹೆಗ್ಡೆ, ಕರಕುಶಲ ಅಭಿವೃದ್ಧಿ ನಿಗಮದ ಅಧ್ಯಕ್ಷ ಬೇಳೂರು ರಾಘವೇಂದ್ರ ಶೆಟ್ಟಿ, ಸ್ಥಳ–ಬಂಟರ ಸಂಘದ ಆವರಣ, ವಿಜಯನಗರ, ಬೆಳಿಗ್ಗೆ 9

'ಪುಸ್ತಕವೇಕೆ ಅಗತ್ಯ ವಸ್ತುವಲ್ಲ?, ಮದ್ಯದಂಗಡಿಯನ್ನು ಅಗತ್ಯ ಎಂದು ಪರಿಗಣಿಸಿರುವ ಸರ್ಕಾರ ಪುಸ್ತಕದ ಅಂಗಡಿಗಳ ಬಾಗಿಲು ಮುಚ್ಚಿಸಿದ್ದು ಸರಿಯೇ?' ಕುರಿತು ಸಂವಾದ: ಭಾಗವಹಿಸುವವರು–ನವಕರ್ನಾಟಕ ಬುಕ್ ಸ್ಟೋರ್‌ನ ರಮೇಶ್ ಉಡುಪ, ಸಪ್ನಾ ಬುಕ್ ಹೌಸ್‌ನ ಆರ್. ದೊಡ್ಡೇಗೌಡ, ಅಂಕಿತ ಪುಸ್ತಕದ ಪ್ರಕಾಶ್ ಕಂಬತ್ತಳ್ಳಿ, ಆಕೃತಿ ಬುಕ್ ಸ್ಟೋರ್‌ನ ಡಿ.ಎನ್.ಗುರುಪ್ರಸಾದ್, ಆಯೋಜನೆ–ಬಹುರೂಪಿ, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

'ಸಾರಿಗೆ ಸುರಕ್ಷಾ ಸಂಚಾರಿ ಐಸಿಯು' (ಐಸಿಯು ಆನ್ ವೀಲ್ಸ್) ಬಸ್‌ಗಳು ಹಾಗೂ ಸಂಚಾರಿ ಆಮ್ಲಜನಕ ಬಸ್‌ಗಳಿಗೆ ಚಾಲನೆ: ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ, ಸ್ಥಳ–ಕೆಎಸ್‌ಆರ್‌ಟಿಸಿ ಕೇಂದ್ರ ಕಚೇರಿ ಮುಂಭಾಗ, ಮಧ್ಯಾಹ್ನ 12

'ನನ್ನಿ ಯೊಳಿನತನಯಂ' ಎಂಬ ಪಂಪನ ಮಾತಿನ 'ನನ್ನಿ' ಎಂದರೆ ಏನು? ಕುರಿತು ಉಪನ್ಯಾಸ: ಡಾ.ಬಿ.ರಾಜಶೇಖರಪ್ಪ, ಭಾಗವಹಿಸುವವರು–ಆರ್. ಲಕ್ಷ್ಮೀನಾರಾಯಣ, ಆಯೋಜನೆ–ಬಿಎಂಶ್ರೀ ಪ್ರತಿಷ್ಠಾನ, ಸಂಜೆ 4.30 (ಆನ್‌ಲೈನ್ ಕಾರ್ಯಕ್ರಮ)


ಪ್ರಧಾನಿ ಜೊತೆಗಿನ ಸಂವಾದದಲ್ಲಿ ಬೇಡಿಕೆ ಇಟ್ಟ ಬಿಬಿಎಂಪಿ ಮುಖ್ಯ ಆಯುಕ್ತ

ಆಮ್ಲಜನಕ, ಲಸಿಕೆ ಪೂರೈಕೆ ಹೆಚ್ಚಿಸಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೊರೊನಾ ಸೋಂಕು ಹರಡುವಿಕೆ ನಿಯಂತ್ರಣ ಕಾರ್ಯವನ್ನು ಪರಿಣಾಮಕಾರಿಯಾಗಿ ಕೈಗೊಳ್ಳಲು ಕೊವಿಡ್ ಲಸಿಕೆ ಹಾಗೂ ಆಮ್ಲಜನಕ ಪೂರೈಕೆ ಹೆಚ್ಚು ಮಾಡುವಂತೆ ಬಿಬಿಎಂಪಿ ಮುಖ್ಯ ಆಯುಕ್ತ ಗೌರವ್ ಗುಪ್ತ ಅವರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಕೋರಿದ್ದಾರೆ.

ಕೋವಿಡ್ ನಿಯಂತ್ರಣ ಕುರಿತು ಪ್ರಧಾನಿ ಜೊತೆಗೆ ಮಂಗಳವಾರ ಏರ್ಪಡಿಸಿದ್ದ ವಿಡಿಯೊ ಸಂವಾದದಲ್ಲಿ ಮುಖ್ಯ ಆಯುಕ್ತರು ಭಾಗವಹಿಸಿದರು. ಸೋಂಕು ಹರಡುವಿಕೆ ತಡೆಯಲು ಬಿಬಿಎಂಪಿ ಕೈಗೊಂಡ ಕ್ರಮಗಳನ್ನು ವಿವರಿಸಿದರು.



‘ಬಿಬಿಎಂಪಿ ವ್ಯಾಪ್ತಿಯಲ್ಲಿ ಕೋವಿಡ್ ಲಸಿಕೆ ಅಭಿಯಾನವನ್ನು ಯಶಸ್ವಿಯಾಗಿ ನಡೆಸಲಾಗುತ್ತಿದೆ. ಇನ್ನಷ್ಟು ಲಸಿಕೆ ಅವಶ್ಯಕತೆ ಇದೆ. ಹಾಗಾಗಿ ಲಸಿಕೆ ಪೂರೈಕೆ ಪ್ರಮಾಣವನ್ನು ಹೆಚ್ಚಿಸುವಂತೆ ಪ್ರಧಾನಿ ಅವರ ಬಳಿ ಕೋರಿದ್ದೇವೆ. ನಗರದಲ್ಲಿ ಕೋವಿಡ್ ರೋಗಿಗಳ ಚಿಕಿತ್ಸೆಗೆ ಆಮ್ಲಜನಕದ ಕೊರತೆ ಇರುವುದನ್ನೂ ಗಮನಕ್ಕೆ ತಂದಿದ್ದೇವೆ’ ಎಂದು ಗೌರವ್ ಗುಪ್ತ ಸುದ್ದಿಗಾರರಿಗೆ ತಿಳಿಸಿದರು.



ಗೌರವ್ ಗುಪ್ತ

‘ಲಸಿಕೆಯ ಕೊರತೆಯನ್ನು ಸ್ಥಳೀಯವಾಗಿ ನಿವಾರಿಸಿಕೊಳ್ಳಬೇಕು. ಕೇಂದ್ರ ಸರ್ಕಾರದ ವತಿಯಿಂದ ರಾಜ್ಯಗಳಿಗೆ ಲಸಿಕೆ ಪೂರೈಕೆಗೆ ಈಗಾಗಲೇ ಕ್ರಮ ಕೈಗೊಂಡಿದ್ದೇವೆ. ಇನ್ನಷ್ಟು ಲಸಿಕೆ ಲಭ್ಯವಾಗಲಿದೆ ಎಂದು ಪ್ರಧಾನಿ ಅವರು ಭರವಸೆ ನೀಡಿದ್ದಾರೆ’ ಎಂದರು.

‘ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನಿರ್ಧರಿಸಲು ಬಿಬಿಎಂಪಿ ವ್ಯಾಪ್ತಿಯಲ್ಲಿ ಜಾರಿಗೆ ತಂದಿರುವ ವ್ಯವಸ್ಥೆ ಬಗ್ಗೆ ವಿವರಿಸಿದ್ದೇವೆ. ಇಲ್ಲಿ ಕೋವಿಡ್ ಮಾಹಿತಿ ನಿರ್ವಹಣೆಗೆ ಮಡಿಕೊಂಡ ವ್ಯವಸ್ಥೆ ಬಗ್ಗೆಯೂ ಮಾಹಿತಿ ಹಂಚಿಕೊಂಡಿದ್ದೇವೆ’ ಎಂದು ತಿಳಿಸಿದರು.

‘ಕೋವಿಡ್ ನಿಯಂತ್ರಣಕ್ಕೆ ಸ್ಥಳೀಯ ಅವಶ್ಯಕತೆಗೆ ಅನುಗುಣವಾಗಿ ಕ್ರಮ ಕೈಗೊಳ್ಳಬೇಕು. ಸೋಂಕು ನಿಯಂತ್ರಣಕ್ಕೆ ವಿವಿಧ ಪ್ರದೇಶಗಳಲ್ಲಿ ಕೈಗೊಂಡ ಯಶಸ್ವಿ ಕ್ರಮಗಳನ್ನು ಇತರರೂ ಸದ್ಬಳಕೆ ಮಾಡಿಕೊಳ್ಳಬೇಕು. ಇದೊಂದು ದೊಡ್ಡ ಯುದ್ಧ. ಈ ದೇಶದ ಎಲ್ಲರೂ ಒಟ್ಟಾಗಿ ಇದನ್ನು ಎದುರಿಸಬೇಕು ಎಂಬುದಾಗಿ ಪ್ರಧಾನಿ ಸಲಹೆ ನೀಡಿದರು’ ಎಂದು ಅವರು ತಿಳಿಸಿದರು.

ನಗರ ಜಿಲ್ಲೆಯ ಜಿಲ್ಲಾಧಿಕಾರಿ ಜೆ.ಮಂಜುನಾಥ್ ಅವರೂ ವಿಡಿಯೊ ಸಂವಾದದಲ್ಲಿ ಭಾಗವಹಿಸಿದರು.

ಸರ್ಕಾರ ವಿಫಲ: ‘ಕೈ’ ಯುವ ಶಾಸಕರ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೋವಿಡ್ ನಿಯಂತ್ರಿಸಲು ರಾಜ್ಯ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ನೆರವಿಗೆ ಧಾವಿಸಬೇಕಾದ ಕೇಂದ್ರ ಸರ್ಕಾರ, ತಾರತಮ್ಯ ಧೋರಣೆ ಅನುಸರಿಸುತ್ತಿದೆ’ ಎಂದು ರಾಜ್ಯ–ಕೇಂದ್ರ ಸರ್ಕಾರದ ವಿರುದ್ಧ ಕಾಂಗ್ರೆಸ್ ಶಾಸಕರಾದ ಕೃಷ್ಣಬೈರೇಗೌಡ, ಪ್ರಿಯಾಂಕ ಖರ್ಗೆ, ರಿಜ್ವಾನ್ ಅರ್ಷದ್ ದೂರಿದರು.

ಜಂಟಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಈ ಮೂವರೂ, ‘ಇಂಥ ಸಂದರ್ಭದಲ್ಲಿ ರಾಜ್ಯದ ಸಂಸದರು ಮಾತನಾಡಬೇಕು. ಆದರೆ, ಅವರು ತಮ್ಮ ಪಕ್ಷದ ಸಮರ್ಥನೆಗೆ ನಿಂತಿದ್ದಾರೆ’ ಎಂದೂ ದೂರಿದರು.

’ರಾಜ್ಯಕ್ಕೆ 1,200 ಟನ್ ಆಮ್ಲಜನಕ ಪೂರೈಸುವಂತೆ ಕೋರ್ಟ್ ಹೇಳಿದರೂ ಕೇಂದ್ರ ಕೊಡುತ್ತಿಲ್ಲ. ಚಾಮರಾಜನಗರದಲ್ಲಿ ಆಮ್ಲಜನಕ ಕೊರತೆಯಿಂದ ಮೂವರಲ್ಲ, 26 ಮಂದಿ ಸಾವಿಗೀಡಾಗಿದ್ದಾರೆ ಎಂದು ನ್ಯಾಯಮೂರ್ತಿಗಳ ಸಮಿತಿ ಹೇಳಿದರೆ, ಅವರು ಸರ್ವಜ್ಞರಲ್ಲ ಎನ್ನುತ್ತಿದ್ದಾರೆ. ಹೈಕೋರ್ಟ್ ಮುಖ್ಯ ನ್ಯಾಯಮೂರ್ತಿಯ ಬದಲಾವಣೆಗೆ ಪ್ರಯತ್ನ ನಡೆಯುತ್ತಿದೆ. ಇದೆಂಥ ನ್ಯಾಯ ಸ್ವಾಮಿ’ ಎಂದು ಕೃಷ್ಣಬೈರೇಗೌಡ ಪ್ರಶ್ನಿಸಿದರು.

‘ಬಿಜೆಪಿ ಶಾಸಕರೇ ಕಾಳಸಂತೆಯಲ್ಲಿ ರೆಮ್‌ಡಿಸಿವಿರ್ ಖರೀದಿಸಿ ಹಂಚಿದ್ದಾರೆ. ಯಾವ ಶಾಸಕರೆಂದು ನಾನು ಹೇಳುವುದಿಲ್ಲ. ರಾಜ್ಯಕ್ಕೆ ₹ 5 ಸಾವಿರ ಕೋಟಿ ನೀಡುವಂತೆ ಹಣಕಾಸು ಆಯೋಗ ಮಾಡಿದ್ದ ಶಿಫಾರಸ್ಸನ್ನು ನಿರ್ಮಲಾ ಸೀತಾರಾಮನ್ ತಡೆದಿದ್ದಾರೆ’ ಎಂದರು.

ಪ್ರಿಯಾಂಕ ಖರ್ಗೆ ಮಾತನಾಡಿ, ‘ನಾವು ಯಾರನ್ನು ಪ್ರಶ್ನೆ ಮಾಡಬೇಕೆಂದು ಗೊತ್ತಾಗುತ್ತಿಲ್ಲ. ಪಿಎಂ ಕೇರ್‌ಗೆ ಎಷ್ಟು ಹಣ ಬಂದಿದೆ ಗೊತ್ತಿಲ್ಲ. ಸಿರಿಂಜ್, ಗ್ಲೌಸ್, ಮಾಸ್ಕ್ ಹೀಗೆ ಎಲ್ಲದಕ್ಕೂ ತೆರಿಗೆ ಹಾಕುತ್ತಾರೆ. ಅಗತ್ಯ ವಸ್ತುಗಳ ಮೇಲೆ ತೆರಿಗೆ ಯಾಕೆ. ಇದು ಸುಲಿಗೆ ಅಲ್ಲವೇ’ ಎಂದು ಪ್ರಶ್ನಿಸಿದರು.

‘ಇದೊಂದು ಸೋಂಕಿತ ಸರ್ಕಾರ. ಸರ್ಕಾರ ರಚನೆಗೆ ತೋರಿಸಿದ ಅರ್ಧ ಆಸಕ್ತಿಯನ್ನು ಕೋವಿಡ್ ನಿರ್ವಹಣೆಗೆ ತೋರಿಸಬೇಕಿತ್ತು. ಬಿಎಸ್‌ವೈ ಮುಕ್ತ ಮಾಡಲು ಬಿಜೆಪಿ ಹೈಕಮಾಂಡ್ ಹೊರಟಿದೆ. ಅದಕ್ಕೆ ಹಲವರು ಬಹಳ ಆಸಕ್ತಿ ತೋರಿಸುತ್ತಿದ್ದಾರೆ. ಈ ಆಸಕ್ತಿಯನ್ನು ಜನಸಾಮಾನ್ಯರ ಮೇಲೆ ತೋರಿಸಬೇಕಿತ್ತು’ ಎಂದು ಲೇವಡಿ ಮಾಡಿದರು.

ರಿಜ್ವಾನ್ ಅರ್ಷದ್, ‘ಸರ್ಕಾರಕ್ಕೆ ಬದ್ಧತೆ ಇಲ್ಲ. ಲಸಿಕೆ ವಿಚಾರದಲ್ಲಿ ಕೇಂದ್ರ ಸರ್ಕಾರ ಹಿಂದಕ್ಕೆ ಸರಿದಿದೆ. ರಾಜ್ಯ ಸರ್ಕಾರವೂ ಲಸಿಕೆ ನೀಡುತ್ತಿಲ್ಲ. ಆರೋಗ್ಯ ಮಂತ್ರಿ ಸುಧಾಕರ್ ಏನು ಮಾಡುತ್ತಿದ್ದಾರೆ’ ಎಂದು ಪ್ರಶ್ನಿಸಿದರು.

ಕೋವಿಡ್‌ನಲ್ಲೂ ದೋಚುವ ಆಲೋಚನೆ

ಬೆಂಗಳೂರು: ‘ಕೋವಿಡ್ ಸೃಷ್ಟಿಸಿರುವ ಸನ್ನಿವೇಶವನ್ನು ಎದುರಿಸಲು ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಸನ್ನದ್ಧವಾಗಬೇಕಿದೆ. ಆದರೆ, ಇಂತಹ ಕಷ್ಟ ಕಾಲದಲ್ಲೂ ಎಷ್ಟು ಬಾಚುವುದು? ಎಷ್ಟು ದೋಚುವುದು? ಎಂಬುದಾಗಿ ಆಲೋಚಿಸುತ್ತಿದ್ದಾರೆ’ ಎಂದು ಸಾಣೇಹಳ್ಳಿ ಮಠದ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಬೇಸರ ವ್ಯಕ್ತಪಡಿಸಿದರು.

ಕೋವಿಡ್ ಬಿಕ್ಕಟ್ಟು ಎದುರಿಸುವ ಕುರಿತಂತೆ ಜನಾಗ್ರಹ ಆಂದೋಲನ ಮಂಗಳವಾರ ಆಯೋಜಿಸಿದ್ದ ವಿವಿಧ ಪಕ್ಷಗಳ ನಾಯಕರು, ವಿವಿಧ ಸಂಘಟನೆಗಳ ಮುಖಂಡರು ಮತ್ತು ಸಮಾಜದ ಪ್ರಮುಖರ ಆನ್‌ಲೈನ್ ಸಭೆಯಲ್ಲಿ ‘ಕರ್ನಾಟಕ ಕೋವಿಡ್ ಸ್ವಯಂಸೇವಕರ ತಂಡ’ದ (ಕೆಸಿವಿಟಿ) ಹೆಲ್ಪ್ ಲಿಂಕ್‌ನ ‘ಬದುಕು ಉಳಿಸುವ ಧ್ಯೇಯ’ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

‘ಧರೆ ಹತ್ತಿ ಉರಿದೊಡೆ’ ಎಂಬ ಬಸವಣ್ಣನವರ ವಚನವನ್ನು ಉಲ್ಲೇಖಿಸಿದ ಸ್ವಾಮೀಜಿ, ‘ಕೋವಿಡ್‌ನಿಂದ ವಿಶ್ವಕ್ಕೆ ಬೆಂಕಿಬಿದ್ದ ಸ್ಥಿತಿ ನಿರ್ಮಾಣವಾಗಿದೆ. ಪರಿಸ್ಥಿತಿ ನಿಭಾಯಿಸಬೇಕಿದ್ದ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಕೈಚೆಲ್ಲಿವೆ. ಈ ಹೊತ್ತಿನಲ್ಲೂ ದೋಚಲು ಆಲೋಚಿಸುವುದಕ್ಕೆ ನಿಮಗೆ ನಾಚಿಕೆ ಆಗುವುದಿಲ್ಲವೆ ಎಂದು ನಾವು ಅವರನ್ನು ಪ್ರಶ್ನಿಸಬೇಕಿದೆ’ ಎಂದರು.



ಸಾಣೇಹಳ್ಳಿ ಶ್ರೀ

ಲಾಕ್‌ಡೌನ್‌ನಿಂದ ಕೂಲಿ ಕಾರ್ಮಿಕರು ಮತ್ತು ಬಡವರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಬಡವರು, ಕಾರ್ಮಿಕರ ಕುಟುಂಬಗಳಿಗೆ ತಿಂಗಳಿಗೆ ₹ 5,000 ಪರಿಹಾರ ನೀಡಬೇಕು. ಆಸ್ಪತ್ರೆಗಳಲ್ಲಿ ಹಾಸಿಗೆ, ಆಮ್ಲಜನಕ ಮತ್ತು ಉಚಿತ ಚಿಕಿತ್ಸೆ ನೀಡಬೇಕು. ರೈತರಿಗೆ ಬಿತ್ತನೆ ಬೀಜ, ರಸಗೊಬ್ಬರಗಳನ್ನು ಕಡಿಮೆ ದರದಲ್ಲಿ ಒದಗಿಸಬೇಕು. ಶ್ರೀಮಂತರಿಗೆ ಶೇಕಡ 5ರಷ್ಟು ಹೆಚ್ಚಿನ ತೆರಿಗೆ ವಿಧಿಸಿ, ಆ ಹಣವನ್ನು ಕೋವಿಡ್ ಚಿಕಿತ್ಸೆಗೆ ಬಳಸಬೇಕು ಎಂದು ಸರ್ಕಾರವನ್ನು ಒತ್ತಾಯಿಸುವ ನಿರ್ಣಯವನ್ನು ಜನಾಗ್ರಹ ಆಂದೋಲನ ಕೈಗೊಂಡಿತು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ಮಾಜಿ ಐಎಎಸ್ ಅಧಿಕಾರಿ ಸಸಿಕಾಂತ್ ಸೆಂಥಿಲ್, ಸಾಹಿತಿ ಬರಗೂರು ರಾಮಚಂದ್ರಪ್ಪ, ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ, ಸಿಪಿಐ ಮುಖಂಡ ಡಾ.ಸಿದ್ದನಗೌಡ ಪಾಟೀಲ, ದಲಿತ ಸಂಘರ್ಷ ಸಮಿತಿ ಮುಖಂಡರಾದ ಮಾವಳ್ಳಿ ಶಂಕರ್, ಲಕ್ಷ್ಮೀನಾರಾಯಣ ನಾಗವಾರ, ಡಿ.ಜಿ. ಸಾಗರ್, ಧಾರವಾಡದ ಸನಾ ಚಾರಿಟಬಲ್ ಟ್ರಸ್ಟ್‌ನ ವ್ಯವಸ್ಥಾಪಕ ಟ್ರಸ್ಟಿ ಅಶ್ರಫ್ ಅಲಿ ಬಶೀರ್ ಅಹಮ್ಮದ್, ವಿಜಯಪುರದ ಮಚಾದೋ ನಿರ್ದೇಶಕ ಫಾದರ್ ಟಿಯೋಲ್, ಜನಾಗ್ರಹ ಆಂದೋಲನದ ಕೆ.ಎಲ್. ಅಶೋಕ್ ಸೇರಿದಂತೆ ಹಲವರು ಸಭೆಯಲ್ಲಿದ್ದರು.

ಮಳೆಗಾಲದಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ಇಲ್ಲ: ಹೈಕೋರ್ಟ್

ಬೆಂಗಳೂರು: ಪರಿಸರ ಮತ್ತು ಅರಣ್ಯ ಸಚಿವಾಲಯದ ಮಾರ್ಗಸೂಚಿಗಳ ಪ್ರಕಾರ ನದಿಗಳಲ್ಲಿ ಮರಳು ಗಾಣಿಗಾರಿಕೆ ನಡೆಸಲು ಮಳೆಗಾಲದಲ್ಲಿ ಅವಕಾಶ ಇಲ್ಲ ಎಂದು ಹೈಕೋರ್ಟ್ ಹೇಳಿದೆ.

2020ರ ಜೂನ್‌ನಲ್ಲಿ ಚಾಮರಾಜನಗರದಲ್ಲಿ ಗಣಿ ಮತ್ತು ಭೂವಿಜ್ಞಾನ ಇಲಾಖೆ ಉಪ ನಿರ್ದೇಶಕರು ಹೊರಡಿಸಿರುವ ಆದೇಶ ಸಂಬಂಧ ಸಲ್ಲಿಕೆಯಾಗಿದ್ದ ಅರ್ಜಿ ವಿಚಾರಣೆ ನಡೆಸಿದ ಮುಖ್ಯ ನ್ಯಾಯಮೂರ್ತಿ ಎ.ಎಸ್. ಓಕಾ ನೇತೃತ್ವದ ವಿಭಾಗೀಯ ಪೀಠ, ಈ ಆದೇಶ ನೀಡಿತು.

‘ಮರಳು ಗಣಿಗಾರಿಕೆಗೆ ಐದು ವರ್ಷಗಳ ಅವಧಿಗೆ ಅನುಮತಿ ನೀಡಿ 2017ರ ಆಗಸ್ಟ್ 10ರಂದು ಅನುಮತಿ ನೀಡಲಾಗಿದೆ. ಮಳೆಗಾಲದಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ಇಲ್ಲ. ಆದರೆ, ಗುತ್ತಿಗೆ ಕರಾರಿನಲ್ಲಿ ಈ ನಿರ್ಬಂಧ ವಿಧಿಸಿಲ್ಲ. ಈ ಸಂಬಂಧ ರಾಜ್ಯದಲ್ಲಿ ನಿಯಮಾವಳಿಯೂ ಇಲ್ಲ’ ಎಂದು ಅರ್ಜಿದಾರರು ತಿಳಿಸಿದ್ದಾರೆ.

‘ಪರಿಸರ ಮತ್ತು ಅರಣ್ಯ ಸಚಿವಾಲಯ ಹೊರಡಿಸಿರುವ ಮಾರ್ಗಸೂಚಿಗಳ 10ನೇ ಷರತ್ತಿನಲ್ಲಿ ಮಳೆಗಾಲದಲ್ಲಿ ನದಿ ಮರಳು ಗಣಿಗಾರಿಕೆಗೆ ಅವಕಾಶ ನೀಡಬಾರದು ಎಂದು ಸ್ಪಷ್ಟವಾಗಿ ಹೇಳಿದೆ. ರಾಜ್ಯದಲ್ಲಿ ಜೂನ್ 5ರಿಂದ ಅಕ್ಟೋಬರ್ 15ರ ತನಕ ಮಳೆಗಾಲ ಇರುವ ಕಾರಣ ಆ ಸಂದರ್ಭದಲ್ಲಿ ನದಿಗಳಲ್ಲಿ ಮರಳು ಗಣಿಗಾರಿಕೆಗೆ ಅವಕಾಶ ನೀಡಬಾರದು’ ಎಂದು ಪೀಠ ತಿಳಿಸಿದೆ.

ಮನೆಯಿಂದಲೇ ಪ್ರತಿರೋಧ ಚಳವಳಿ

ಬೆಂಗಳೂರು: ಎಲ್ಲರಿಗೂ ಕೋವಿಡ್ ಲಸಿಕೆ, ಲಾಕ್‌ಡೌನ್ ಸಂದರ್ಭದಲ್ಲಿ ಶ್ರಮಿಕ ವರ್ಗಕ್ಕೆ ಪ್ಯಾಕೇಜ್ ಘೋಷಣೆ ಮಾಡುವಂತೆ ಆಗ್ರಹಿಸಿ ಮನೆಗಳಲ್ಲೇ ಮತ್ತು ಕೆಲಸದ ಸ್ಥಳಗಳಲ್ಲೇ ಇದೇ 21ರಂದು ಪ್ರತಿರೋಧ ಚಳವಳಿ ನಡೆಸಲು ಸಿಐಟಿಯು, ಕೆಪಿಆರ್‌ಎಸ್(-ಕರ್ನಾಟಕ ಪ್ರಾಂತ ರೈತ ಸಂಘ) ಮತ್ತು ಎಐಎಡಬ್ಲ್ಯುಯು(ಕರ್ನಾಟಕ ಪ್ರಾಂತ ಕೃಷಿ ಕೂಲಿಕಾರರ ಸಂಘ) ನಿರ್ಧರಿಸಿವೆ.

ಆನ್‌ಲೈನ್‌ನಲ್ಲಿ ಪ್ರತಿರೋಧ ವ್ಯಕ್ತಪಡಿಸುವ ಸಂಬಂಧ ಪೂರ್ವಭಾವಿ ಸಭೆಗಳನ್ನು ಎರಡು ದಿನಗಳಿಂದ ನಡೆಸಲಾಗುತ್ತಿದೆ. ಮಂಗಳವಾರ ನಡೆದ ಆನ್‌ಲೈನ್ ಸಭೆಯಲ್ಲಿ ಮಾತನಾಡಿದ ಸಿಐಟಿಯು ಅಧ್ಯಕ್ಷೆ ಎಸ್.ವರಲಕ್ಷ್ಮಿ, ‘ಎರಡನೇ ಅಲೆಯಲ್ಲಿ ಸಾಕಷ್ಟು ಜನ ಪ್ರಾಣ ಕಳೆದುಕೊಂಡಿದ್ದಾರೆ. ಅಕ್ಟೋಬರ್‌ನಲ್ಲಿ ಮೂರನೇ ಅಲೆ ಬರಲಿದೆ ಎಂದು ತಜ್ಞರು ಹೇಳುತ್ತಿದ್ದಾರೆ. ಎಲ್ಲರಿಗೂ ಲಸಿಕೆ ನೀಡಲು ಕೂಡಲೇ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿದರು.




ಎಸ್‌.ವರಲಕ್ಷ್ಮಿ

ಸಿಐಟಿಯು ಪ್ರಧಾನ ಕಾರ್ಯದರ್ಶಿ ಮೀನಾಕ್ಷಿ ಸುಂದರಂ, ‘ಕಾರ್ಮಿಕರಿಗೆ ಇರುವ ಹಕ್ಕುಗಳನ್ನು ಕಿತ್ತು ಹಾಕುವ ಕಾನೂನುಗಳನ್ನು ಜಾರಿಗೆ ತರಲು ಸರ್ಕಾರ ತರಾತುರಿಯಲ್ಲಿದೆ. ಎಫ್‌ಕೆಸಿಸಿಐ ಮೂಲಕ ಕಾರ್ಖಾನೆಗಳ ಮಾಲೀಕರು ತಮಗೆ ಬೇಕಾದ ವಿನಾಯಿತಿಗಳನ್ನು ಪಡೆಯುತ್ತಿದ್ದಾರೆ. ಈ ರೀತಿಯ ರಾಜಕೀಯಗಳನ್ನು ಅರ್ಥ ಮಾಡಿಕೊಳ್ಳದೆ ಇದ್ದರೆ ಕಾರ್ಮಿಕ ವರ್ಗ ಮತ್ತು ದೇಶಕ್ಕೆ ಉಳಿಗಾಲವಿಲ್ಲ’ ಎಂದರು.



ಕೋವಿಡ್ ನಿರೋಧಕ ಮೌಖಿಕ ಔಷಧಿ ಬಿಡುಗಡೆ!



ಆಗಾಗ ಸಾಬೂನಿನಿಂದ ಕೈ ತೊಳೆಯುತ್ತಿರಿ



ವೈಯಕ್ತಿಕ ಸಾಲದ ಆಮಿಷ; ₹ 4.43 ಲಕ್ಷ ವಂಚನೆ

ಬೆಂಗಳೂರು: ವೈಯಕ್ತಿಕ ಸಾಲ ಕೊಡಿಸುವ ಆಮಿಷವೊಡ್ಡಿ ನಗರದ ನಿವಾಸಿಯೊಬ್ಬರಿಂದ ₹ 4.43 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಈಶಾನ್ಯ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದೇವನಹಳ್ಳಿಯ 25 ವರ್ಷದ ಯುವಕರೊಬ್ಬರು ವಂಚನೆ ಬಗ್ಗೆ ದೂರು ನೀಡಿದ್ದಾರೆ.

'ವೈಯಕ್ತಿಕ ಸಾಲ ಪಡೆಯಲೆಂದು ದೂರುದಾರ ಆನ್‌ಲೈನ್‌ನಲ್ಲಿ ಹುಡುಕಾಟ ನಡೆಸುತ್ತಿದ್ದರು. ಕೆಲ ಜಾಲತಾಣಗಳಲ್ಲಿ ನೋಂದಣಿಯನ್ನೂ ಮಾಡಿಕೊಂಡಿದ್ದರು. ಅದೇ ಮಾಹಿತಿ ಆಧರಿಸಿ ಅವರಿಗೆ ಕರೆ ಮಾಡಿದ್ದ ಆರೋಪಿ, ವೈಯಕ್ತಿಕ ಸಾಲ ಕೊಡಿಸುವುದಾಗಿ ಆಮಿಷವೊಡ್ಡಿದ್ದರು' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಇಂಡಿಯನ್ ಬುಲ್ಸ್ ಫೈನಾನ್ಸ್ ಕಂಪನಿಯಿಂದ ಸಾಲ ಮಂಜೂರಾಗಿರುವುದಾಗಿ ಹೇಳಿದ್ದ ಆರೋಪಿ, ಜಿಎಸ್‌ಟಿ, ವಿಮೆ ಹಾಗೂ ಇತರೆ ಶುಲ್ಕ ಪಾವತಿಸಬೇಕೆಂದು ಹೇಳಿದ್ದ. ಅದನ್ನು ನಂಬಿದ್ದ ದೂರುದಾರ, ಹಂತ ಹಂತವಾಗಿ ₹ 4.43 ಲಕ್ಷ ನೀಡಿದ್ದ. ಹಣ ಪಡೆದ ಆರೋಪಿ ನಾಪತ್ತೆಯಾಗಿದ್ದಾನೆ' ಎಂದೂ ಮೂಲಗಳು ಹೇಳಿವೆ.

ವಿಚಾರಣೆ ನೆಪದಲ್ಲಿ ವೈದ್ಯನಿಗೆ ಬೆದರಿಕೆ • ಇಬ್ಬರು ಹೆಡ್ ಕಾನ್‌ಸ್ಟೆಬಲ್‌ಗಳ ತಲೆದಂಡ

ಹಲ್ಲೆ: ಇನ್‌ಸ್ಪೆಕ್ಟರ್ ಅಮಾನತು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೆಮ್‌ಡಿಸಿವಿರ್ ಚುಚ್ಚುಮದ್ದು ಅಕ್ರಮ ಮಾರಾಟದ ವಿಚಾರಣೆ ನೆಪದಲ್ಲಿ ವೈದ್ಯನ ಮೇಲೆ ಹಲ್ಲೆ ಮಾಡಿ ಜೀವ ಬೆದರಿಕೆಯೊಡ್ಡಿದ್ದ ಪ್ರಕರಣದಲ್ಲಿ ಸಂಜಯನಗರ ಠಾಣೆ ಇನ್‌ಸ್ಪೆಕ್ಟರ್ ಕಾತ್ಯಾಯಿನಿ ಆಳ್ವ ಹಾಗೂ ಇಬ್ಬರು ಹೆಡ್ ಕಾನ್‌ಸ್ಟೆಬಲ್‌ಗಳ ತಲೆದಂಡವಾಗಿದೆ.

ನಗರದ ಶ್ರೀ ಸಾಯಿ ಆಸ್ಪತ್ರೆ ವೈದ್ಯ ಡಾ. ನಾಗರಾಜ್ ಅವರನ್ನು ವಿಚಾರಣೆ ನೆಪದಲ್ಲಿ ಠಾಣೆಗೆ ಕರೆಸಿ ಅಕ್ರಮ ಬಂಧನದಲ್ಲಿರಿಸಿ ಹಲ್ಲೆ ಮಾಡಲಾಗಿತ್ತು ಎನ್ನಲಾಗಿದೆ. ತೀವ್ರ ಗಾಯಗೊಂಡು ಚಿಕಿತ್ಸೆ ಪಡೆಯುತ್ತಿರುವ ಡಾ. ನಾಗರಾಜ್, ತಮ್ಮ ಮೇಲಾದ ಹಲ್ಲೆ ಬಗ್ಗೆ ಸೋಮವಾರ ವಿಡಿಯೊ ಹರಿಬಿಟ್ಟಿದ್ದರು.

ವಿಷಯ ಗಮನಕ್ಕೆ ಬರುತ್ತಿದ್ದಂತೆ ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ, ಪ್ರಕರಣದ ಬಗ್ಗೆ ತನಿಖೆ ನಡೆಸಿ ವರದಿ ಸಲ್ಲಿಸುವಂತೆ ಜೆ.ಸಿ. ನಗರ ಎಸಿಪಿ ರೀನಾ ಸುವರ್ಣ ಅವರಿಗೆ ಸೂಚಿಸಿದ್ದರು. ತನಿಖೆ ಪೂರ್ಣಗೊಳಿಸಿದ್ದ ಎಸಿಪಿ, ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ಅವರಿಗೆ ಮಂಗಳವಾರವೇ ವರದಿ ಸಲ್ಲಿಸಿದ್ದಾರೆ. ಅದೇ ವರದಿ ಆಧರಿಸಿ ಪೊಲೀಸ್ ಕಮಿಷನರ್ ಕಮಲ್ ಪಂತ್, ಇನ್‌ಸ್ಪೆಕ್ಟರ್ ಕಾತ್ಯಾಯಿನಿ ಹಾಗೂ ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಅಮಾನತು ಮಾಡಿ ಆದೇಶ ಹೊರಡಿಸಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ' ಜೊತೆ ಮಾತನಾಡಿದ ಕಮಲ್ ಪಂತ್, 'ಇನ್‌ಸ್ಪೆಕ್ಟರ್ ಹಾಗೂ ಇಬ್ಬರು ಸಿಬ್ಬಂದಿ ಮೇಲಿರುವ ಆರೋಪ ಪ್ರಾಥಮಿಕ ತನಿಖೆಯಿಂದ ಸಾಬೀತಾಗಿದೆ. ಮೂವರನ್ನೂ ಅಮಾನತು ಮಾಡಿ, ಅವರ ವಿರುದ್ಧ ಇಲಾಖಾ ವಿಚಾರಣೆಗೆ ಆದೇಶ ಹೊರಡಿಸಲಾಗಿದೆ' ಎಂದರು.

ಎತ್ತಂಗಡಿ ಆಗಿದ್ದ ಇನ್‌ಸ್ಪೆಕ್ಟರ್: ವೈದ್ಯರ ವಿಡಿಯೊ ಹೊರಬಂದ ಬೆನ್ನಲ್ಲೇ ಕಾತ್ಯಾಯಿನಿ ಹಾಗೂ ಇಬ್ಬರು ಹೆಡ್ ಕಾನ್‌ಸ್ಟೆಬಲ್‌ಗಳನ್ನು ಸಂಜಯನಗರ ಠಾಣೆಯಿಂದ ಎತ್ತಂಗಡಿ ಮಾಡಿ ಡಿಸಿಪಿ ಕಚೇರಿಗೆ ನಿಯುಕ್ತಿಗೊಳಿಸಲಾಗಿತ್ತು. ಇದೀಗ ಅವರನ್ನು ಸೇವೆಯಿಂದಲೇ ಅಮಾನತು ಮಾಡಲಾಗಿದೆ.

ವೈದ್ಯನ ವಿಡಿಯೊ: 'ವೃತ್ತಿಯನ್ನು ಗೌರವಿಸಿ ನನ್ನ ಪಾಡಿಗೆ ನಾನು ರೋಗಿಗಳಿಗೆ ಚಿಕಿತ್ಸೆ ನೀಡುತ್ತಿದ್ದೆ. ನನಗೂ ರೆಮ್‌ಡಿಸಿವಿರ್ ಚುಚ್ಚುಮದ್ದು ಮಾರಾಟಕ್ಕೂ ಯಾವುದೇ ಸಂಬಂಧವಿಲ್ಲ. ಯಾರೋ ನನ್ನ ಹೆಸರು ಹೇಳಿದರೆಂಬ ಕಾರಣಕ್ಕೆ ಇನ್‌ಸ್ಪೆಕ್ಟರ್ ಕಾತ್ಯಾಯಿನಿ ಹಾಗೂ ಸಿಬ್ಬಂದಿ ನನ್ನನ್ನು ಠಾಣೆಗೆ ಕರೆದೊಯ್ದು ಎರಡು ದಿನ ಅಕ್ರಮವಾಗಿ ಬಂಧನದಲ್ಲಿಟ್ಟುಕೊಂಡಿದ್ದರು' ಎಂದು ಡಾ. ನಾಗರಾಜ್ ವಿಡಿಯೊದಲ್ಲಿ ಹೇಳಿದ್ದರು.

'ಸುಖಾಸುಮ್ಮನೇ ನನ್ನನ್ನು ಮನಬಂದಂತೆ ಥಳಿಸಿದ್ದಾರೆ. ದೇಹದ ಹಲವು ಭಾಗಗಳಿಗೆ ಹೊಡೆದು, ಹಣವನ್ನೂ ಕಿತ್ತುಕೊಂಡಿದ್ದಾರೆ. ನನ್ನ ತಪ್ಪಿಲ್ಲವೆಂಬುದು ತಿಳಿಯುತ್ತಿದ್ದಂತೆ ಬಿಟ್ಟು ಕಳುಹಿಸಿದ್ದಾರೆ. ಇದೀಗ ಹಾಸಿಗೆ ಹಿಡಿದಿದ್ದು, ಈ ಸ್ಥಿತಿಗೆ ಕಾರಣರಾದ ಇನ್‌ಸ್ಪೆಕ್ಟರ್ ಹಾಗೂ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಿ' ಎಂದೂ ಒತ್ತಾಯಿಸಿದ್ದರು.

ಈ ಆರೋಪಕ್ಕೆ ಪ್ರತಿಕ್ರಿಯಿಸಿದ್ದ ಇನ್‌ಸ್ಪೆಕ್ಟರ್ ಕಾತ್ಯಾಯಿನಿ, 'ರೆಮ್‌ಡಿಸಿವಿರ್ ಚುಚ್ಚುಮದ್ದು ಮಾರುತ್ತಿದ್ದ ಕೆಲವರನ್ನು ಬಂಧಿಸಲಾಗಿತ್ತು. ಅವರು ನೀಡಿದ್ದ ಮಾಹಿತಿ ಆಧರಿಸಿ ಹಲವು ವೈದ್ಯರಿಗೆ ನೋಟಿಸ್ ನೀಡಲಾಗಿತ್ತು. ಯಾರ ಮೇಲೂ ಹಲ್ಲೆ ಮಾಡಿಲ್ಲ' ಎಂದಿದ್ದರು.

'₹ 5 ಲಕ್ಷ ವಾಪಸು ಪಡೆಯಲು ಪ್ರಯತ್ನ'


ಇನ್‌ಸ್ಪೆಕ್ಟರ್ ಕಾತ್ಯಾಯಿನಿ

'ಇನ್‌ಸ್ಪೆಕ್ಟರ್ ಕಾತ್ಯಾಯಿನಿ ಅವರ ಸಂಬಂಧಿಕರೊಬ್ಬರು ಡಾ. ನಾಗರಾಜ್ ಅವರ ಆಸ್ಪತ್ರೆಯಲ್ಲಿ ದಾಖಲಾಗಿದ್ದರು. ಅವರ ಚಿಕಿತ್ಸೆಗಾಗಿ ನಾಗರಾಜ್ ₹ 5 ಲಕ್ಷ ಬಿಲ್ ಮಾಡಿದ್ದರು. ಅದನ್ನು ವಾಪಸು ಪಡೆಯುವುದಕ್ಕಾಗಿ ಕಾತ್ಯಾಯಿನಿ ಪ್ರಯತ್ನಿಸುತ್ತಿದ್ದರು' ಎಂದು ಮೂಲಗಳು ಹೇಳಿವೆ.

'ನಾಗರಾಜ್ ಹಣ ಕೊಟ್ಟಿರಲಿಲ್ಲ. ಅವರನ್ನು ಹೆಡ್ ಕಾನ್‌ಸ್ಟೆಬಲ್‌ಗಳ ಮೂಲಕ ಠಾಣೆಗೆ ಕರೆಸಿದ್ದ ಕಾತ್ಯಾಯಿನಿ, ಹಣ ವಾಪಸು ನೀಡಿ ಎಂದಿದ್ದರು. ಅದಕ್ಕೆ ಒಪ್ಪದಿದ್ದಾಗ, 'ರೆಮ್‌ಡಿಸಿವಿರ್ ಚುಚ್ಚುಮದ್ದು ಅಕ್ರಮ ಪ್ರಕರಣದಲ್ಲಿ ನಿಮ್ಮನ್ನು ಆರೋಪಿಯನ್ನಾಗಿ ಮಾಡುತ್ತೇನೆ. ಜೈಲಿಗೆ ಕಳುಹಿಸುತ್ತೇನೆ. ಆ ರೀತಿ ಮಾಡಬಾರದು ಎಂದರೆ ಹಣವನ್ನು ವಾಪಸು ಕೊಟ್ಟು ಬಿಡಿ' ಎಂದು ಬೆದರಿಸಿದ್ದರು. ಅದಕ್ಕೂ ಒಪ್ಪದಿದ್ದಾಗಲೇ ಮನಬಂದಂತೆ ಹಲ್ಲೆ ಮಾಡಿರುವುದು ಪ್ರಾಥಮಿಕ ತನಿಖೆಯಿಂದ ಗೊತ್ತಾಗಿದೆ. ಈ ಬಗ್ಗೆ ಹೆಚ್ಚಿನ ವಿಚಾರಣೆ ನಡೆಯಬೇಕೆಂದು ಎಸಿಪಿ ವರದಿಯಲ್ಲಿ ಉಲ್ಲೇಖಿಸಿದ್ದಾರೆ' ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

'ಸಂಸ್ಕೃತಿಯಿಲ್ಲದ ಶಿಕ್ಷಣ ಅರ್ಥಹೀನ'

ಬೆಂಗಳೂರು: 'ಸಂಸ್ಕೃತಿಯು ಶಿಕ್ಷಣಕ್ಕೆ ದಾರಿ ಮಾಡಿಕೊಡುತ್ತದೆ. ಸಂಸ್ಕೃತಿಯಿಲ್ಲದ ಶಿಕ್ಷಣ ಅರ್ಥಹೀನ' ಎಂದು ಶಿಕ್ಷಣ ತಜ್ಞ ಡಾ.ಗುರುರಾಜ ಕರಜಗಿ ತಿಳಿಸಿದರು.

ಅಮೃತ ಅಂತರರಾಷ್ಟ್ರೀಯ ವಿದ್ಯಾಲಯವು ಇತ್ತೀಚೆಗೆ ಆನ್‌ಲೈನ್‌ನಲ್ಲಿ ಹಮ್ಮಿಕೊಂಡಿದ್ದ ಸಾಂಸ್ಕೃತಿಕ ಶಿಬಿರದಲ್ಲಿ ಭಾಗವಹಿಸಿ ಮಾತನಾಡಿದರು. 'ಪ್ರಕೃತಿಯ ಮೂಲವಾದ ಸಂಸ್ಕೃತಿಯನ್ನು ಅರಿತು ನಡೆಯಬೇಕು. ಮನೆಯೇ ಮೊದಲ ಪಾಠಶಾಲೆಯಾಗಿರುವ ಕಾರಣ ಮಕ್ಕಳ ಸರ್ವಾಂಗೀಣ ಪ್ರಗತಿಯಲ್ಲಿ ಪೋಷಕರ ಪಾತ್ರ ಮಹತ್ವದ್ದು. ಶಾಲೆಯಲ್ಲಿ ಶಿಕ್ಷಕರು ಪಾಠದ ಜತೆಗೆ ಸಂಸ್ಕೃತಿಯನ್ನು ಪ್ರದರ್ಶಿಸುತ್ತಾ ತಾವು ಮಾದರಿಯಾಗಬೇಕು' ಎಂದು ಹೇಳಿದರು.



ಕೇಂದ್ರ ಪ್ರೌಢ ಶಿಕ್ಷಣ ಮಂಡಳಿಯ (ಸಿಬಿಎಸ್‌ಇ) ನಿವೃತ್ತ ಶೈಕ್ಷಣಿಕ ನಿರ್ದೇಶಕ ಜಿ. ಬಾಲಸುಬ್ರಹ್ಮಣ್ಯಂ, 'ಮಕ್ಕಳಿಗೆ ಕಥೆಗಳ ಮೂಲಕ ಮೌಲ್ಯಗಳನ್ನು ಚಿಕ್ಕ ವಯಸ್ಸಿನಲ್ಲಿಯೇ ಬೆಳೆಸಬೇಕು. ವಿದ್ಯೆ ಮತ್ತು ಶಿಕ್ಷಣದ ವ್ಯತ್ಯಾಸವನ್ನು ಅರಿತು ಸಾಗಬೇಕು. ಶಾಲೆಯ ಪರಿಕಲ್ಪನೆ ಬದಲಾಯಿಸಿ, ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಳ್ಳಲು ಪ್ರೇರೇಪಿಸಬೇಕು' ಎಂದು ತಿಳಿಸಿದರು.

ಸಂಸ್ಕೃತಿ ಚಿಂತಕಿ ಆರತಿ ವಿ.ಬಿ., 'ಭಗವದ್ಗೀತೆಯು ಕೇವಲ ಕಥೆಯಲ್ಲ. ಅದು ಎಲ್ಲವನ್ನೂ ಮೀರಿದೆ. ಸತ್ಯ ಕಥೆಗಳ ಅನುಭವವನ್ನು ನಮಗೆ ನೀಡುತ್ತದೆ' ಎಂದು ಮೆಚ್ಚುಗೆ ವ್ಯಕ್ತಪಡಿಸಿದರು.

ಅಮೃತ ವಿಶ್ವ ವಿದ್ಯಾಪೀಠದ ಪ್ರಾಧ್ಯಾಪಕ ಡಾ. ಅರ್ಜುನ್, ಶಾಲೆಯ ನಿರ್ದೇಶಕರಾದ ಸ್ವಾಮೀಜಿ ವಿಶ್ವಮಿತ್ರ ಚೈತನ್ಯ, ಪ್ರಾಂಶುಪಾಲೆ ಡಾ.ಸೀತಾಲಕ್ಷ್ಮಿ ವಿಶ್ವನಾಥ್ ಮತ್ತಿತರರು ಇದ್ದರು.

ಆಮ್ಲಜನಕ ಸಾಧನ ಮಾರಾಟ ಹೆಸರಿನಲ್ಲಿ ವಂಚನೆ

ಬೆಂಗಳೂರು: ಆಮ್ಲಜನಕ ಸಾಂದ್ರೀಕರಣ ಸಾಧನ ಮಾರಾಟ ಮಾಡುವುದಾಗಿ ಹೇಳಿ ಕೊರೊನಾ ಸೋಂಕಿತರೊಬ್ಬರ ಮಗನಿಂದ ₹ 30 ಸಾವಿರ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ದಕ್ಷಿಣ ವಿಭಾಗದ ಸೈಬರ್ ಕ್ರೈಂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬನಶಂಕರಿ 3ನೇ ಹಂತದ ಕತ್ರಿಗುಪ್ಪೆ ಮುಖ್ಯ ರಸ್ತೆ ನಿವಾಸಿಯೊಬ್ಬರು ವಂಚನೆ ಸಂಬಂಧ ದೂರು ನೀಡಿದ್ದಾರೆ.

'ದೂರುದಾರರ ತಾಯಿಗೆ ಕೊರೊನಾ ಸೋಂಕು ತಗುಲಿತ್ತು. ಆಮ್ಲಜನಕಕ್ಕಾಗಿ ಸ್ನೇಹಿತರ ಬಳಿ ವಿಚಾರಿಸಿದ್ದರು. ಅವರಿಂದ ಆರೋಪಿಯ ಮೊಬೈಲ್ ನಂಬರ್ ಸಿಕ್ಕಿತ್ತು. ಆರೋಪಿಗೆ ಕರೆ ಮಾಡಿದಾಗ, 'ಆಮ್ಲಜನಕ ಸಾಂದ್ರೀಕರಣ ಸಾಧನವಿದೆ. ಅದಕ್ಕೆ ₹ 30,000 ಮುಂಗಡ ಹಣ ನೀಡಬೇಕು' ಎಂದಿದ್ದ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಮಾತು ನಂಬಿದ್ದ ದೂರುದಾರ ಹಣ ಪಾವತಿ ಮಾಡಿದ್ದರು. ಅದಾದ ನಂತರ ಆರೋಪಿ, ಯಾವುದೇ ಸಾಧನ ಕೊಟ್ಟಿಲ್ಲ. ಹಣವನ್ನೂ ವಾಪಸು ನೀಡದೇ ನಾಪತ್ತೆಯಾಗಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ವಿಕ್ಟೋರಿಯಾ ಆಸ್ಪತ್ರೆ: ವಾರ್ಡ್‌ಬಾಯ್ ಕೆಲಸ ಮಾಡುತ್ತಿದ್ದ ಬಾಲಕ ವಶಕ್ಕೆ

'ರೆಮ್‌ಡಿಸಿವಿರ್' ಕದ್ದು ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಕೊರೊನಾ ಸೋಂಕಿತರಿಗೆ ಚಿಕಿತ್ಸೆ ನೀಡಲು ಪೂರೈಸಲಾದ ರೆಮ್‌ಡಿಸಿವಿರ್ ಚುಚ್ಚುಮದ್ದುಗಳನ್ನು ಕಳವು ಮಾಡಿ ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ಜಾಲವನ್ನು ಪಶ್ಚಿಮ ವಿಭಾಗ ಪೊಲೀಸರು ಪತ್ತೆ ಮಾಡಿದ್ದಾರೆ.

ಕಳವು ಮಾಡಿದ್ದ ಚುಚ್ಚುಮದ್ದುಗಳನ್ನು ಕೆ.ಪಿ. ಅಗ್ರಹಾರ ಠಾಣೆ ವ್ಯಾಪ್ತಿಯಲ್ಲಿ ಮಾರಾಟ ಮಾಡಲು ಬಂದಿದ್ದ ಬಾಲಕನೊಬ್ಬನನ್ನು ಪೊಲೀಸರು ವಶಕ್ಕೆ ಪಡೆದಿದ್ದು, ಆತ ಜಾಲದ ಮಾಹಿತಿ ಬಾಯ್ಬಿಟ್ಟಿದ್ದಾನೆ.

'ವಿಕ್ಟೋರಿಯಾ ಆಸ್ಪತ್ರೆಯಲ್ಲಿ ವಾರ್ಡ್ ಬಾಯ್ ಆಗಿ ಕೆಲಸ ಮಾಡುತ್ತಿದ್ದ ಬಾಲಕ, ಕೊರೊನಾ ಸೋಂಕಿತ ಸಂಬಂಧಿಯೊಬ್ಬರಿಗೆ ದುಬಾರಿ ಬೆಲೆಗೆ ಚುಚ್ಚುಮದ್ದು ಮಾರಲು ಬಂದಾಗ ಸಿಕ್ಕಿಬಿದ್ದಿದ್ದಾನೆ. ಆತನಿಂದ ಚುಚ್ಚುಮದ್ದಿನ 8 ಬಾಟಲಿಗಳನ್ನು ಜಪ್ತಿ ಮಾಡಲಾಗಿದೆ. ಆತನ ಜೊತೆ ಹಲವರು ಕೃತ್ಯದಲ್ಲಿ ಭಾಗಿಯಾಗಿರುವ ಅನುಮಾನವಿದ್ದು, ತನಿಖೆ ಮುಂದುವರಿದಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಆಸ್ಪತ್ರೆ ಲಿಫ್ಟ್‌ನಲ್ಲಿ ಕಳವು: 'ವಿಕ್ಟೋರಿಯಾ ಆಸ್ಪತ್ರೆಗೆ ಬರುವ ಔಷಧಿಗಳನ್ನು ಲಿಫ್ಟ್ ಮೂಲಕ ಪ್ರತಿಯೊಂದು ಕೊಠಡಿಗೂ ಸರಬರಾಜು ಮಾಡಲಾಗುತ್ತದೆ. ಔಷಧಿಗಳನ್ನು ತೆಗೆದುಕೊಂಡು ಹೋಗುವ ವೇಳೆ ಸಂಬಂಧಪಟ್ಟ ಅಧಿಕಾರಿ ಹಾಗೂ ವಾರ್ಡ್ ಬಾಯ್ ಲಿಫ್ಟ್‌ನಲ್ಲಿ ಇರುತ್ತಾರೆ' ಎಂದು ಮೂಲಗಳು ಹೇಳಿವೆ.

'ಔಷಧಿ ಸರಬರಾಜು ಮಾಡುವ ಕೆಲಸಕ್ಕೆ ಬಾಲಕನನ್ನು ನಿಯೋಜಿಸಲಾಗಿತ್ತು. ಮೇ 13ರಂದು ಲಿಫ್ಟ್‌ನಲ್ಲಿ ಹೋಗುವಾಗಲೇ ಆತ, ರೆಮ್‌ಡಿಸಿವಿರ್ ಚುಚ್ಚುಮದ್ದು 8 ಬಾಟಲಿ ಇದ್ದ ಬಾಕ್ಸ್ ಕದ್ದಿದ್ದ. ಅದನ್ನೇ ಹೊರಗಡೆ ತಂದು ಕಾಳಸಂತೆಯಲ್ಲಿ ಮಾರುತ್ತಿದ್ದ ಎಂದು ಗೊತ್ತಾಗಿದೆ.'

'ಆಸ್ಪತ್ರೆಯಲ್ಲಿ ಸಿ.ಸಿ.ಟಿ.ವಿ ಕ್ಯಾಮೆರಾ ಇದ್ದು, ಭದ್ರತಾ ಸಿಬ್ಬಂದಿ ಸಹ ಇದ್ದಾರೆ. ಅವರೆಲ್ಲರ ಕಣ್ಣು ತಪ್ಪಿಸಿ ಚುಚ್ಚುಮದ್ದುಗಳನ್ನು ಬಾಲಕ ಹೊರಗಡೆ ತಂದಿದ್ದು ಹೇಗೆ ಎಂಬ ಪ್ರಶ್ನೆ ಎದುರಾಗಿದೆ. ಈತನ ಜೊತೆಯಲ್ಲಿ ಆಸ್ಪತ್ರೆಯ ಮತ್ತಷ್ಟು ಸಿಬ್ಬಂದಿ ಶಾಮೀಲಾಗಿರುವ ಶಂಕೆ ಇದೆ' ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಅಪರಾಧ ಸುದ್ದಿಗಳು

ಆಸ್ಪತ್ರೆಯಿಂದ ಚುಚ್ಚುಮದ್ದು ಕದ್ದು ಮಾರುತ್ತಿದ್ದ ಪ್ರಕರಣದಲ್ಲಿ ಬಾಲಕನನ್ನು ವಶಕ್ಕೆ ಪಡೆಯಲಾಗಿದೆ. ಆತ ಅಪ್ರಾಪ್ತನಾಗಿರುವುದರಿಂದ ಹೆಚ್ಚು ಮಾಹಿತಿ ಬಹಿರಂಗಪಡಿಸಲಾಗದು

ಸಂಜೀವ್ ಪಾಟೀಲ
ಪಶ್ಚಿಮ ವಿಭಾಗದ ಡಿಸಿಪಿ

ಕಾವೇರಿ ಆಸ್ಪತ್ರೆ ಶುಶ್ರೂಷಕ ಬಂಧನ


ಮನು

ಬೆಂಗಳೂರು: ರೆಮ್‌ಡಿಸಿವಿರ್ ಚುಚ್ಚುಮದ್ದು ಅಕ್ರಮವಾಗಿ ಮಾರುತ್ತಿದ್ದ ಆರೋಪದಡಿ ಕಾವೇರಿ ಆಸ್ಪತ್ರೆಯ ಶುಶ್ರೂಷಕ ಎನ್. ಮನು (26) ಎಂಬಾತನನ್ನು ಬೈಯಪ್ಪನಹಳ್ಳಿ ಪೊಲೀಸರು ಬಂಧಿಸಿದ್ದಾರೆ.

'ಚಾಮರಾಜನಗರ ಜಿಲ್ಲೆಯ ಬಿಸಲವಾಡಿಯ ಮನು, ನಗರದ ಕೋನಪ್ಪನ ಅಗ್ರಹಾರದಲ್ಲಿರುವ ಕಾವೇರಿ ಆಸ್ಪತ್ರೆಯಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದ. ಆತನಿಂದ ಚುಚ್ಚುಮದ್ದಿನ 13 ಬಾಟಲಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಬೈಯಪ್ಪನಹಳ್ಳಿ ಠಾಣೆ ವ್ಯಾಪ್ತಿಯ ಆಸ್ಪತ್ರೆಯೊಂದರ ಬಳಿ ರೆಮ್‌ಡಿಸಿವಿರ್ ಚುಚ್ಚುಮದ್ದು ಮಾರಲೆಂದು ಆರೋಪಿ ಬಂದಿದ್ದ. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಕಾರ್ಯಾಚರಣೆ ನಡೆಸಿ ಆತನನ್ನು ಬಂಧಿಸಲಾಗಿದೆ' ಎಂದೂ ತಿಳಿಸಿದರು.

'ಆಸ್ಪತ್ರೆಯ ತೀವ್ರ ನಿಗಾ ಘಟಕದಲ್ಲಿ (ಐಸಿಯು) ಕೆಲಸ ಮಾಡುತ್ತಿದ್ದ ಆರೋಪಿ, ಅಲ್ಲಿಯ ಸೋಂಕಿತರಿಗೆ ವೈದ್ಯರ ಸಲಹೆಯಂತೆ ಚುಚ್ಚುಮದ್ದು ನೀಡುತ್ತಿದ್ದ. ಕೊರೊನಾ ಸೋಂಕಿತರಿಗೆ ರೆಮ್‌ಡಿವಿವಿರ್ ಎರಡು ಬಾಟಲಿ ಬದಲು ಒಂದೇ ಬಾಟಲಿ ಚುಚ್ಚುಮದ್ದು ಕೊಡುತ್ತಿದ್ದ. ಒಂದನ್ನು ಕದ್ದುಕೊಂಡು ಬಂದು ಹೊರಗಡೆ ಮಾರಾಟ ಮಾಡುತ್ತಿದ್ದ.'

'ಕೊರೊನಾ ಸೋಂಕಿತರು ಹಾಗೂ ಅವರ ಸಂಬಂಧಿಕರನ್ನು ಸಂಪರ್ಕಿಸುತ್ತಿದ್ದ ಆರೋಪಿ, ಒಂದು ಬಾಟಲಿಗೆ ₹20 ಸಾವಿರದಿಂದ ₹ 25 ಸಾವಿರ ಪಡೆದು ಮಾರುತ್ತಿದ್ದ' ಎಂದೂ ಪೊಲೀಸರು ಹೇಳಿದರು.

ರೆಮ್‌ಡಿಸಿವಿರ್ ಕಾಳಸಂತೆ: ಆರೋಪಿಗೆ ಜಾಮೀನು ನಿರಕಾರಣೆ

ಬೆಂಗಳೂರು: ರೆಮ್‌ಡಿಸಿವಿರ್ ಚುಚ್ಚುಮದ್ದನ್ನು ಕಾಳಸಂತೆಯಲ್ಲಿ ಮಾರಾಟ ಮಾಡಿದ ಆರೋಪಿಗೆ ಜಾಮೀನು ನೀಡಲು ನಿರಾಕರಿಸಿರುವ ಹೈಕೋರ್ಟ್, ಜೀವ ಉಳಿಸುವ ಔಷಧಗಳನ್ನು ಕಾಳಸಂತೆಯಲ್ಲಿ ಮಾರಾಟ ಆಗುವುದನ್ನು ತಡೆಗಟ್ಟಬೇಕು ಎಂದು ತಿಳಿಸಿದೆ.

ರೆಮ್‌ಡಿಸಿವಿರ್ ಕಾಳಸಂತೆಯಲ್ಲಿ ಮಾರಾಟ ಮಾಡಿದ ಆರೋಪದಲ್ಲಿ ಬಂಧನದಲ್ಲಿರುವ ಸೊಹೈಲ್ ಪಾಷಾ ಅನಾರೋಗ್ಯದಿಂದ ಬಳಲುತ್ತಿರುವ ಕಾರಣ ಜಾಮೀನು ನೀಡಬೇಕು ಎಂದು ಅರ್ಜಿದಾರರ ಪರ ವಕೀಲರು ಕೋರಿದರು.

ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಸೂರಜ್ ಗೋವಿಂದ ಅವರಿದ್ದ ಪೀಠ, 'ಇವರಿಗೆ ಚುಚ್ಚುಮದ್ದು ಸಿಕ್ಕಿದ್ದು ಎಲ್ಲಿ ಎಂಬುದರ ಕುರಿತು ತನಿಖೆ ನಡೆಸಬೇಕು. ಈ ವಿಷಯದಲ್ಲಿ ಅಧಿಕಾರಿಗಳು ಶ್ಲಾಘನೀಯ ಕಾರ್ಯ ಮಾಡಿದ್ದಾರೆ. ಇನ್ನೂ ಹೆಚ್ಚಿನ ತನಿಖೆಯ ನಡೆಯಬೇಕಿದೆ. ಈ ರೀತಿಯ ದಂಧೆಯನ್ನು ನಿರ್ಮೂಲನೆ ಮಾಡಬೇಕಾದ ಅಗತ್ಯವಿದೆ' ಎಂದು ಪೀಠ ತಿಳಿಸಿದೆ.

ತನಿಖೆಯ ಅಂತಿಮ ವರದಿ ಸಲ್ಲಿಕೆಯಾದ ಬಳಿಕ ಜಾಮೀನು ಕೋರಿ ಹೊಸದಾಗಿ ಅರ್ಜಿ ಸಲ್ಲಿಸಬಹುದು ಎಂದು ತಿಳಿಸಿದೆ. ತಲಾ ₹7 ಸಾವಿರಕ್ಕೆ 5 ಚುಚ್ಚುಮದ್ದನ್ನು ಮಾರಾಟ ಮಾಡಿದ ಆರೋಪದಲ್ಲಿ ಪೊಲೀಸರು ಆರೋಪಿಯನ್ನು ಬಂಧಿಸಿದ್ದರು. ಏ.17ರಿಂದ ಸೊಹೈಲ್ ಪಾಷಾ ನ್ಯಾಯಾಂಗ ಬಂಧನದಲ್ಲಿದ್ದಾರೆ.

ಅಪಾಯಕಾರಿ ಸ್ಟಿರಾಯ್ಡ್: ಯುವ ಕಾಂಗ್ರೆಸ್ ವಿರುದ್ಧ ದೂರು

ಬೆಂಗಳೂರು: 'ಯುವ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷ ರಕ್ಷಾ ರಾಮಯ್ಯ ಹಾಗೂ ಇತರರು ಕೊರೊನಾ ಸೋಂಕಿತರಿಗೆ ಅಪಾಯಕಾರಿ ಸ್ಟಿರಾಯ್ಡ್ ನೀಡಿದ್ದಾರೆ. ಅವರ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕು' ಎಂದು ಒತ್ತಾಯಿಸಿ ಬಿಜೆಪಿ ಯುವ ಮೋರ್ಚಾ ಪದಾಧಿಕಾರಿಗಳು ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರಿಗೆ ಮಂಗಳವಾರ ದೂರು ನೀಡಿದ್ದಾರೆ.

'ವೈದ್ಯರ ಸಲಹೆ ಇಲ್ಲದೇ ವೈದ್ಯಕೀಯ ಕಿಟ್ ಸಿದ್ಧಪಡಿಸಿರುವ ಯುವ ಕಾಂಗ್ರೆಸ್, ಅದನ್ನೇ ಸೋಂಕಿತರಿಗೆ ನೀಡಿದೆ. ಅದರಲ್ಲಿರುವ ಸ್ಟಿರಾಯ್ಡ್ ಮನುಷ್ಯನ ಆರೋಗ್ಯದ ಮೇಲೆ ದುಷ್ಪರಿಣಾಮ ಬೀರಲಿದ್ದು, ಬೇರೆ ರೋಗಗಳಿಗೆ ದಾರಿ ಮಾಡಿಕೊಡಲಿದೆ' ಎಂದು ದೂರಿನಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ರೈಲ್ವೆ ಆಸ್ಪತ್ರೆಯಲ್ಲೂ ಚುಚ್ಚುಮದ್ದು ಕದ್ದು ಮಾರಾಟ: ಬಂಧನ

ಬೆಂಗಳೂರು: ವಿಭಾಗೀಯ ರೈಲ್ವೆ ಆಸ್ಪತ್ರೆಯಿಂದ ರೆಮ್‌ಡಿಸಿವಿರ್ ಚುಚ್ಚುಮದ್ದು ಕದ್ದು ಕಾಳಸಂತೆಯಲ್ಲಿ ಮಾರಾಟ ಮಾಡುತ್ತಿದ್ದ ನಾಲ್ವರು ನೌಕರರನ್ನು ರೈಲ್ವೆ ಪೊಲೀಸರು ಬಂಧಿಸಿದ್ದಾರೆ.

'ಖಚಿತ ಮಾಹಿತಿ ಮೇರೆಗೆ ಕಾರ್ಯಾಚರಣೆ ನಡೆಸಿ ನಾಲ್ವರನ್ನು ಬಂಧಿಸಲಾಗಿದೆ. ಸದ್ಯ ಅವರು ನ್ಯಾಯಾಂಗ ಬಂಧನದಲ್ಲಿದ್ದಾರೆ' ಎಂದು ರೈಲ್ವೆ ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿಗಳು ಗುತ್ತಿಗೆ ನೌಕರರು ಹಾಗೂ ಸಿ/ಡಿ ಗ್ರೂಪ್ ನೌಕರರು. ಆಸ್ಪತ್ರೆಯಲ್ಲಿ ಕೆಲಸ ಮಾಡುತ್ತಿದ್ದ ಆರೋಪಿಗಳು, ಚುಚ್ಚುಮದ್ದು ಕದಿಯುತ್ತಿದ್ದರು. ಹೊರಗಡೆ ತಂದು ಕೊರೊನಾ ಸೋಂಕಿತರು ಹಾಗೂ ಅವರ ಸಂಬಂಧಿಕರಿಗೆ ದುಬಾರಿಗೆ ಬೆಲೆಗೆ ಮಾರುತ್ತಿದ್ದರು' ಎಂದೂ ತಿಳಿಸಿವೆ.

ಆ್ಯಪ್ ಇನ್‌ಸ್ಟಾಲ್ ಮಾಡಿಸಿ ₹ 7.97 ಲಕ್ಷ ವಂಚನೆ

ಬೆಂಗಳೂರು: ಮೊಬೈಲ್ ಸೇವಾ ಕಂಪನಿ ಪ್ರತಿನಿಧಿಗಳ ಸೋಗಿನಲ್ಲಿ ಕರೆ ಮಾಡಿದ್ದ ಸೈಬರ್ ವಂಚಕರು, ನಗರದ ನಿವಾಸಿಗಳಿಬ್ಬರ ಮೊಬೈಲ್‌ನಲ್ಲಿ 'ಟೀಮ್ ವ್ಹೀವರ್' ಹೆಸರಿನ ಆ್ಯಪ್ ಇನ್‌ಸ್ಟಾಲ್ ಮಾಡಿಸಿ ₹ 7.97 ಲಕ್ಷ ವಂಚಿಸಿದ್ದಾರೆ.

ಈ ವಂಚನೆ ಸಂಬಂಧ ಪೂರ್ವ ವಿಭಾಗ ಹಾಗೂ ಪಶ್ಚಿಮ ವಿಭಾಗ ಸೈಬರ್ ಕ್ರೈಂ ಠಾಣೆಗಳಲ್ಲಿ ಪ್ರತ್ಯೇಕ ಪ್ರಕರಣಗಳು ದಾಖಲಾಗಿವೆ.

'ಲಿಂಗರಾಜಪುರ ನಿವಾಸಿಯಾದ ವೃದ್ಧರೊಬ್ಬರಿಗೆ ಬಿಎಸ್‌ಎನ್‌ಎಲ್ ಕಂಪನಿ ಪ್ರತಿನಿಧಿ ಸೋಗಿನಲ್ಲಿ ಕರೆ ಮಾಡಿದ್ದ ಆರೋಪಿ, 'ನಿಮ್ಮ ಮೊಬೈಲ್ ಸಂಖ್ಯೆ ಸದ್ಯದಲ್ಲೇ ನಿಷ್ಕ್ರಿಯವಾಗಲಿದೆ. ಆ ರೀತಿಯಾಗಬಾರದೆಂದರೆ ಟೀಮ್ ವ್ಹೀವರ್ ಆ್ಯಪ್ ಇನ್‌ಸ್ಟಾಲ್ ಮಾಡಿಕೊಂಡು ಮಾಹಿತಿ ಭರ್ತಿ ಮಾಡಿ' ಎಂದಿದ್ದ' ಎಂದು ಪೂರ್ವ ವಿಭಾಗ ಸೈಬರ್ ಕ್ರೈಂ ಪೊಲೀಸ್ ಮೂಲಗಳು ಹೇಳಿವೆ.

'ಆರೋಪಿ ಮಾತು ನಂಬಿದ್ದ ವೃದ್ಧ, ಆ್ಯಪ್ ಇನ್‌ಸ್ಟಾಲ್ ಮಾಡಿ ಮಾಹಿತಿ ತುಂಬಿದ್ದರು. ಅದಾದ ಕೆಲ ನಿಮಿಷಗಳಲ್ಲೇ ಅವರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಖಾತೆಯಿಂದ ಹಂತ ಹಂತವಾಗಿ ₹ 5.48 ಲಕ್ಷವನ್ನು ವಂಚಕರು ಡ್ರಾ ಮಾಡಿಕೊಂಡಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

₹ 2.49 ಲಕ್ಷ ಡ್ರಾ: 'ಏರ್‌ಟೆಲ್ ಕಂಪನಿ ಪ್ರತಿನಿಧಿ ಸೋಗಿನಲ್ಲಿ ಬಸವೇಶ್ವರನಗರ ನಿವಾಸಿಯೊಬ್ಬರಿಗೆ ಕರೆ ಮಾಡಿದ್ದ ಆರೋಪಿ, ಮೊಬೈಲ್ ಸಂಖ್ಯೆ ನಿಷ್ಕ್ರಿಯವಾಗುವುದಾಗಿ ಹೇಳಿ ಟೀಮ್ ವ್ಹೀವರ್ ಆ್ಯಪ್ ಇನ್‌ಸ್ಟಾಲ್ ಮಾಡಿಸಿದ್ದ. ಅದಾದ ನಂತರ ನಿವಾಸಿಯ ಬ್ಯಾಂಕ್ ಖಾತೆಯಲ್ಲಿದ್ದ ₹ 2.49 ಲಕ್ಷ ಡ್ರಾ ಮಾಡಿಕೊಂಡು ವಂಚಿಸಿದ್ದಾನೆ' ಎಂದು ಪಶ್ಚಿಮ ವಿಭಾಗದ ಸೈಬರ್ ಕ್ರೈಂ ಪೊಲೀಸ್ ಮೂಲಗಳು ಹೇಳಿವೆ. 'ಆ್ಯಪ್ ಇನ್‌ಸ್ಟಾಲ್ ಮಾಡಿದೊಡನೆ ಮೊಬೈಲ್‌ನ ಮಾಹಿತಿ ವಂಚಕರ ಕೈ ಸೇರುತ್ತದೆ. ಅದನ್ನು ಬಳಸಿಕೊಂಡು ಆರೋಪಿಗಳು ಹಣವನ್ನು ವರ್ಗಾಯಿಸಿಕೊಂಡು ವಂಚಿಸಿದ್ದಾರೆ' ಎಂದೂ ಮೂಲಗಳು ತಿಳಿಸಿವೆ.

ಮಣಿಪುರ: ಪತ್ರಕರ್ತ, ಸಾಮಾಜಿಕ ಕಾರ್ಯಕರ್ತನ ಬಂಧನ

ಇಂಫಾಲ (ಪಿಟಿಐ): 'ಹಸುವಿನ ಸಗಣಿ ಮತ್ತು ಗೋಮೂತ್ರದಿಂದ ಕೋವಿಡ್–19 ಸಾಂಕ್ರಾಮಿಕ ರೋಗ ವಾಸಿಯಾಗುವುದಿಲ್ಲ' ಎಂದು ಫೇಸ್‌ಬುಕ್ ಖಾತೆಗಳಲ್ಲಿ ಬರೆದುಕೊಂಡಿದ್ದ ಮಣಿಪುರದ ಪತ್ರಕರ್ತ ಕಿಶೋರ್‌ಚಂದ್ರ ವಾಂಗ್‌ಖೇಮ್ ಹಾಗೂ ಸಾಮಾಜಿಕ ಕಾರ್ಯಕರ್ತ ಎರೆಂಡ್ರೊ ಲೈಚೊಂಬಮ್ ಅವರ ವಿರುದ್ಧ ರಾಷ್ಟ್ರೀಯ ಭದ್ರತಾ ಕಾಯ್ದೆ ಅಡಿ (ಎನ್‌ಎಸ್‌ಎ) ಪ್ರಕರಣ ದಾಖಲಿಸಿರುವ ಪೊಲೀಸರು ಮಂಗಳವಾರ ಅವರನ್ನು ಬಂಧಿಸಿದ್ದಾರೆ.

ಮೋಡ ಕವಿದ ವಾತಾವರಣ: ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಹಲವು ದಿನಗಳಿಂದ ಮೋಡ ಕವಿದ ವಾತಾವರಣ ಕಾಣಿಸಿಕೊಳ್ಳುತ್ತಿದ್ದು, ಮಂಗಳವಾರ ಹಲವೆಡೆ ಮಳೆ ಸುರಿಯಿತು.

ಜ್ಞಾನಭಾರತಿ, ನಾಗರಬಾವಿ, ಕೋರಮಂಗಲ, ನಿಮ್ಹಾನ್ಸ್, ವಿಲ್ಸನ್ ಗಾರ್ಡನ್, ಹೆಣ್ಣೂರು, ಕೆ. ನಾರಾಯಣಪುರ, ಥಣಿಸಂದ್ರ ಹಾಗೂ ಸುತ್ತಮುತ್ತ ಸ್ಥಳಗಳಲ್ಲಿ ಜೋರು ಮಳೆಯಾಯಿತು.

ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ವಿಜಯನಗರ, ಬಸವೇಶ್ವರನಗರ, ಯಶವಂತಪುರ, ಪೀಣ್ಯ, ಮಲ್ಲೇಶ್ವರ ಹಾಗೂ ಸುತ್ತಮುತ್ತ ತುಂತುರು ಮಳೆ ಸುರಿಯಿತು.

ಕೆಲವೆಡೆ ರಸ್ತೆಗಳ ಮೇಲೆ ರಭಸವಾಗಿ ನೀರು ಹರಿಯಿತು. ಲಾಕ್‌ಡೌನ್ ಇದ್ದಿದ್ದರಿಂದ ವಾಹನಗಳ ಸಂಚಾರ ಕಡಿಮೆ ಇತ್ತು.

'ನಗರದ ಕೆಲ ಭಾಗದಲ್ಲಿ ಹೆಚ್ಚು ಮಳೆಯಾಗಿದೆ. ಉಳಿದಂತೆ ಸಾಧಾರಣ ಮಳೆ ಸುರಿದಿದೆ. ಹಾನಿ ಬಗ್ಗೆ ಯಾವುದೇ ದೂರುಗಳು ಬಂದಿಲ್ಲ' ಎಂದು ಬಿಬಿಎಂಪಿ ಸಹಾಯವಾಣಿ ಸಿಬ್ಬಂದಿ ಹೇಳಿದರು.


ನಗರದಲ್ಲಿ ಮಂಗಳವಾರ ಸಂಜೆ ಕಾಣಿಸಿದ್ದ ಕೋಲ್ಮಿಂಚು – ಪ್ರಜಾವಾಣಿ ಚಿತ್ರ/ ಅನೂಪ್ ರಾಘ . ಟಿ.

ಕೋವಿಡ್‌ನಿಂದ ರಕ್ಷಿಸುವಂತೆ ಕೋರಿ ಕೋಳಿ ಬಲಿ!

ಮಳವಳ್ಳಿ (ಮಂಡ್ಯ): ಇಡೀ ವಿಶ್ವವನ್ನು ಕಾಡುತ್ತಿರುವ ಕೊರೊನಾ ಸೋಂಕು ನಿಯಂತ್ರಣಕ್ಕೆ ವೈದ್ಯಕೀಯ ವಿಜ್ಞಾನ ಸಾಕಷ್ಟು ಶ್ರಮಿಸುತ್ತಿದೆ. ಆದರೆ ಇತ್ತ ಹಳ್ಳಿಯ ಜನರು, ಕೋವಿಡ್‌ನಿಂದ ಪಾರು ಮಾಡುವಂತೆ ಕೋರಿ ದೇವರಿಗೆ ಕೋಳಿ ಬಲಿ ಕೊಡುತ್ತಿದ್ದಾರೆ.

ರಸ್ತೆಯಲ್ಲಿ ಮೂರು ಕಲ್ಲುಗಳನ್ನು ಇಟ್ಟು ಅವುಗಳಿಗೆ ಪಟ್ಟಲದಮ್ಮ, ದಂಡಿನಮಾರಮ್ಮ, ಕಾಳಮ್ಮ ಎಂದು ಹೆಸರುಕೊಟ್ಟು ಪೂಜಿಸಿ, ಕೋಳಿ ಕೊಯ್ಯುತ್ತಿದ್ದಾರೆ.

ಕಲ್ಲಿಗೆ ಅರಿಶಿಣ–ಕುಂಕುಮ ಹಚ್ಚಿ, ಬೇವಿನ ಸೊಪ್ಪಿನಿಂದ ಸಿಂಗರಿಸಿದ್ದಾರೆ. ಪಟ್ಟಣದ ಎನ್‌ಇಎಸ್ ಬಡಾವಣೆ ಮುಖ್ಯರಸ್ತೆಯಲ್ಲೇ ಬಲಿ ಕೊಟ್ಟಿದ್ದರಿಂದ ರಸ್ತೆಯುದ್ದಕ್ಕೂ ರಕ್ತ ಸೋರಿತ್ತು. ಹೀಗೆ ಬಲಿ ಕೊಟ್ಟ ಕೋಳಿಯನ್ನು ಮನೆಗೆ ಕೊಂಡೊಯ್ದು ಅಡುಗೆ ಮಾಡಿ ಸೇವಿಸುತ್ತಿದ್ದಾರೆ. ಕೋಳಿ ತಲೆಯನ್ನು ದೇವರಿಗೆ ಅರ್ಪಿಸುತ್ತಿದ್ದು ಅದು ಪ್ರಾಣಿ–ಪಕ್ಷಿಗಳ ಪಾಲಾಗುತ್ತಿದೆ.

ರಾಜಸ್ಥಾನ: ಕಾಂಗ್ರೆಸ್ ಶಾಸಕ ರಾಜೀನಾಮೆ

ಜೈಪುರ (ಪಿಟಿಐ): ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರ ವಿರುದ್ಧ ದಂಗೆ ಎದ್ದ 19 ಶಾಸಕರಲ್ಲಿ ಒಬ್ಬರಾದ ಕಾಂಗ್ರೆಸ್ ಶಾಸಕ ಹೇಮರಾಮ್ ಚೌಧರಿ ಅವರು ಮಂಗಳವಾರ ರಾಜ್ಯ ವಿಧಾನಸಭೆ ಸದಸ್ಯತ್ವಕ್ಕೆ ರಾಜೀನಾಮೆ ನೀಡಿದ್ದಾರೆ.

ರಾಜೀನಾಮೆಗೆ ನಿಖರ ಕಾರಣಗಳು ತಕ್ಷಣಕ್ಕೆ ತಿಳಿದು ಬಂದಿಲ್ಲ ಎಂದು ಮೂಲಗಳು ತಿಳಿಸಿವೆ.

ಸಾಗರ್ ಕ್ಲಿನಿಕ್‌ಗೆ ಬೀಗ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಮಾರ್ಗಸೂಚಿಗಳ ಉಲ್ಲಂಘನೆ ಹಾಗೂ ರೋಗಿಗಳಿಗೆ ಸ್ಟಿರಾಯ್ಡ್ ನೀಡಿದ ಆರೋಪದಲ್ಲಿ ಡಾ. ರಾಜು ಕೃಷ್ಣಮೂರ್ತಿ ಅವರ ಮೂಡಲಪಾಳ್ಯದ ಸಾಗರ್ ಕ್ಲಿನಿಕ್ ಅನ್ನು ಮಂಗಳವಾರ ಮುಚ್ಚಿಸಲಾಗಿದೆ.

ಬೆಂಗಳೂರು ನಗರ ಜಿಲ್ಲಾ ಆರೋಗ್ಯಾಧಿಕಾರಿ ಡಾ.ಜಿ. ಶ್ರೀನಿವಾಸ್ ನೇತೃತ್ವದ ತಂಡವು ಪೊಲೀಸರ ನೆರವಿನೊಂದಿಗೆ ಕ್ಲಿನಿಕ್‌ಗೆ ಬೀಗ ಹಾಕಿಸಿದೆ.

ಮುಖಗವಸು ಧರಿಸುವುದು, ಅಂತರ ಕಾಯ್ದುಕೊಳ್ಳುವುದು ಸೇರಿದಂತೆ ಕೋವಿಡ್ ನಿಯಮಗಳನ್ನು ಪಾಲಿಸದೆಯೇ ಚಿಕಿತ್ಸೆ ನೀಡುತ್ತಿರುವುದಕ್ಕೆ ವೈದ್ಯಕೀಯ ವಲಯದಲ್ಲಿ ಆಕ್ಷೇಪ ವ್ಯಕ್ತವಾಗಿತ್ತು. ಸಾಂಕ್ರಾಮಿಕ ರೋಗಗಳ ತಡೆ ಕಾಯ್ದೆ ಹಾಗೂ ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆ ಕಾಯ್ದೆಯನ್ನು (ಕೆಪಿಎಂಇ) ಉಲ್ಲಂಘಿಸಿರುವುದಕ್ಕೆ ಕಾರಣ ಕೇಳಿ ಅವರಿಗೆ ಜಿಲ್ಲಾ ಆರೋಗ್ಯಾಧಿಕಾರಿ ಸೋಮವಾರ ನೋಟಿಸ್ ನೀಡಿದ್ದರು. ಆದರೆ, ನಿಯಮಗಳನ್ನು ಪಾಲಿಸದ ಕಾರಣ ಹಾಗೂ ಸ್ಪಷ್ಟನೆ ನೀಡದ ಕಾರಣ ವಿಜಯನಗರದ ಪೊಲೀಸರ ನೆರವಿನಿಂದ ಮುಚ್ಚಿಸಿದ್ದಾರೆ.

ಸಾರ್ವಜನಿಕರಿಂದ ಪ್ರತಿಭಟನೆ

ಡಾ.ರಾಜು ಅವರ ಕ್ಲಿನಿಕ್ ಅನ್ನು ಮುಚ್ಚುವುದಕ್ಕೆ ಸಾರ್ವಜನಿಕರು ಹಾಗೂ ರೋಗಿಗಳ ಕುಟುಂಬಸ್ಥರು ವಿರೋಧ ವ್ಯಕ್ತಪಡಿಸಿ, ಪ್ರತಿಭಟನೆ ನಡೆಸಿದರು. ಕ್ಲಿನಿಕ್ ಮುಚ್ಚಿಸಿದಲ್ಲಿ ರೋಗಿಗಳಿಗೆ ಸಮಸ್ಯೆಯಾಗಲಿದೆ. ವೈದ್ಯಕೀಯ ಮಾಫಿಯಾಕ್ಕೆ ಮಣಿದು ಅವರ ಕ್ಲಿನಿಕ್ ಮುಚ್ಚಿಸಲಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

'ರಾಜು ಅವರು ಕಡಿಮೆ ವೆಚ್ಚದಲ್ಲಿ ಚಿಕಿತ್ಸೆ ಒದಗಿಸುತ್ತಿದ್ದರು. ಕಾಯಿಲೆಯ ಬಗ್ಗೆ ಭಯ ದೂರಮಾಡಿ, ಆತ್ಮವಿಶ್ವಾಸ ತುಂಬುತ್ತಿದ್ದರು. ಅವರು ರೋಗಿಗಳ ಪಾಲಿಗೆ ದೇವರಾಗಿದ್ದರು. ಅವರು ನೀಡಿದ ಚಿಕಿತ್ಸೆಯಿಂದ ಕೋವಿಡ್ ಪೀಡಿತರು ಚೇತರಿಸಿಕೊಂಡಿದ್ದಾರೆ. ಅವರಿಗೆ ಚಿಕಿತ್ಸೆ ಮುಂದುವರಿಸಲು ಅವಕಾಶ ನೀಡಬೇಕು' ಎಂದು ಪ್ರತಿಭಟನನಿರತರು ಆಗ್ರಹಿಸಿದರು.

ಸಕ್ಕರೆ ಕಾರ್ಖಾನೆಗಳಿಗೆ ಸಚಿವ ಎಂಟಿಬಿ ನಾಗರಾಜ್ ಎಚ್ಚರಿಕೆ

ಬಾಕಿ ಪಾವತಿಸದ ಕಾರ್ಖಾನೆಗಳ ವಿರುದ್ಧ ಕ್ರಮ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಕ್ಕರೆ ಕಾರ್ಖಾನೆಗಳು ಕೂಡಲೇ ರೈತರಿಗೆ ಕಬ್ಬಿನ ಬಿಲ್ ಬಾಕಿ ಪಾವತಿ ಮಾಡದಿದ್ದರೆ, ಕಬ್ಬು(ನಿಯಂತ್ರಣ) ಕಾಯ್ದೆಯಡಿ ವಸೂಲಾತಿಗೆ ಕ್ರಮ ಕೈಗೊಳ್ಳಲಾಗುವುದು ಎಂದು ಪೌರಾಡಳಿತ ಮತ್ತು ಸಕ್ಕರೆ ಸಚಿವ ಎಂಟಿಬಿ ನಾಗರಾಜ್ ಎಚ್ಚರಿಕೆ ನೀಡಿದ್ದಾರೆ.

ಕೋವಿಡ್ ಎರಡನೇ ಅಲೆಯಿಂದ ಕಬ್ಬು ಬೆಳೆಗಾರರು ಆರ್ಥಿಕ ಸಂಕಷ್ಟದಲ್ಲಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಕಬ್ಬು ಬಿಲ್ ಬಾಕಿ ಉಳಿಸಿಕೊಂಡಿರುವುದು ಸರಿಯಲ್ಲ ಎಂದು ಅವರು ಹೇಳಿದ್ದಾರೆ.


ಎಂ.ಟಿ.ಬಿ.ನಾಗರಾಜ್

2020–21 ನೇ ಸಾಲಿನಲ್ಲಿ ಕಬ್ಬು ಅರೆಯುವ ಹಂಗಾಮಿನಲ್ಲಿ 64 ಸಕ್ಕರೆ ಕಾರ್ಖಾನೆಗಳು ಕಾರ್ಯ ನಿರ್ವಹಿಸುತ್ತಿವೆ. ಈ ಕಾರ್ಖಾನೆಗಳು ಏಪ್ರಿಲ್ 30 ರ ವೇಳೆಗೆ 440.84 ಲಕ್ಷ ಮೆಟ್ರಿಕ್ ಟನ್ ಕಬ್ಬು ಅರೆದು 42.94 ಲಕ್ಷ ಮೆಟ್ರಿಕ್ ಟನ್ ಸಕ್ಕರೆ ಉತ್ಪಾದಿಸಿವೆ. ಈ ಅವಧಿಯಲ್ಲಿ ₹13,348.10 ಕೋಟಿ ಬಿಲ್ ಪೈಕಿ ₹12,068.17 ಕೋಟಿ ಪಾವತಿ ಮಾಡಿದ್ದು, ₹1,324.49 ಕೋಟಿ ಬಾಕಿ ಇದೆ ಎಂದು ಅವರು ಹೇಳಿದರು.

ಪಾವತಿ ಪ್ರಮಾಣ ಶೇ 90 ರಷ್ಟು ಆಗಿದ್ದು, ಬಾಕಿ ಪ್ರಮಾಣ ಶೇ 10 ಇದೆ. ಪ್ರಸ್ತುತ ಕಬ್ಬು ಅರೆಯುವ ಹಂಗಾಮು ಜೂನ್ ತಿಂಗಳವರೆಗೆ ಚಾಲನೆಯಲ್ಲಿ ಇರುತ್ತದೆ ಎಂದು ನಾಗರಾಜ್ ತಿಳಿಸಿದರು.

ಕಬ್ಬಿನ ಬಿಲ್ ಪಾವತಿ ಮಾಡದಿರುವ ಕಾರ್ಖಾನೆಗಳಿಗೆ ಈಗಾಗಲೇ ನೋಟಿಸ್ ನೀಡಲಾಗಿದೆ. ಬಿಲ್ ವಸೂಲಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳಲು ಮತ್ತು ಕಾರ್ಖಾನೆಗಳು ಬಾಕಿ ಪಾವತಿಸದೇ ಇದ್ದಲ್ಲಿ, ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲು ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ ಎಂದು ಅವರು ಹೇಳಿದರು.

ಸಕ್ಕರೆ ಕಾರ್ಖಾನೆಗಳ ಹಳೆಯ ಬಾಕಿ ₹28.38 ಕೋಟಿಗಳಷ್ಟಿದೆ. ಇದರಲ್ಲಿ 2015–16 ನೇ ಸಾಲಿನ ₹11.37 ಕೋಟಿ, 2018–19 ನೇ ಸಾಲಿನ ₹11.20 ಕೋಟಿ ಮತ್ತು 2019–20 ನೇ ಸಾಲಿನ ₹5.80 ಕೋಟಿ ಸೇರಿದೆ. ಬಾಕಿ ಉಳಿಸಿಕೊಂಡಿರುವ ಈ ಕಾರ್ಖಾನೆಗಳು ನಿಷ್ಕ್ರಿಯವಾಗಿವೆ. ಆದ್ದರಿಂದ ಈ ಕಾರ್ಖಾನೆಗಳಿಗೆ ಸೇರಿದ ಚರ ಮತ್ತು ಸ್ಥಿರಾಸ್ತಿಗಳನ್ನು ಹರಾಜು ಪ್ರಕ್ರಿಯೆಗೆ ಒಳಪಡಿಸಿ ವಸೂಲಾತಿ ಕ್ರಮ ಜರುಗಿಸಲು ಸೂಚಿಸಲಾಗಿದೆ. ಆ ಪ್ರಕಾರ ಜಿಲ್ಲಾಧಿಕಾರಿಗಳು ಕ್ರಮ ತೆಗೆದುಕೊಳ್ಳುತ್ತಿದ್ದಾರೆ ಎಂದು ಅವರು ವಿವರಿಸಿದರು.

ಕೆಎಸ್‌ಆರ್‌ಪಿ 'ಕೋವಿಡ್ ಸಹಾಯವಾಣಿ ಕೇಂದ್ರ' ಆರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೊರೊನಾ ಸೋಂಕಿತರು ಹಾಗೂ ಅವರ ಕುಟುಂಬದವರಿಗೆ ಸಹಾಯ ಮಾಡುವ ಉದ್ದೇಶದಿಂದ ರಾಜ್ಯ ಪೊಲೀಸ್ ಮೀಸಲು ಪಡೆಯ (ಕೆಎಸ್‌ಆರ್‌ಪಿ) ಆವರಣದಲ್ಲಿ 'ಕೋವಿಡ್ ಸಹಾಯವಾಣಿ ಕೇಂದ್ರ' ಆರಂಭಿಸಲಾಗಿದ್ದು, ಎಡಿಜಿಪಿ ಅಲೋಕ್ ಕುಮಾರ್ ಅವರು ಕೇಂದ್ರವನ್ನು ಮಂಗಳವಾರ ಸೇವೆಗೆ ಮುಕ್ತಗೊಳಿಸಿದರು.

ಸಾರ್ವಜನಿಕರು, ಕೆಎಸ್‌ಆರ್‌ಪಿ/ಪೊಲೀಸ್ ಸಿಬ್ಬಂದಿ, ಅವರ ಕುಟುಂಬದವರಿಗೆ ಕೋವಿಡ್ ಸಂಬಂಧಿತ ವಿಷಯಗಳಲ್ಲಿ ತುರ್ತು ಸಂದರ್ಭದಲ್ಲಿ ಈ ಕೇಂದ್ರವು ಸಹಾಯ ಮಾಡಲಿದೆ. ಸೋಂಕಿತರ ಪ್ರಾಥಮಿಕ ಸಂಪರ್ಕಿತರಿಗೆ ಆರೋಗ್ಯ ರಕ್ಷಣೆ, ಆಹಾರ ಕ್ರಮದ ಬಗ್ಗೆಯೂ ಮಾಹಿತಿ ನೀಡಲಿದೆ. ವೈದ್ಯರೂ ಆರೋಗ್ಯದ ಬಗ್ಗೆ ಸಲಹೆ ನೀಡಲಿದ್ದಾರೆ.

ಕೋರಮಂಗಲದ ಕೆಎಸ್‌ಆರ್‌ಪಿ ಆವರಣದಲ್ಲಿ ಕಮಾಂಡೆಂಟ್‌ಗಳಾದ ರಘುನಾಥ್ ಹಾಗೂ ರಾಮಕೃಷ್ಣ ಪ್ರಸಾದ್ ನೇತೃತ್ವದಲ್ಲಿ ಈ ಕೇಂದ್ರ ಕಾರ್ಯನಿರ್ವಹಿಸಲಿದೆ. ನಗರದ ಆಸ್ಪತ್ರೆಗಳಲ್ಲಿ ಹಾಸಿಗೆಗಳ ಹಂಚಿಕೆ, ಆಮ್ಲಜನಕ, ಚುಚ್ಚುಮದ್ದು, ಲಸಿಕೆ, ಮಾತ್ರೆಗಳ ವ್ಯವಸ್ಥೆ ಮಾಡಲಿದೆ. ಮನೆ ಆರೈಕೆಯಲ್ಲಿ ಇರುವವರಿಗೆ ಸಹಾಯ ಹಾಗೂ ಅವರ ಅಗತ್ಯಗಳನ್ನೂ ಕೇಂದ್ರವು ಪೂರೈಸಲಿದೆ.


ರೆಮ್‌ಡಿಸಿವಿರ್ ಚುಚ್ಚುಮದ್ದು ಅಕ್ರಮ ಮಾರಾಟದ ಬಗ್ಗೆಯೂ ಕೇಂದ್ರಕ್ಕೆ ಮಾಹಿತಿ ನೀಡಬಹುದು.

ಕೋವಿಡ್ ಸಂದರ್ಭದಲ್ಲಿ ಪೊಲೀಸ್ ಕುಟುಂಬಗಳಿಗೆ ಸಹಾಯ ಮಾಡಿದ ಕೆಎಸ್‌ಆರ್‌ಪಿ ಎಆರ್‌ಎಸ್‌ಐ ಹಾದಿಮನಿಯವರ ಮಗಳು ಆಗಿರುವ ವಿಕ್ಟೋರಿಯಾ ಆಸ್ಪತ್ರೆ ಸಲಹೆಗಾರ್ತಿ ಡಾ. ಮುಮ್ತಾಜ್ ಅವರನ್ನು ಸನ್ಮಾನಿಸಲಾಯಿತು.

ಸಂಪರ್ಕ
ಮೊಬೈಲ್: 94808 06061
ದೂರವಾಣಿ ಸಂಖ್ಯೆ: 080 22942736

ಪ್ರಶ್ನೆ ಪತ್ರಿಕೆ ಸೋರಿಕೆ ಕಿಂಗ್ ಪಿನ್ ಶಿವಕುಮಾರ್ ಸಾವು

ಕೊರಟಗೆರೆ (ತುಮಕೂರು): ವಿವಿಧ ಪಶ್ನೆ ಪತ್ರಿಕೆಗಳ ಸೋರಿಕೆ ಪ್ರಕರಣದ ಪ್ರಮುಖ ಆರೋಪಿ ಶಿವಕುಮಾರ್ ಕೋವಿಡ್‌ನಿಂದ ಮಂಗಳವಾರ ಸಾವನ್ನಪ್ಪಿದ್ದಾರೆ.



ಗುಬ್ಬಿ ತಾಲ್ಲೂಕು ಬಿದರೆಕಾಗ್ಗೆರೆ ಗ್ರಾಮದವರಾಗಿದ್ದು, ಮೇ 16ರಂದು ಕೋವಿಡ್ ಚಿಕಿತ್ಸೆಗಾಗಿ ಇಲ್ಲಿನ ಸಾರ್ವಜನಿಕ ಆಸ್ಪತ್ರೆಗೆ ದಾಖಲಾಗಿದ್ದರು.

ಎಸ್ಸೆಸ್ಸೆಲ್ಸಿ, ದ್ವಿತೀಯ ಪಿಯು, ಪೊಲೀಸ್ ಸೇರಿದಂತೆ ವಿವಿಧ ಪರೀಕ್ಷೆಗಳ ಪ್ರಶ್ನೆ ಪತ್ರಿಕೆಗಳ ಸೋರಿಕೆಯಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ವಿವಿಧ ಪೊಲೀಸ್ ಠಾಣೆಗಳಲ್ಲಿ ಪ್ರಕರಣಗಳು ದಾಖಲಾಗಿದ್ದು, ವಿಚಾರಣೆ ಹಂತದಲ್ಲಿವೆ.

‘ಲಸಿಕೆ ಹೆಸರಿನಲ್ಲಿ ಕಾಂಗ್ರೆಸ್ ರಾಜಕಾರಣ’

ಬೆಂಗಳೂರು: ಕೋವಿಡ್ ಲಸಿಕೆಯ ಹೆಸರಿನಲ್ಲಿ ಕಾಂಗ್ರೆಸ್ ರಾಜಕೀಯ ಮಾಡುತ್ತಿದೆ. ಲಸಿಕೆ ಕುರಿತು ಅಪಪ್ರಚಾರ ಮಾಡಿದ ಕಾಂಗ್ರೆಸ್ ನಾಯಕರೇ ಈಗ ಲಸಿಕೆಗಾಗಿ ಪ್ರತಿಭಟನೆಯ ನಾಟಕ ಮಾಡುತ್ತಿದ್ದಾರೆ ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವಾಗ್ದಾಳಿ ನಡೆಸಿದರು.

ಮಂಗಳವಾರ ಮಾಧ್ಯಮ ಪ್ರತಿನಿಧಿಗಳ ಜತೆ ಮಾತನಾಡಿದ ಅವರು, ‘ಆರಂಭದಲ್ಲಿ ಲಸಿಕೆ ಸಂಶೋಧನೆಯ ಕುರಿತು ಕೇಂದ್ರ ಸರ್ಕಾರ ಪ್ರಕಟಿಸಿದಾಗ ಕಾಂಗ್ರೆಸ್ ನಾಯಕರು ಟೀಕಿಸಿದ್ದರು. ಕೋವಿಡ್ ಲಸಿಕೆ ‘ಡಿಸ್ಟಿಲ್ಡ್ ವಾಟರ್’ಗೆ ಸಮ ಎಂದು ಹೀಯಾಳಿಸಿದ್ದರು. ಈಗ ಅದೇ ಕಾಂಗ್ರೆಸ್ ಪಕ್ಷದ ಮಹಾನ್ ನಾಯಕರು ಗಾಂಧಿ ಪ್ರತಿಮೆ ಎದುರು ಪ್ರತಿಭಟನೆ ನಡೆಸಿದ್ದಾರೆ’ ಎಂದರು.

ಲಸಿಕೆ ಉತ್ಪಾದನೆ ಆರಂಭವಾದಾಗ ಕಾಂಗ್ರೆಸ್‌ನ ಅಪಪ್ರಚಾರದಿಂದ ಜನರು ದೂರ ಉಳಿದರು. ಆಗ ಉತ್ಪಾದಕರು ವಿದೇಶಗಳಿಗೆ ಲಸಿಕೆ ರಫ್ತು ಮಾಡಿದರು. ಈಗ ದೇಶದ ಜನರಿಗೆ ಲಸಿಕೆ ಇಲ್ಲದ ಸ್ಥಿತಿ ನಿರ್ಮಾಣವಾಗಿದೆ. ಈ ಪರಿಸ್ಥಿತಿ ಸೃಷ್ಟಿಯಾಗಲು ಕಾಂಗ್ರೆಸ್‌ನವರ ಪಾತ್ರವೂ ಇದೆ ಎಂದು ಟೀಕಿಸಿದರು.

ವಿಡಿಯೊ ಸಂವಾದದಲ್ಲಿ ಪ್ರಧಾನಿ ನರೇಂದ್ರ ಮೋದಿ ಸಲಹೆ: ಸಚಿವ ಬಸವರಾಜ ಬೊಮ್ಮಾಯಿ

ಗ್ರಾಮಮಟ್ಟದಲ್ಲಿ ಕೋವಿಡ್ ಕಾರ್ಯಪಡೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಮಗಳ ಮಟ್ಟದಲ್ಲಿ ಕೋವಿಡ್ ನಿಯಂತ್ರಣಕ್ಕೆ ಕಾರ್ಯಪಡೆಗಳನ್ನು ರಚಿಸಬೇಕು. ಅಲ್ಲದೆ, ಜಿಲ್ಲಾ ಮಟ್ಟದಲ್ಲಿ ಜನಪ್ರತಿನಿಧಿಗಳು ಮತ್ತು ಜಿಲ್ಲಾಧಿಕಾರಿಗಳು ‘ಫೀಲ್ಡ್ ಕಮಾಂಡರ್’ ರೀತಿ ಕಾರ್ಯ ನಿರ್ವಹಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಸಲಹೆ ನೀಡಿದ್ದಾರೆ.

ಪ್ರಧಾನಿ ಜತೆ ವಿಡಿಯೊ ಸಂವಾದದಲ್ಲಿ ಭಾಗವಹಿಸಿದ್ದ ಗೃಹ ಮತ್ತು ಕಾನೂನು ಸಚಿವ ಬಸವರಾಜ ಬೊಮ್ಮಾಯಿ ಈ ವಿಷಯವನ್ನು ಸುದ್ದಿಗಾರರಿಗೆ ತಿಳಿಸಿದರು. ರಾಜ್ಯದ 17 ಜಿಲ್ಲೆಗಳ ಜಿಲ್ಲಾಧಿಕಾರಿಗಳು ಸಭೆಯಲ್ಲಿ ಭಾಗವಹಿಸಿದ್ದರು.

ಗ್ರಾಮೀಣ ಮತ್ತು ಸಣ್ಣ ಪಟ್ಟಣಗಳಲ್ಲಿ ಕೋವಿಡ್ ವ್ಯಾಪಕವಾಗಿ ಹರಡುತ್ತಿದೆ. ಇದನ್ನು ನಿಯಂತ್ರಿಸುವುದು ದೊಡ್ಡ ಸವಾಲು. ಈ ಕೆಲಸಕ್ಕಾಗಿ ಗ್ರಾಮ ಪಂಚಾಯಿತಿ ಮಟ್ಟದಲ್ಲಿ ಕಾರ್ಯಪಡೆ ರಚಿಸುವುದು ಅಗತ್ಯ. ಇದಕ್ಕೆ ಸ್ತ್ರೀಶಕ್ತಿ, ಮಹಿಳಾ ಮತ್ತು ಯುವಕರ ಸಂಘ–ಸಂಸ್ಥೆಗಳ ನೆರವು ಪಡೆಯಬೇಕು. ಸೋಂಕಿತ ವ್ಯಕ್ತಿಯ ಪ್ರಥಮ ಮತ್ತು ದ್ವಿತೀಯ ಸಂಪರ್ಕಿತರ ಮೇಲೆ ನಿಗಾ ಇಟ್ಟು ಅವರಿಗೆ ಸೋಂಕು ತಗುಲದಂತೆ ಮಾಡಿದರೆ ನಿಯಂತ್ರಣ ಸಾಧ್ಯ ಎಂಬುದಾಗಿ ಸಲಹೆ ನೀಡಿದ್ದಾರೆ ಎಂದು ಹೇಳಿದರು.

ರಾಜ್ಯ ಸರ್ಕಾರದ ಮುಖ್ಯ ಆದೇಶಗಳನ್ನು ಸ್ಥಳೀಯ ಮಟ್ಟದಲ್ಲಿ ಕಾರ್ಯಗತಗೊಳಿಸುವ ಜವಾಬ್ದಾರಿ ಜಿಲ್ಲಾಧಿಕಾರಿಗಳದ್ದು. ಅದರ ಮೇಲುಸ್ತುವಾರಿ ಜಿಲ್ಲೆಯ ಜನಪ್ರತಿನಿಧಿಗಳದ್ದು. ಈ ಕೆಲಸವನ್ನು ಕೇವಲ ಜಿಲ್ಲಾಧಿಕಾರಿ ಅಲ್ಲದೆ, ಜಿಲ್ಲಾ ಮಟ್ಟದ ಎಲ್ಲ ಪ್ರಮುಖ ಅಧಿಕಾರಿಗಳೂ ಮಾಡಬೇಕಾಗಿದೆ. ಸ್ಥಳೀಯವಾಗಿ ಕೆಲ ಬದಲಾವಣೆ ಜತೆಗೆ ಕೋವಿಡ್ ನಿಯಂತ್ರಣ ಕ್ರಮಗಳನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಬೇಕು ಎಂದು ಪ್ರತಿಪಾದಿಸಿದರು.

‘ಚೆನ್ನೈನಲ್ಲಿ ಆಂಬುಲೆನ್ಸ್ ವ್ಯವಸ್ಥೆ ಉತ್ತಮವಾಗಿದೆ ಎಂದು ಪ್ರಧಾನಿಯವರು ಹೇಳಿದರು. ಅದನ್ನು ನಮ್ಮ ರಾಜ್ಯದಲ್ಲೂ ಅಳವಡಿಸಿಕೊಳ್ಳುವ ಬಗ್ಗೆ ಚಿಂತನೆ ನಡೆಸಲಾಗಿದೆ’ ಎಂದು ಬೊಮ್ಮಾಯಿ ತಿಳಿಸಿದರು.

ಮುಖ್ಯಮಂತ್ರಿ ಗೃಹ ಕಚೇರಿ ‘ಕೃಷ್ಣಾ’ದಲ್ಲಿ ವಿಡಿಯೊ ಸಂವಾದದಲ್ಲಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಭಾಗವಹಿಸಿದ್ದರು.

ಬಿಬಿಎಂಪಿ ಆಯುಕ್ತ ಗೌರವ್ ಗುಪ್ತಾ ಅವರು ಪ್ರಧಾನಿಯವರಿಗೆ ಬೆಂಗಳೂರಿನ ಕೋವಿಡ್ ಸ್ಥಿತಿಯ ಬಗ್ಗೆ ವಿವರಿಸಿದರು.

ಮೂರನೇ ಅಲೆ ತಡೆಯಲು ಕಾರ್ಯಕ್ರಮ

‘ಕೋವಿಡ್ ಮೂರನೇ ಅಲೆ ಮಕ್ಕಳನ್ನೇ ಹೆಚ್ಚಾಗಿ ಬಾಧಿಸುತ್ತದೆ ಎನ್ನಲಾಗುತ್ತಿದೆ. ಅದನ್ನು ತಡೆಯಲು ಅಗತ್ಯ ಕಾರ್ಯಕ್ರಮಗಳನ್ನು ರೂಪಿಸುವಂತೆ ಪ್ರಧಾನಿ ಸಲಹೆ ನೀಡಿದರು’ ಎಂದು ಸಚಿವ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕೋವಿಡ್ ಹರಡುವಿಕೆ ಬಗ್ಗೆ ಮಕ್ಕಳಲಗಲಿ ಅರಿವು ಮೂಡಿಸಲು ಅವರ ತಿಳಿವಳಿಕೆ ಮಟ್ಟಕ್ಕೆ ಇಳಿದು ಸ್ಥಳೀಯ ಭಾಷೆಯಲ್ಲಿ ಕಾರ್ಟೂನ್, ಲೇಖನ, ಕಥೆ ಮುಂತಾದವುಗಳು ಮೂಲಕ ಜಾಗೃತಿ ಮೂಡಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು ಎಂದೂ ಸಲಹೆ ನೀಡಿದ್ದಾಗಿ ಅವರು ಹೇಳಿದರು.

ಲಾಕ್‌ಡೌನ್ ವಿಸ್ತರಣೆ: ಇಂದು ತೀರ್ಮಾನ?

ಕೋವಿಡ್ ಲಾಕ್‌ಡೌನ್ ವಿಸ್ತರಿಸುವ ಮತ್ತು ಸಂಕಷ್ಟದಲ್ಲಿರುವವರಿಗೆ ವಿಶೇಷ ಆರ್ಥಿಕ ಪ್ಯಾಕೇಜ್ ನೀಡುವ ಬಗ್ಗೆ ಬುಧವಾರ ಬೆಳಿಗ್ಗೆ ನಡೆಯುವ ಸಚಿವರ ಸಭೆಯಲ್ಲಿ ತೀರ್ಮಾನ ತೆಗೆದುಕೊಳ್ಳುವ ಸಾಧ್ಯತೆ ಇದೆ.

ಸಭೆ ಬಳಿಕ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರು ಕೋವಿಡ್ ಸ್ಥಿತಿಗತಿಯ ಬಗ್ಗೆ ಸುದ್ದಿಗೋಷ್ಠಿ ನಡೆಸಲಿದ್ದು, ಅಲ್ಲಿ ತೀರ್ಮಾನ ಪ್ರಕಟಿಸಬಹುದು ಎಂದು ಮೂಲಗಳು ತಿಳಿಸಿವೆ.

ಲಾಕ್‌ಡೌನ್ ಇದೇ 24 ಕ್ಕೆ ಕೊನೆಗೊಳ್ಳಲಿದೆ. ಆದರೆ, ರಾಜ್ಯದಲ್ಲಿ ಕೋವಿಡ್ ಪ್ರಕರಣಗಳು ಕಡಿಮೆ ಆಗದಿರುವ ಕಾರಣ ಲಾಕ್‌ಡೌನ್ ಮುಂದುವರಿಸಬೇಕು ಎಂಬ ಒತ್ತಡ ಹೆಚ್ಚಾಗಿದೆ. ಬಹುತೇಕ ಎಲ್ಲ ಜಿಲ್ಲಾ ಉಸ್ತುವಾರಿ ಸಚಿವರು ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಹೀಗಾಗಿ ತಿಂಗಳ ಕೊನೆಯವರೆಗೆ ಲಾಕ್‌ಡೌನ್ ಮುಂದುವರಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.


ಲಾಕ್‌ಡೌನ್‌ನಿಂದ ಸಂಕಷ್ಟದಲ್ಲಿ ಇರುವವರಿಗಾಗಿ ಆರ್ಥಿಕ ಪ್ಯಾಕೇಜ್ ನೀಡಲು ಚಿಂತನೆ ನಡೆದಿದ್ದು, ನಾಳೆ ಈ ಬಗ್ಗೆ ತೀರ್ಮಾನ ತೆಗೆದುಕೊಂಡು, ಸಚಿವ ಸಂಪುಟದಲ್ಲಿ ಒಪ್ಪಿಗೆ ಪಡೆದು ಬಳಿಕ ಜಾರಿ ಮಾಡಬಹುದು. ಸಂಕಷ್ಟದಲ್ಲಿರುವವರಿಗೆ ಪ್ಯಾಕೇಜ್ ನೀಡಬೇಕು ಎಂದು ವಿರೋಧ ಪಕ್ಷಗಳೂ ಒತ್ತಾಯಿಸಿವೆ.

ಕಳೆದ ಬಾರಿಯಂತೆ ಪ್ಯಾಕೇಜ್ ಪ್ರಕಟಿಸುವ ಸಾಧ್ಯತೆ ಇಲ್ಲ. ತೀರಾ ಸಂಕಷ್ಟದಲ್ಲಿ ಇದ್ದವರಿಗೆ ಸೀಮಿತವಾಗಿ ಆರ್ಥಿಕ ನೆರವಿನ ಪ್ಯಾಕೇಜ್ ನೀಡಬಹುದು ಎಂದು ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಕಲಾವಿದರಿಗೆ ಮಾಸಾಶನ ಬಿಡುಗಡೆ: ಮಂಜಮ್ಮ ಜೋಗತಿ

ಮರಿಯಮ್ಮನಹಳ್ಳಿ: ರಾಜ್ಯದಲ್ಲಿ ಕಷ್ಟ ಪರಿಸ್ಥಿತಿಯಲ್ಲಿರುವ ಸಾಹಿತಿ, ಕಲಾವಿದರು, ವಿಧವೆಯರ ಮಾಸಾಶನವನ್ನು ಸರ್ಕಾರ ಬಿಡುಗಡೆ ಮಾಡಿದ್ದು, ಇದರಿಂದ ಕಲಾವಿದರ ಕುಟುಂಬದ ಜೀವನಕ್ಕೆ ಆಸರೆಯಾಗಿದೆ ಎಂದು ಜಾನಪದ ಅಕಾಡೆಮಿ ಅಧ್ಯಕ್ಷೆ ಮಂಜಮ್ಮ ಜೋಗತಿ ತಿಳಿಸಿದರು.



‘ಕೋವಿಡ್ ನಿಂದಾಗಿ ಕಲಾವಿದರ ಜೀವನ ಕಷ್ಟದಲ್ಲಿದೆ. ಈ ಬಗ್ಗೆ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಚಿವರೊಂದಿಗೆ ಹಾಗೂ ಇಲಾಖೆಯ ಅಧಿಕಾರಿಗಳೊಂದಿಗೆ ಮಾಸಾಶನ ಬಿಡುಗಡೆ ಮಾಡುವಂತೆ ಮನವಿ ಮಾಡಿಕೊಂಡಿದ್ದೆ. ಇದಕ್ಕೆ ಸ್ಪಂದಿಸಿದ ಸಚಿವರು, ಹಣಕಾಸು ಇಲಾಖೆಯಿಂದ ಒಟ್ಟು ₹25 ಕೋಟಿ ಪೈಕಿ ಮೊದಲ ಹಂತದಲ್ಲಿ ₹6.25 ಕೋಟಿ ಬಿಡುಗಡೆಗೊಳಿಸಿದ್ದಾರೆ. ಇದರಿಂದ ರಾಜ್ಯದ ಕಲಾವಿದರಿಗೆ ಎರಡು ತಿಂಗಳ ಮಾಸಾಶನ ದೊರಕಿದಂತಾಗಿದೆ. ಕಲಾವಿದರಿಗೆ ಔಷಧೋಪಚಾರಕ್ಕೆ ದಿನಸಿ ಕೊಳ್ಳಲು ಅನುಕೂಲವಾಗಲಿದೆ’ ಎಂದು ಹೇಳಿದರು.

‘ವೈದ್ಯರ ನಡೆ ಹಳ್ಳಿಯ ಕಡೆ’ಗೆ ಸೂಚನೆ

ಭಟ್ಕಳ/ಉಡುಪಿ: ‘ಹಳ್ಳಿಗಳಲ್ಲಿ ಕೋವಿಡ್ ಪರೀಕ್ಷೆ ಜನರು ಮುಂದೆ ಬರುತ್ತಿಲ್ಲ ಎಂಬ ದೂರುಗಳಿವೆ. ಆದ್ದರಿಂದ ವೈದ್ಯರ ತಂಡವನ್ನೇ ಹಳ್ಳಿಗಳಿಗೆ ಕಳುಹಿಸುವ ‘ವೈದ್ಯರ ನಡೆ ಹಳ್ಳಿಯ ಕಡೆ’ ಪರಿಕಲ್ಪನೆಯನ್ನು ಎಲ್ಲ ಜಿಲ್ಲೆಗಳಲ್ಲಿ ಆರಂಭಿಸಲಾಗುವುದು. ಈ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಸೂಚನೆ ನೀಡಲಾಗಿದೆ’ ಎಂದು ಕಂದಾಯ ಸಚಿವ ಆರ್.ಅಶೋಕ ಹೇಳಿದರು.

‘ತೌತೆ’ ಚಂಡಮಾರುತದಿಂದ ಭಟ್ಕಳ ತಾಲ್ಲೂಕಿನಲ್ಲಿ ಆಗಿರುವ ಹಾನಿಯನ್ನು ಮಂಗಳವಾರ ಪರಿಶೀಲಿಸಿ ಅವರು ಸುದ್ದಿಗಾರರ ಜೊತೆ ಮಾತನಾಡಿದರು.

ಈ ಕಾರ್ಯಕ್ಕೆ ಪ್ರತಿ ತಾಲ್ಲೂಕಿನಿಂದ 15 ವೈದ್ಯರು ಹಾಗೂ 40 ನರ್ಸಿಂಗ್ ಸಿಬ್ಬಂದಿಯನ್ನು ಬಳಸಿಕೊಳ್ಳಲು ತೀರ್ಮಾನಿಸಲಾಗಿದೆ ಎಂದು ಅವರು ಉಡುಪಿಯಲ್ಲಿ ಸುದ್ದಿಗಾರರಿಗೆ ಮಾಹಿತಿನೀಡಿದರು.



ನಂಜನಗೂಡಿನ ಶ್ರೀಕಂಠೇಶ್ವರನ ಸನ್ನಿಧಿಯಲ್ಲಿ ಬಿ.ವೈ.ವಿಜಯೇಂದ್ರ ದಂಪತಿ

ನಿರ್ಬಂಧದ ನಡುವೆಯೂ ವಿಜಯೇಂದ್ರ ವಿಶೇಷ ಪೂಜೆ

ಪ್ರಜಾವಾಣಿ ವಾರ್ತೆ

ನಂಜನಗೂಡು: ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಪುತ್ರ, ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಬಿ.ವೈ.ವಿಜಯೇಂದ್ರ ಅವರು ಪತ್ನಿ ಸಮೇತರಾಗಿ ಮಂಗಳವಾರ ಶ್ರೀಕಂಠೇಶ್ವರಸ್ವಾಮಿ ದೇಗುಲದಲ್ಲಿ ವಿಶೇಷ ಪೂಜೆ ಸಲ್ಲಿಸಿದರು.

ಬೆಳಿಗ್ಗೆ 8 ಗಂಟೆ ಹೊತ್ತಿಗೆ ದೇಗುಲಕ್ಕೆ ಬಂದ ವಿಜಯೇಂದ್ರ ದಂಪತಿ, ಅರ್ಧ ಗಂಟೆ ಶ್ರೀಕಂಠೇಶ್ವರನ ಗರ್ಭಗುಡಿಯಲ್ಲಿದ್ದು, ವಿವಿಧ ಪೂಜೆ ಸಲ್ಲಿಸಿದರು ಎಂದು ಅರ್ಚಕರು ತಿಳಿಸಿದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಕೋವಿಡ್ ಪೀಡಿತರಾಗಿದ್ದರು. ವಿಜಯೇಂದ್ರ ಸಹ ಸೋಂಕಿತರಾಗಿದ್ದರು. ತಂದೆ–ಮಗ ಇಬ್ಬರೂ ಗುಣಮುಖರಾಗಿದ್ದರಿಂದ ಶ್ರೀಕಂಠೇಶ್ವರನಿಗೆ ಹರಕೆ ತೀರಿಸಿದರು ಎಂದು ದೇಗುಲದ ಮೂಲಗಳು ‘ಪ್ರಜಾವಾಣಿ’ಗೆ ತಿಳಿಸಿವೆ.

ಕಪಿಲೆ ತಟದಲ್ಲೂ ಪೂಜೆ: ಇದಕ್ಕೂ ಮುನ್ನ ವಿಜಯೇಂದ್ರ ದಂಪತಿ ಕಪಿಲಾ ನದಿ ತಟದಲ್ಲೂ ಪೂಜೆ ಸಲ್ಲಿಸಿದರು.

ಹದಿನಾರು ಕಾಲು ಮಂಟಪದ ಬಳಿ ಹೊಸದಾಗಿ ನಿರ್ಮಿಸಿರುವ ಸೋಪಾನದ ಸಮೀಪ ಸಪ್ತ ನದಿ ಪೂಜೆ ಮಾಡಿದರು. ಕೋವಿಡ್–19 ನಿಂದ ರಾಜ್ಯವನ್ನು ರಕ್ಷಿಸುವಂತೆ ಕಪಿಲೆಗೆ ಬಾಗಿನ ಅರ್ಪಿಸಿದರು. ನದಿಯ ತಟದಲ್ಲೇ, ಮನೆ ದೈವ ಎಡೆಯೂರು ಸಿದ್ದಲಿಂಗೇಶ್ವರ, ಶ್ರೀಕಂಠೇಶ್ವರ–ಪಾರ್ವತಿ ದೇವಿ ಪ್ರತಿಷ್ಠಾಪಿಸಿ ಕೃಷ್ಣಜೋಯಿಸ್ ನೇತೃತ್ವದಲ್ಲಿ ವಿಶೇಷ ಪೂಜೆ ಸಲ್ಲಿಸಿದರು ಎಂದು ಮೂಲಗಳು ತಿಳಿಸಿವೆ.

ಸ್ಥಳೀಯರ ಆಕ್ರೋಶ: ಸೋಂಕು ಮತ್ತೆ ತೀವ್ರವಾಗಿ ಹರಡಲಾರಂಭಿಸುತ್ತಿದ್ದಂತೆ ಶ್ರೀಕಂಠೇಶ್ವರ ದೇಗುಲಕ್ಕೆ ಭಕ್ತರ ಪ್ರವೇಶ ನಿರ್ಬಂಧಿಸಲಾಗಿತ್ತು. ದೈನಂದಿನ ಪೂಜೆ ಸಲ್ಲಿಸಲು ಅರ್ಚಕ ಸಮೂಹಕ್ಕಷ್ಟೇ ಅವಕಾಶವಿತ್ತು. ಆದರೆ, ಭಕ್ತರಿಗೆ ನಿರ್ಬಂಧವಿರುವ ಅವಧಿಯಲ್ಲೇ ವಿಜಯೇಂದ್ರ ದಂಪತಿ ದೇಗುಲಕ್ಕೆ ಭೇಟಿ ನೀಡಿ, ಪೂಜೆ ಸಲ್ಲಿಸಿರುವುದಕ್ಕೆ ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ದೇಗುಲದ ಆಡಳಿತ ಮಂಡಳಿ ನಿರ್ಧಾರವನ್ನು ಟೀಕಿಸಿದ್ದಾರೆ. ಸಾಮಾಜಿಕ ಜಾಲತಾಣದಲ್ಲೂ ಟೀಕೆ ವ್ಯಕ್ತವಾಗಿದೆ.

ವಿಜಯೇಂದ್ರ ದಂಪತಿ ಪೂಜೆಗೆ ಯಡಿಯೂರಪ್ಪ ತಂಗಿಯ ಪುತ್ರ, ಮೈಮುಲ್ ನಾಮನಿರ್ದೇಶಿತ ಸದಸ್ಯ ಎಸ್.ಸಿ.ಅಶೋಕ್, ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ ಸಾಥ್ ನೀಡಿದ್ದರು ಎಂಬುದು ಗೊತ್ತಾಗಿದೆ. ಈ ಸಂದರ್ಭದಲ್ಲಿ ಸ್ಥಳೀಯರು ತೆಗೆದ ಫೋಟೊಗಳನ್ನು ಡಿಲಿಟ್ ಮಾಡಿಸಿದರು ಎನ್ನಲಾಗಿದೆ.

ವಿವಿಧೆಡೆ ಉತ್ತಮ ಮಳೆ

ಮಂಗಳೂರು: ಕರಾವಳಿ ಹಾಗೂ ಚಿಕ್ಕಮಗಳೂರಿನಲ್ಲಿ ಮಂಗಳವಾರ ಸಾಧಾರಣ ಮಳೆಯಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯ ವಿಟ್ಲ ಮುಡ್ನೂರು ಗ್ರಾಮದ ಪೈಸಾರಿಯಲ್ಲಿ ಸಿಡಿಲು ಬಡಿದು ಇಬ್ಬರು ಮಹಿಳೆಯರು ಗಾಯಗೊಂಡಿದ್ದಾರೆ. ಅವರನ್ನು ವಿಟ್ಲ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಲಾಗಿದೆ.

ಉಡುಪಿ ಜಿಲ್ಲೆಯಲ್ಲಿ ಸಾಧಾರಣ ಮಳೆ ಸುರಿಯಿತು.

ಚಿಕ್ಕಮಗಳೂರು ಕೊಪ್ಪ, ಎನ್.ಆರ್. ಪುರ, ಶೃಂಗೇರಿ, ತರೀಕೆರೆ ಭಾಗದಲ್ಲಿ ಮಳೆಯಾಗಿದೆ. ಮಡಿಕೇರಿ ವರದಿ: ಕೊಡಗು ಹಾಗೂ ಹಾಸನ ಜಿಲ್ಲೆಗಳಲ್ಲಿ ಮಂಗಳವಾರ ಉತ್ತಮ ಮಳೆಯಾಗಿದೆ.

ಕೊಡಗಿನ ಹಾತೂರು, ಗೋಣಿಕೊಪ್ಪಲು, ತಿತಿಮತಿ ಭಾಗದಲ್ಲಿ ಮಧ್ಯಾಹ್ನ ಅರ್ಧ ಗಂಟೆ ಮಳೆ ಸುರಿಯಿತು.

ಹಾಸನ ನಗರ ಸೇರಿದಂತೆ ಜಿಲ್ಲೆಯ ಸಕಲೇಶಪುರ, ಆಲೂರು, ಬೇಲೂರು, ಅರಕಲಗೂಡು, ಚನ್ನರಾಯಪಟ್ಟಣ ಹಾಗೂ ನುಗ್ಗೇಹಳ್ಳಿಯಲ್ಲಿ ಉತ್ತಮ ಮಳೆಯಾಗಿದೆ.

ಬೆಳಗಾವಿ ವರದಿ: ಬೆಳಗಾವಿ ನಗರ, ಬೈಲಹೊಂಗಲ, ಎಂ.ಕೆ. ಹುಬ್ಬಳ್ಳಿ, ಖಾನಾಪುರ, ಹಾರೂಗೇರಿ, ಹಿರೇಬಾಗೇವಾಡಿ ಪ್ರದೇಶದಲ್ಲಿ ಮಂಗಳವಾರ ಆಗಾಗ ಸಾಧಾರಣ ಮಳೆಯಾಗಿದೆ.

ದಾವಣಗೆರೆ ವರದಿ: ದಾವಣಗೆರೆ ನಗರ ಸೇರಿ ಜಿಲ್ಲೆಯ ಹಲವೆಡೆ ಉತ್ತಮ ಮಳೆಯಾಗಿದೆ. ಚಿತ್ರದುರ್ಗ, ಶಿವಮೊಗ್ಗ ಜಿಲ್ಲೆಯಲ್ಲಿ ಸಾಧಾರಣ ಮಳೆಯಾಗಿದೆ.

ಕೋವಿಡ್ ಫಲಿತಾಂಶದಲ್ಲಿ ಗೊಂದಲ

ಬೆಂಗಳೂರು: ಕೋವಿಡ್ ಎರಡನೇ ಅಲೆ ಕಾಣಿಸಿಕೊಂಡ ಬಳಿಕ ಕೆಲ ಪ್ರಕರಣಗಳಲ್ಲಿ ಆರ್‌ಟಿ–ಪಿಸಿಆರ್ ಪರೀಕ್ಷೆಯಲ್ಲಿ ಕೂಡ ಸೋಂಕು ದೃಢಪಡುತ್ತಿಲ್ಲ. ಹೀಗಾಗಿ, ಲಕ್ಷಣಗಳಿರುವವರಿಗೆ ಪರೀಕ್ಷೆಯಲ್ಲಿ ನೆಗೆಟಿವ್ ಫಲಿತಾಂಶ ಬಂದಲ್ಲಿ ಸಿ.ಟಿ ಸ್ಕ್ಯಾನ್‌ಗೆ ಶಿಫಾರಸು ಮಾಡಲಾಗುತ್ತಿದೆ. ಇದರಿಂದಾಗಿ ಕೆಲ ಪ್ರಕರಣಗಳಲ್ಲಿ ಒಬ್ಬನೇ ವ್ಯಕ್ತಿ ಎರಡು ಬಾರಿ ಪರೀಕ್ಷೆಗೆ ಒಳಪಡುತ್ತಿದ್ದಾರೆ. ಸದ್ಯ ಲಕ್ಷಣಗಳು ಇರುವವರಿಗೆ ಮಾತ್ರ ಕೋವಿಡ್ ಪರೀಕ್ಷೆ ಮಾಡುತ್ತಿರುವ ಕಾರಣ ಸೋಂಕು ದೃಢ ಪ್ರಮಾಣ ಶೇ 50ಕ್ಕೂ ಅಧಿಕ ಪ್ರಮಾಣದಲ್ಲಿ ಇರಬೇಕಿತ್ತು ಎಂದು ವೈದ್ಯರು ಪ್ರತಿಪಾದಿಸಿದ್ದಾರೆ.

‘ಜ್ವರ, ನೆಗಡಿ, ಕೆಮ್ಮು ಸೇರಿದಂತೆ ವಿವಿಧ ಲಕ್ಷಣ ಇರುವವರಿಗೆ ಪರೀಕ್ಷೆ ಮಾಡಲಾಗುತ್ತಿದೆ. ಮನೆಯಲ್ಲಿ ಒಬ್ಬರಿಗೆ ಸೋಂಕು ತಗುಲಿದರೆ ಎಲ್ಲರಿಗೂ ಅದು ಹರಡುತ್ತದೆ. ಈ ಸೋಂಕು ದೃಢ ಪ್ರಮಾಣಕ್ಕೆ ಅರ್ಥವಿಲ್ಲ. ಈಗ ಮಾಡುತ್ತಿರುವ ಪರೀಕ್ಷೆಗಳ ಪ್ರಕಾರ ಸೋಂಕು ದೃಢ ಪ್ರಮಾಣ ಶೇ 80ರಷ್ಟು ಕಾಣಿಸಿಕೊಳ್ಳಬೇಕಿತ್ತು. ನೆಗಡಿ, ಕೆಮ್ಮು ಇರುವವರಿಗೆ ಶೇ 90ರಷ್ಟು ಮಂದಿಗೆ ಸೋಂಕು ದೃಢಪಡುತ್ತದೆ. ಈ ವಾರ ಸೋಂಕು ಉತ್ತುಂಗದಲ್ಲಿಯೇ ಇರುತ್ತದೆ. ಆಮೇಲೆ ಇಳಿಕೆ ಆಗಲಿದೆ’ ಎಂದು ಬಳ್ಳಾರಿಯ ವೈದ್ಯ ಡಾ. ಯೋಗಾನಂದ ರೆಡ್ಡಿ ತಿಳಿಸಿದರು.

ಸೋಂಕು ದೃಢ ಪ್ರಮಾಣ ಏರಿಕೆ

ಒಂದನೇ ಪುಟದಿಂದ

ಪರೀಕ್ಷಾ ಪ್ರಮಾಣವನ್ನು ಅದೇ ಗತಿಯಲ್ಲಿ ಮುಂದುವರಿಸಿದ್ದರೆ (ಸೋಂಕು ದೃಢಪಡುವ ಈಗಿನ ಪ್ರಮಾಣದ ಲೆಕ್ಕಾಚಾರದ ಪ್ರಕಾರ) ಪ್ರತಿದಿನ 60 ಸಾವಿರದಿಂದ 70 ಸಾವಿರ ಪ್ರಕರಣಗಳು ವರದಿಯಾಗುವ ಸಾಧ್ಯತೆ ಇತ್ತು.

ಆದರೆ, ಪರೀಕ್ಷೆಗಳ ಸಂಖ್ಯೆಯನ್ನು ಮೇ ಎರಡನೇ ವಾರದಿಂದ ಇಳಿಕೆ ಮಾಡಲಾಗಿದೆ. ಪರಿಣಾಮ ಪ್ರಕರಣಗಳ ಸಂಖ್ಯೆ ಕೂಡ 30 ಸಾವಿರದಿಂದ 35 ಸಾವಿರದಷ್ಟಕ್ಕೆ ಇಳಿದಿದೆ.

ಶೇ 10ಕ್ಕೆ ಬಂದಲ್ಲಿ ನಿಯಂತ್ರಣ: ರಾಜ್ಯದಲ್ಲಿ ವಾರದಲ್ಲಿ ವರದಿಯಾದ ಪ್ರಕರಣಗಳಿಗೆ ಹೋಲಿಸಿದಲ್ಲಿ ಸೋಂಕು ದೃಢ ಪ್ರಮಾಣವು ಶೇ 30ರ ಆಸುಪಾಸಿನಲ್ಲಿದೆ. ಬಳ್ಳಾರಿ, ಉತ್ತರ ಕನ್ನಡ, ಬೆಳಗಾವಿ, ಮೈಸೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಸೋಂಕು ದೃಢ ಪ್ರಮಾಣವು ಏರುಗತಿ ಪಡೆದಿದೆ. ಬೀದರ್ (ಶೇ 9.12), ಹಾವೇರಿ (ಶೇ 14.26) ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಮಾತ್ರ ಈ ಪ್ರಮಾಣವು ಕಡಿಮೆಯಿದೆ. ಸೋಂಕು ದೃಢ ಪ್ರಮಾಣ ಶೇ 10ಕ್ಕಿಂತ ಕೆಳಗಡೆ ಬಂದಲ್ಲಿ ಮಾತ್ರ ಕೋವಿಡ್ ನಿಯಂತ್ರಣಕ್ಕೆ ಬಂದಿದೆ ಎಂದರ್ಥ ಎನ್ನುತ್ತಾರೆ ತಜ್ಞರು.

‘ಪ್ರಾಥಮಿಕ ಸಂಪರ್ಕ ಇರುವವರಿಗೆ ಮಾತ್ರ ಸದ್ಯ ಪರೀಕ್ಷೆ ನಡೆಸಲಾಗುತ್ತಿದೆ. ಈ ಸಂದರ್ಭದಲ್ಲಿ ರ್‍ಯಾಂಡಮ್ ಪರೀಕ್ಷೆ ಕೂಡ ನಡೆಸಬೇಕಿದೆ. ಲಾಕ್‌ಡೌನ್ ಜಾರಿಯಲ್ಲಿರುವ ಕಾರಣ ಜನರನ್ನು ತಲುಪಲು ಸಾಧ್ಯವಾಗುತ್ತಿಲ್ಲ. ಈ ಮೊದಲು ಬಸ್ ನಿಲ್ದಾಣ, ಮಾರುಕಟ್ಟೆ ಸೇರಿದಂತೆ ಸಾರ್ವಜನಿಕ ಪ್ರದೇಶಗಳಲ್ಲಿ ಮಾದರಿಗಳನ್ನು ಸಂಗ್ರಹಿಸಲಾಗುತ್ತಿತ್ತು. ಈಗ ಪರೀಕ್ಷೆ ಮಾಡಿಸಿಕೊಳ್ಳಲು ಮುಂದೆ ಬರುವವರ ಸಂಖ್ಯೆ ಕಡಿಮೆಯಾಗಿದೆ. ಆದರೆ, ಸೋಂಕು ದೃಢ ಪ್ರಮಾಣ ದರ ಕಡಿಮೆಯಾಗಿಲ್ಲ’ ಎಂದು ಜಯದೇವ ಹೃದ್ರೋಗ ಸಂಸ್ಥೆ ನಿರ್ದೇಶಕ ಹಾಗೂ ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ ಡಾ.ಸಿ.ಎನ್. ಮಂಜುನಾಥ್ ತಿಳಿಸಿದರು.




ಸರ್ಕಾರ ತನ್ನ ವೈಫಲ್ಯ ಮುಚ್ಚಿಕೊಳ್ಳಲು ಕೋವಿಡ್ ಪರೀಕ್ಷೆಗಳನ್ನು ಕಡಿಮೆ ಮಾಡಿದೆ. ಇದರಿಂದಾಗಿ ಸಂಖ್ಯೆಯಲ್ಲಿ ಗಣನೀಯ ಹೆಚ್ಚಳ ಉಂಟಾಗುವ ಸಾಧ್ಯತೆ ಇದೆ

ಎಚ್.ಡಿ. ಕುಮಾರಸ್ವಾಮಿ, ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ



ಸೋಂಕು ಲಕ್ಷಣ ಇದ್ದವರಿಗೆ ಮಾತ್ರ ಈಗ ಪರೀಕ್ಷೆ ಮಾಡಲಾಗುತ್ತಿದೆ. ದ್ವಿತೀಯ ಸಂಪರ್ಕ ಇರುವವರಿಗೆ ಕೂಡ ಪರೀಕ್ಷೆ ಅಗತ್ಯ. ದಿನಕ್ಕೆ ಸರಾಸರಿ 1.50 ಲಕ್ಷ ಪರೀಕ್ಷೆ ನಡೆಸಬೇಕು

ಡಾ.ಸಿ.ಎನ್. ಮಂಜುನಾಥ್, ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ



ಲಾಕ್‌ಡೌನ್ ಮಾಡಿ 14 ದಿನಗಳಾದ ಮೇಲೆ ಪ್ರಕರಣಗಳ ಸಂಖ್ಯೆ ಕಡಿಮೆಯಾಗುತ್ತದೆ. ಪ್ರಾಥಮಿಕ ಸಂಪರ್ಕಿತರಿಗೆ ಪರೀಕ್ಷೆ ಮಾಡಲಾಗುತ್ತಿದೆ. ಲಕ್ಷಣ ಇರುವ ಎಲ್ಲರಿಗೂ ಪರೀಕ್ಷೆ ಅಗತ್ಯ

ಡಾ.ವಿ. ರವಿ, ಕೋವಿಡ್ ತಾಂತ್ರಿಕ ಸಲಹಾ ಸಮಿತಿ ಸದಸ್ಯ

ಮಾರ್ಗಸೂಚಿ ಅನುಸಾರ ಲಕ್ಷಣ ಇರುವವರಿಗೆ ಪರೀಕ್ಷೆ ಮಾಡಲಾಗುತ್ತಿದೆ. ಇದರಿಂದಾಗಿ ಸೋಂಕು ದೃಢ ಪ್ರಮಾಣ ಅಧಿಕ ಇರಲಿದೆ. ಆ ಪ್ರಮಾಣ ಕೆಲ ದಿನಗಳಲ್ಲಿ ಕಡಿಮೆಯಾಗುತ್ತದೆ


ಡಾ. ಓಂಪ್ರಕಾಶ್ ಪಾಟೀಲ, ಆರೋಗ್ಯ ಇಲಾಖೆ ನಿರ್ದೇಶಕ

ಸೋಂಕು ದೃಢ ಪ್ರಮಾಣ ಏರಿಕೆ

ದಿನಾಂಕ	ಸೋಂಕು ದೃಢ ಪ್ರಮಾಣ
ಡಿ.31	ಶೇ 0.82
ಜ.31	ಶೇ 0.69
ಫೆ.28	ಶೇ 0.62
ಮಾ.31	ಶೇ 3.89
ಏ.15	ಶೇ 11.38
ಏ.30	ಶೇ 25.44
ಮೇ 05	ಶೇ 32.28
ಮೇ 15	ಶೇ 35.20
ಮೇ 17	ಶೇ 39.70
ಮೇ 18	ಶೇ 32.50

ಕೋವಿಡ್ ಪರೀಕ್ಷೆಗಳ ಸಂಖ್ಯೆ ಏರಿಳಿತ

ದಿನಾಂಕ	ಪರೀಕ್ಷೆಗಳು
ಜ.1	1,17,907
ಫೆ.1	53,316
ಮಾ.2	64,247
ಏ.1	1,15,732
ಏ.30	1,89,793
ಮೇ 2	1,58,365
ಮೇ 10	1,24,110
ಮೇ 15	1,18,345
ಮೇ 17	97,236
ಮೇ 18	93,247



ವಂಚನೆಗಿವೆ ನಾನಾ ಮುಖಗಳು: ಇರಲಿ ಎಚ್ಚರ!

ವಿಶ್ವನಾಥ ಎಸ್.

ಆನ್‌ಲೈನ್‌ನಲ್ಲಿ ಜನರು ಮೋಸ ಹೋಗುತ್ತಿರುವ ಪ್ರಕರಣಗಳು ಈಚೆಗೆ ಹೆಚ್ಚು ವರದಿಯಾಗುತ್ತಿವೆ. ಭಾರಿ ಕ್ಯಾಷ್‌ಬ್ಯಾಕ್ ಕೊಡುಗೆ, ಬಂಪರ್ ಬಹುಮಾನ, ಕೆಲಸ ಕೊಡಿಸುವ ಆಮಿಷ, ಸಿಮ್ ಕಾರ್ಡ್ ನಿಷ್ಕ್ರಿಯ ಆಗಲಿದೆ... ಹೀಗೆ ವಂಚನೆಯ ದಾರಿಗಳನ್ನು ಪಟ್ಟಿ ಮಾಡುತ್ತಾ ಹೋದರೆ ಮುಗಿಯುವುದೇ ಇಲ್ಲ! ವಂಚನೆಗೆ ಒಳಗಾಗದೇ ಇರುವಂತೆ ಬ್ಯಾಂಕುಗಳು, ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರ, ಆರ್‌ಬಿಐ, ಪೊಲೀಸ್ ಇಲಾಖೆ ಎಲ್ಲರೂ ಆಗಾಗ್ಗೆ ಎಚ್ಚರಿಕೆ ಸಂದೇಶ, ಜಾಹೀರಾತು ನೀಡುತ್ತಲೇ ಇರುತ್ತವೆ. ಆದರೆ, ಕ್ಷಣಕಾಲ ಮೈಮರೆತು ಅಥವಾ ಧಾವಂತದಲ್ಲಿ ನಾವು ವಂಚಕರ ಮೋಸದ ಜಾಲಕ್ಕೆ ಸಿಲುಕಿಬಿಡುತ್ತೇವೆ.

ಕೆಲಸ ಬೇಕೆ:? ನಿಮ್ಮ ರೆಸ್ಯುಮೆಯನ್ನು ಅಪ್‌ಲೋಡ್ ಮಾಡಿ ಎಂದು ಸಾಕಷ್ಟು ಮೇಲ್‌ಗಳು ಬರುತ್ತಿರುತ್ತವೆ. ಕೆಲಸ ಇಲ್ಲದಿರುವ ಅದೆಷ್ಟೋ ಜನರು ಹೀಗೆ ಬರುವ ಮೇಲ್‌ಗಳಲ್ಲಿ ಇರುವ ಜಾಲತಾಣಕ್ಕೆ ತಮ್ಮ ರೆಸ್ಯುಮೆ ಅಪ್‌ಲೋಡ್ ಮಾಡುತ್ತಾರೆ. ಆಗ ವಂಚಕರು ಅರ್ಜಿದಾರರಿಗೆ ಕರೆ ಮಾಡಿ ಪ್ರತಿಷ್ಠಿತ ಕಂಪನಿಯೊಂದರ ಹೆಸರು ಹೇಳಿ ಕೆಲಸದ ಆಮಿಷ ತೋರಿಸುತ್ತಾರೆ. ಅರ್ಜಿ ಸಲ್ಲಿಸಲು, ಸಂದರ್ಶನಕ್ಕೆ ಎಂಬಿತ್ಯಾದಿ ಕಾರಣಗಳಿಗೆ ಶುಲ್ಕ ತುಂಬುವಂತೆ ಹೇಳುತ್ತಾರೆ. ಈ ರೀತಿಯ ಪ್ರಕರಣವೊಂದರಲ್ಲಿ ಬೆಂಗಳೂರಿನ ಹೊಸಕೆರೆಹಳ್ಳಿಯ ನಿವಾಸಿಯೊಬ್ಬರು ₹ 7 ಲಕ್ಷ ಕಳೆದುಕೊಂಡಿದ್ದಾರೆ.

> ನಮ್ಮನ್ನು ಮೋಸಗೊಳಿಸಲು ವಂಚಕರು ಸದಾ ಹೊಸ ದಾರಿ ಹುಡುಕುತ್ತಲೇ ಇರುತ್ತಾರೆ. ಹೀಗಾಗಿ ನಾವು ಸದಾ ಎಚ್ಚರಿಕೆಯಿಂದ ಇದ್ದರಷ್ಟೇ ನಮ್ಮ ವೈಯಕ್ತಿಕ ಮಾಹಿತಿ, ಹಣ ರಕ್ಷಿಸಿಕೊಳ್ಳಲು ಸಾಧ್ಯ.



ಮೊಬೈಲ್ ನಂಬರ್ ನಿಷ್ಕ್ರಿಯ: ನಿಮ್ಮ ಮೊಬೈಲ್ ನಂಬರ್ ಶೀಘ್ರದಲ್ಲೇ ನಿಷ್ಕ್ರಿಯ ಆಗಲಿದೆ. ಹಾಗಾಗದಂತೆ ಮಾಡಲು ಈ ನಂಬರ್‌ಗೆ ಕರೆ ಮಾಡಿ ಎನ್ನುವ ಸಂದೇಶವು ಹಲವು ಜನರಿಗೆ ಪದೇ ಪದೇ ಬರಲಾರಂಭಿಸಿದೆ. ಮೊಬೈಲ್ ನಂಬರ್ ನಿಷ್ಕ್ರಿಯ ಆಗಲಿದೆ ಎಂದರೆ ಯಾರಾದರೂ ತಕ್ಷಣಕ್ಕೇ ಗಾಬರಿಗೆ ಒಳಗಾಗುತ್ತಾರೆ. ಸ್ನೇಹಿತರೊಬ್ಬರಿಗೂ ಆಗಿದ್ದು ಹೀಗೆಯೇ. ಮೆಸೇಜ್ ಬಂತು. ಅದರಲ್ಲಿದ್ದ ನಂಬರ್‌ಗೆ ಕರೆ ಮಾಡಿದರೆ, ಕರೆ ಸ್ವೀಕರಿಸಿದ ವ್ಯಕ್ತಿ, ಬಿಎಸ್‌ಎನ್‌ಎಲ್ ಪ್ರತಿನಿಧಿ ಎಂದು ಹೇಳಿದ. 'ಈಗ ನಿಮ್ಮ ನಂಬರ್‌ಗೆ ತಕ್ಷಣವೇ ₹ 49 ರಿಚಾರ್ಜ್ ಮಾಡಿದರೆ ಮಾತ್ರವೇ ನಂಬರ್ ಉಳಿಯಲಿದೆ. ನಾನು ರಿಚಾರ್ಜ್ ಮಾಡುತ್ತೇನೆ. ನೀವು ಆ ಹಣವನ್ನು ನನಗೆ ಪಾವತಿಸಿ' ಎಂದ. 'ನಾನೇ ರಿಚಾರ್ಜ್ ಅಂಗಡಿಯಲ್ಲಿ ಮಾಡಿಸುತ್ತೇನೆ ಎಂದಿದ್ದಕ್ಕೆ, ಹಾಗಾಗುವುದಿಲ್ಲ. ಅವರು ಇನ್ನೇನೋ ರೀಚಾರ್ಜ್ ಮಾಡಿಬಿಡುತ್ತಾರೆ. ನಿಮಗೇ ನಷ್ಟ. ನಂಬರ್ ನಿಷ್ಕ್ರಿಯ ಆದರೆ ಮತ್ತೆ ನಾವು ಜವಾಬ್ದಾರರಲ್ಲ' ಎಂದು ಆತ ಎಚ್ಚರಿಸಿದ. ಅದಕ್ಕವರು, 'ಅಷ್ಟಕ್ಕೂ ಇದು ಸೆಕೆಂಡರಿ ನಂಬರ್. ಹೋದರೆ ಹೋಗಲಿ ಬಿಡಿ' ಎಂದು ನಿರ್ದಾಕ್ಷಿಣ್ಯವಾಗಿ ಹೇಳಿ ಕಾಲ್ ಕಟ್ ಮಾಡಿದರು. ಅವರ ನಂಬರ್ ಈಗಲೂ ಚಾಲ್ತಿಯಲ್ಲೇ ಇದೆ!

ಉಡುಗೊರೆಯ ಆಮಿಷ: ಇ–ಕಾಮರ್ಸ್ ತಾಣಗಳಲ್ಲಿ ವಹಿವಾಟು ನಡೆಸುವವರಿಗೆ ಮೋಸ ಮಾಡಲು ವಂಚಕರು ಸದಾ ಹವಣಿಸುತ್ತಲೇ ಇರುತ್ತಾರೆ. ಆನ್‌ಲೈನ್ ಖರೀದಿಗೆ ಉಡುಗೊರೆ ನೀಡುವುದಾಗಿ ಕರೆ ಮಾಡುವುದು ಈಚೆಗೆ ಸಾಮಾನ್ಯವಾಗಿಬಿಟ್ಟಿದೆ. ಈಗಂತೂ ವಾಟ್ಸ್‌ಆ್ಯಪ್ ಪೇ, ಗೂಗಲ್ ಪೇ, ಪೇಟಿಎಂ ಇರುವುದರಿಂದ ಮೋಸ ಮಾಡಲು ವಂಚಕರು ಇದನ್ನೇ ಅಸ್ತ್ರವಾಗಿಸಿಕೊಳ್ಳುತ್ತಿದ್ದಾರೆ.

ಈ ಅಂಶಗಳು ಗಮನದಲ್ಲಿ ಇರಲಿ

- ಮೊಬೈಲ್ ನಂಬರ್ ನಿಷ್ಕ್ರಿಯ ಆಗುವುದಿದ್ದರೆ, ಆ ಕುರಿತು ಮೊಬೈಲ್‌ಗೆ ಸಂದೇಶ ಬರುತ್ತದೆ. ಸಂಬಂಧಪಟ್ಟ ಕಂಪನಿಯ ಗ್ರಾಹಕ ಸೇವಾ ಕೇಂದ್ರದಿಂದ ಕರೆ ಬರುತ್ತದೆ. ಆದರೆ, ಯಾವುದೇ ಕಾರಣಕ್ಕೂ ಇಂತಹ ನಂಬರ್‌ಗೆ ಕರೆ ಮಾಡಿ ಎಂದು ಮೆಸೇಜ್‌ನಲ್ಲಿ ಇರುವುದಿಲ್ಲ. ಗ್ರಾಹಕ ಸೇವಾ ಕೇಂದ್ರದ ಪ್ರತಿನಿಧಿಯೂ ವೈಯಕ್ತಿಕ ಮಾಹಿತಿ ಭರ್ತಿ ಮಾಡಲು ಹೇಳುವುದಿಲ್ಲ. ಹೆಚ್ಚೆಂದರೆ, ಇಂತಿಷ್ಟು ರೂಪಾಯಿಯ ರೀಚಾರ್ಜ್ ಮಾಡಿಸಿ, ನಿಮ್ಮ ಹತ್ತಿರದ ಮಳಿಗೆಯಲ್ಲಿ ವೈಯಕ್ತಿಕ ಮಾಹಿತಿಯ ಜೆರಾಕ್ಸ್ ಪ್ರತಿ ನೀಡಿ ಎಂದಷ್ಟೇ ಹೇಳುತ್ತಾರೆ.
- ಕೆಲಸ ಇಲ್ಲ ಎನ್ನುವ ಕಾರಣಕ್ಕೆ ಕಂಡ, ಕಂಡ ಜಾಲತಾಣದಲ್ಲಿ ರೆಸ್ಯುಮೆ ಅಪ್‌ಲೋಡ್ ಮಾಡದಿರುವುದು ಒಳಿತು. ವಿಶ್ವಾಸಕ್ಕೆ ಪಾತ್ರವಾಗಿರುವ, ವೃತ್ತಿಪರ ಜಾಲತಾಣ ಆಗಿರುವ ಲಿಂಕ್ಡ್‌ಇನ್‌ನ 50 ಕೋಟಿಗೂ ಅಧಿಕ ಬಳಕೆದಾರರ ವೈಯಕ್ತಿಕ ಮಾಹಿತಿಗಳು ಸೋರಿಕೆ ಆಗಿರುವುದನ್ನು ಸೈಬರ್‌ನ್ಯೂಸ್ ಈಚೆಗಷ್ಟೇ ವರದಿ ಮಾಡಿತ್ತು. ಹೀಗಿರುವಾಗ, ಜನಪ್ರಿಯ ಅಲ್ಲದೇ ಇರುವ ಜಾಲತಾಣಗಳಿಗೆ ರೆಸ್ಯುಮೆ ಅಪ್‌ಲೋಡ್ ಮಾಡುವುದು ಸರಿಯಲ್ಲ. ಇದರಿಂದ ವೈಯಕ್ತಿಕ ಮಾಹಿತಿ ಸೋರಿಕೆಯಷ್ಟೇ ಅಲ್ಲದೆ, ಹಣ ಕಳೆದುಕೊಳ್ಳುವ, ಬ್ಲ್ಯಾಕ್‌ಮೇಲ್‌ಗೆ ಒಳಗಾಗುವ ಸಾಧ್ಯತೆಯೂ ಇರುತ್ತದೆ.
- ಇ–ಕಾಮರ್ಸ್ ಕಂಪನಿಗಳು ಕೊಡುಗೆ ನೀಡುತ್ತವೆ ಎಂದಾಕ್ಷಣ ಮಾರುಹೋಗದಿರಿ. ಒಂದೊಮ್ಮೆ ಉಡುಗೊರೆ ನೀಡುವುದು ನಿಜವೇ ಆಗಿದ್ದರೂ ಉಡುಗೊರೆ ಕೈಸೇರಿ, ಅದನ್ನು ತೆಗೆದು ನೋಡಿದ ಬಳಿಕವಷ್ಟೇ ಶುಲ್ಕ ಪಾವತಿಸುವುದಾಗಿ ಹೇಳಿ. ಪ್ರತಿಷ್ಠಿತ ಇ–ಕಾಮರ್ಸ್ ಕಂಪನಿಗಳ ಹೆಸರಿನಲ್ಲಿ ಈ ರೀತಿ ವಂಚನೆಗಳು ಆಗಾಗ್ಗೆ ನಡೆಯುತ್ತಿರುತ್ತವೆ. ಹಾಗಾಗಿ, ಪುಕ್ಕಟೆಯಾಗಿ ಸಿಗುತ್ತದೆ ಎನ್ನುವ ಕಾರಣಕ್ಕೆ ತಕ್ಷಣವೇ ಯಾವುದೇ ನಿರ್ಧಾರಕ್ಕೆ ಬರಬೇಡಿ.



ಮನುಷ್ಯರ ಪತ್ತೆಗಾಗಿ ಕ್ಯಾಪ್ಚಾ

ಅವಿನಾಶ್ ಬಿ.

ಗೂಗಲ್ ಅಥವಾ ಸಾಮಾಜಿಕ ಜಾಲತಾಣಗಳ ಖಾತೆ ತೆರೆಯುವ ಸಂದರ್ಭ, ಬ್ಯಾಂಕಿಂಗ್ ತಾಣಗಳಿಗೆ ಲಾಗಿನ್ ಮಾಡುವಾಗ ಅಥವಾ ಯಾವುದಾದರೂ ಜಾಲತಾಣಗಳಿಗೆ ಕಾಮೆಂಟ್ ಹಾಕುವ ಸಂದರ್ಭದಲ್ಲಿ ನೀವು ಈ Captcha ಎಂಬ ಪದವನ್ನು ನೋಡಿದ್ದಿರಬಹುದು. ಅಂಕಗಣಿತದ ಸುಲಭ ಲೆಕ್ಕವನ್ನು ಬಿಡಿಸುವುದು, ತಿರುಚಿದ ವಿನ್ಯಾಸವಿರುವ ಇಂಗ್ಲಿಷ್ ಅಕ್ಷರ ಗುರುತಿಸುವುದು, ಅಕ್ಷರಗಳು-ಅಂಕಿಗಳನ್ನು ನಮೂದಿಸುವುದು, ಚಿತ್ರಗಳನ್ನು ಪತ್ತೆ ಮಾಡುವುದು - ಈ ರೀತಿಯ ಸುಲಭ ಒಗಟುಗಳಿರುತ್ತವೆ.

ಕ್ಯಾಪ್ಚಾ ತುಂಬಿಸುವುದು ಕಷ್ಟದ ಕೆಲಸವಲ್ಲ. ಆದರೂ ಇದೊಂದು ದೊಡ್ಡ ಕಿರಿಕಿರಿ ಅಂತ ಭಾವಿಸಬೇಕಿಲ್ಲ. ವಿಶ್ವವ್ಯಾಪಿ ಜಾಲ (ವರ್ಲ್ಡ್ ವೈಡ್ ವೆಬ್) ಬಳಸುತ್ತಿರುವ ನಮಗೆ, ನಮ್ಮ ಖಾಸಗಿತನಕ್ಕೆ ಎಲ್ಲೆಡೆಯಿಂದಲೂ ಸೈಬರ್ ವಂಚಕರಿಂದ ಸಮಸ್ಯೆ ಎದುರಾಗುತ್ತಲೇ ಇರುತ್ತದೆ. ಇವರು ವ್ಯವಸ್ಥೆಯನ್ನೇ ಬುಡಮೇಲು ಮಾಡಬಲ್ಲರು ಅಥವಾ ನಿರುಪಯುಕ್ತ ವಿಷಯಗಳನ್ನು (ಸ್ಪ್ಯಾಮ್) ಕಳುಹಿಸುತ್ತಾ ವಿಘ್ನಸಂತೋಷಿಗಳಾಗಬಲ್ಲರು. ಈ ಬಾಟ್ (Bot) ಎಂಬ ಸ್ವಯಂಚಾಲಿತ ಕೆಲಸ ಮಾಡಬಲ್ಲ ಅದರಲ್ಲಿಯೂ ತೊಂದರೆಯುಂಟು ಮಾಡಬಲ್ಲ, ಮಾನವನೇ ರೂಪಿಸಿದ ತಂತ್ರಾಂಶದಿಂದ ರಕ್ಷಣೆ ಪಡೆಯಲು ಇರುವುದೇ ಈ ಕ್ಯಾಪ್ಚಾ.

ರೈಲು, ಬಸ್ಸು, ಸಿನಿಮಾ ಶೋ... ಹೀಗೆ ಆನ್‌ಲೈನ್‌ನಲ್ಲಿ ಯಾವುದೋ ಒಂದು ಟಿಕೆಟ್ ಬುಕ್ ಮಾಡಬೇಕಿರುತ್ತದೆ. ಅಥವಾ ಹೊಸ ಖಾತೆ ತೆರೆಯಬೇಕಾಗಿರುತ್ತದೆ. ಪೂರ್ವನಿರ್ದೇಶಿತ ಬಾಟ್‌ಗಳು ಕೇವಲ ಸೆಕೆಂಡುಗಳಲ್ಲಿ ನೂರಾರು ಟಿಕೆಟ್‌ಗಳನ್ನು ಬುಕ್ ಮಾಡಬಹುದು ಇಲ್ಲವೇ ಖಾತೆಗಳನ್ನು ತೆರೆಯಬಹುದು. ಆನ್‌ಲೈನ್ ಪೋಲ್ ಅಥವಾ ಜನಾಭಿಪ್ರಾಯ ಗಣನೆಯಲ್ಲೂ ಅವು ಲೆಕ್ಕಾಚಾರವನ್ನೇ ಬುಡಮೇಲು ಮಾಡಬಲ್ಲವು. ಇದನ್ನು ತಡೆಯುವ ಮಾರ್ಗವೇ ಕ್ಯಾಪ್ಚಾ. ಮಾನವನೇ ಆ ಒಂದು ಕ್ಯಾಪ್ಚಾವನ್ನು ಬಿಡಿಸಿದರಷ್ಟೇ ಮುಂದುವರಿಯಬಹುದು.

Captcha ಎಂದರೇನು?

Completely Automated Public Turing test to tell Computers and Humans Apart ಎಂಬುದರ ಹ್ರಸ್ವರೂಪ ಕ್ಯಾಪ್ಚಾ. ಎಂದರೆ, ಕಂಪ್ಯೂಟರ್‌ಗಳೇ (ಬಾಟ್) ಬೇರೆ, ಮನುಷ್ಯರೇ ಬೇರೆ ಎಂಬುದನ್ನು ಸ್ವಯಂಚಾಲಿತವಾಗಿ ಗುರುತಿಸುವ ಟ್ಯೂರಿಂಗ್ ಪರೀಕ್ಷಾ ವಿಧಾನವಿದು. ಆಧುನಿಕ ಕಂಪ್ಯೂಟಿಂಗ್ ಜಗತ್ತಿನ ಪಿತಾಮಹ ಅಲೆನ್ ಟ್ಯೂರಿಂಗ್ ಪರಿಕಲ್ಪನೆಯ ಪರೀಕ್ಷೆಯಿದು. ಹೀಗಾಗಿ ಅವರ ಹೆಸರು.

ಹೇಗೆ ಕೆಲಸ ಮಾಡುತ್ತದೆ?

ಈಗಾಗಲೇ ಅಕ್ಷರಗಳು, ಅಂಕಿಗಳನ್ನು ಗುರುತಿಸಿ ಓದಬಲ್ಲ ಒಸಿಆರ್ (ಆಪ್ಟಿಕಲ್ ಕ್ಯಾರೆಕ್ಟರ್ ರೆಕಗ್ನಿಷನ್) ತಂತ್ರಜ್ಞಾನ ಅಭಿವೃದ್ಧಿಯಾಗಿದೆ. ಆದರೆ, ಯಂತ್ರಗಳು ಗುರುತಿಸಲಾಗದಂತೆ ಮಾಡಿದರಷ್ಟೇ, ಬಾಟ್‌ಗಳ ಹಾವಳಿ, ಸ್ಪ್ಯಾಮ್ ಅಥವಾ ಸ್ವಯಂಚಾಲಿತ ಮಾಹಿತಿ ರವಾನೆಯಿಂದ ತಪ್ಪಿಸಬಹುದು. ಈ ಕಾರಣಕ್ಕೆ, ಯಂತ್ರಗಳು ಗುರುತಿಸಲಾಗದ, ಮನುಷ್ಯರಷ್ಟೇ ಗುರುತಿಸಬಲ್ಲ ಅಕ್ಷರ ತಂತ್ರಜ್ಞಾನವನ್ನು ರೂಪಿಸಲಾಯಿತು. ಇದು ಅಂಕಿಗಳ ಸಂಕಲನವಿರಬಹುದು, ವ್ಯವಕಲನವಿರಬಹುದು, ಅಂಕಿ-ಅಕ್ಷರಗಳ ಸಂಯೋಗವಿರಬಹುದು, ಚಿತ್ರಗಳನ್ನು ಗುರುತಿಸುವುದಿರಬಹುದು. ಇವೆಲ್ಲವೂ ಒಂದು ಬಾರಿಗೆ ಮಾತ್ರ ಬಳಕೆಯಾಗುವಂಥವು. ಮುಂದಿನ ಬಾರಿ ಏನಾದರೂ ವೆಬ್ ಫಾರ್ಮ್ ತುಂಬಿಸಬೇಕಿದ್ದರೆ, ಹೊಸದಾಗಿ ಬೇರೆಯೇ ಕ್ಯಾಪ್ಚಾ ಎದುರಿಸಬೇಕಾಗುತ್ತದೆ. ಈಗಿನ ಹೊಸ ವಿಧಾನದಲ್ಲಿ 'ನಾನು ರೋಬೋ ಅಲ್ಲ' ಅಂತ ಖಚಿತಪಡಿಸಲು ಚೆಕ್ ಬಾಕ್ಸ್ ಒಂದಕ್ಕೆ ಟಿಕ್ ಗುರುತು ಹಾಕುವ ಕ್ಯಾಪ್ಚಾ ಬಂದಿದೆ.

ಕ್ಯಾಪ್ಚಾದಿಂದೇನು ಲಾಭ?

ರೈಲು, ಬಸ್ಸು, ಸಿನಿಮಾ ಶೋ... ಹೀಗೆ ಆನ್‌ಲೈನ್‌ನಲ್ಲಿ ಯಾವುದೋ ಒಂದು ಟಿಕೆಟ್ ಬುಕ್ ಮಾಡಬೇಕಿರುತ್ತದೆ. ಅಥವಾ ಹೊಸ ಖಾತೆ ತೆರೆಯಬೇಕಾಗಿರುತ್ತದೆ. ಪೂರ್ವನಿರ್ದೇಶಿತ ಬಾಟ್‌ಗಳು ಕೇವಲ ಸೆಕೆಂಡುಗಳಲ್ಲಿ ನೂರಾರು ಟಿಕೆಟ್‌ಗಳನ್ನು ಬುಕ್ ಮಾಡಬಹುದು ಇಲ್ಲವೇ ಖಾತೆಗಳನ್ನು ತೆರೆಯಬಹುದು. ಆನ್‌ಲೈನ್ ಪೋಲ್ ಅಥವಾ ಜನಾಭಿಪ್ರಾಯ ಗಣನೆಯಲ್ಲೂ ಅವು ಲೆಕ್ಕಾಚಾರವನ್ನೇ ಬುಡಮೇಲು ಮಾಡಬಲ್ಲವು. ಇದನ್ನು ತಡೆಯುವ ಮಾರ್ಗವೇ ಕ್ಯಾಪ್ಚಾ. ಮನುಷ್ಯನೇ ಆ ಒಂದು ಕ್ಯಾಪ್ಚಾವನ್ನು ಬಿಡಿಸಿದರಷ್ಟೇ ಮುಂದುವರಿಯಬಹುದು. ಹೀಗೆ, ಯಾವುದೇ ವೆಬ್ ಪುಟದಲ್ಲಿ ಸ್ವಯಂಚಾಲಿತವಾಗಿ ಕಾಮೆಂಟ್‌ಗಳು ದಾಖಲಾಗದಂತೆ, ಯಂತ್ರಮಾನವರ ಮೂಲಕ ನಮ್ಮ ಮಾಹಿತಿಯನ್ನು ಕದಿಯದಂತೆ ತಡೆಯುವಲ್ಲಿ ಈ ಕ್ಯಾಪ್ಚಾಗಳು ಯಶಸ್ವಿಯಾಗಿವೆ.

ಸುಲಭವಾಗಿ ಹೇಳುವುದಿದ್ದರೆ, ಆನ್‌ಲೈನ್ ಮತದಾನದಲ್ಲಿ ವಂಚನೆಯಾಗದಂತೆ, ಟಿಕೆಟ್ ಬುಕಿಂಗ್ ವ್ಯವಸ್ಥೆಯನ್ನು ಹೈಜಾಕ್ ಮಾಡದಂತೆ ಅಥವಾ ಕಾರ್ಯಕ್ರಮದ ನೋಂದಣಿ ವ್ಯವಸ್ಥೆಯನ್ನು ಮಿತಿಗೊಳಿಸಲು ಹಾಗೂ ವೆಬ್ ತಾಣಗಳಲ್ಲಿ ಸ್ವಯಂಚಾಲಿತ ಕಾಮೆಂಟ್‌ಗಳು ದಾಖಲಾಗದಂತೆ, ಬಾಟ್‌ಗಳು ಮಾನವರ ಖಾತೆಗಳಿಗೆ ಲಾಗಿನ್ ಆಗದಂತೆ ತಡೆಯುವುದು ಈ ಕ್ಯಾಪ್ಚಾದ ಉದ್ದೇಶ.

ಹೀಗಿರುವಾಗ, ನಮ್ಮ ರಕ್ಷಣೆಗಾಗಿಯೇ ಇರುವ ಈ ಕ್ಯಾಪ್ಚಾಗಳ ಬಗ್ಗೆ ಅಸಹನೆ ಬೇಡ. ಅರ್ಥವಾಗದಿದ್ದರೆ, ಹೊಸ ಕ್ಯಾಪ್ಚಾ ಪಡೆಯುವ (ರಿಫ್ರೆಶ್ ಬಟನ್) ಆಯ್ಕೆಯೂ ಇರುತ್ತದೆ. ನಮ್ಮದೇ ಸುರಕ್ಷತೆಗಾಗಿ ಇರುವ ಕ್ಯಾಪ್ಚಾ ಬಗ್ಗೆ ತಾಳ್ಮೆಯಿಂದ ಮುಂದುವರಿಯುವುದು ವಿಹಿತ.

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ನೈಸರ್ಗಿಕ ಸಂಪನ್ಮೂಲಗಳ ನಿರ್ವಹಣೆ (ಮುಂದುವರಿದ ಭಾಗ)

ವಿಜ್ಞಾನ

ಎಸ್ಸೆಸ್ಸೆಲ್ಸಿ

ನೀರಿನ ಕೊಯ್ಲು

ಜಲಾನಯನ ಪ್ರದೇಶದ ನಿರ್ವಹಣೆಯ ಗುರಿಗಳು

- ಮಣ್ಣು ಮತ್ತು ನೀರಿನ ವೈಜ್ಞಾನಿಕ ಸಂರಕ್ಷಣೆ
- ಭೂಮಿ ಮತ್ತು ನೀರಿನ ಪ್ರಾಥಮಿಕ ಸಂಪನ್ಮೂಲಗಳನ್ನು ಅಭಿವೃದ್ಧಿಪಡಿಸುವುದು.
- ಪರಿಸರದ ಅಸಮತೋಲನಕ್ಕೆ ಕಾರಣವಾಗುವ ರೀತಿಯಲ್ಲಿ ಬಳಸಲು ಸಾಧ್ಯವಾಗುವಂತೆ ಸಸ್ಯಗಳ ಮತ್ತು ಪ್ರಾಣಿಗಳ ದ್ವಿತೀಯಕ ಸಂಪನ್ಮೂಗಳನ್ನು ಉತ್ಪಾದಿಸುವುದು.
- ಒಂದು ಪ್ರದೇಶದ ಜನರ ಉತ್ಪಾದನೆ ಮತ್ತು ಆದಾಯವನ್ನು ಹೆಚ್ಚಿಸುವುದರ ಜೊತೆಗೆ ಬರಗಾಲವನ್ನು ಮತ್ತು ಪ್ರವಾಹವನ್ನು ತಗ್ಗಿಸುವುದಾಗಿದೆ.

ಪುರಾತನ ಸಮುದಾಯಗಳು ರೂಢಿಸಿಕೊಂಡಿದ್ದ ನೀರಿನ ಕೊಯ್ಲಿನ ಪದ್ಧತಿಗಳು

- ಸಣ್ಣ ಹೊಂಡಗಳು ಮತ್ತು ಕೆರೆಗಳನ್ನು ಮಾಡುವುದು.
- ಸಣ್ಣ ಜಲಾನಯನ ವ್ಯವಸ್ಥೆಯನ್ನು ಸುಧಾರಿಸುವುದು.
- ಮಣ್ಣಿನ ಸಣ್ಣ ಅಣೆಕಟ್ಟುಗಳನ್ನು ಕಟ್ಟುವುದು.
- ಕಟ್ಟೆ ಅಥವಾ ಕಂದಕಗಳ ನಿರ್ಮಾಣ ಮತ್ತು ಮರಳು ಹಾಗೂ ಸುಣ್ಣದ ಕಲ್ಲಿನಿಂದ ಜಲಾಶಯಗಳನ್ನು ನಿರ್ಮಿಸುವುದು.
- ಮೇಲ್ಛಾವಣಿ ನೀರನ್ನು ಸಂಗ್ರಹಿಸುವ ಘಟಕಗಳನ್ನು ಅಳವಡಿಸುವುದು.

ಭಾರತದಲ್ಲಿನ ನೀರು ಕೊಯ್ಲು ಮತ್ತು ನೀರು ಒದಗಿಸುವ ಪುರಾತನ ರಚನೆಗಳು

ರಾಜಸ್ಥಾನದಲ್ಲಿನ ಖಾದಿನ್, ಕೆರೆಗಳು ಮತ್ತು ನಾದಿಸ್‌ಗಳು, ಮಹಾರಾಷ್ಟ್ರದಲ್ಲಿನ ಬಾಂದಾರ್‌ಗಳು ಮತ್ತು ತಾಲ್‌ಗಳು, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶದಲ್ಲಿನ ಬುಂಧೀಸ್‌ಗಳು, ಬಿಹಾರದಲ್ಲಿನ ಆಹರ್‌ಗಳು ಮತ್ತು ಪೈನ್‌ಗಳು, ಹಿಮಾಚಲ ಪ್ರದೇಶದಲ್ಲಿನ ಕುಲ್ಸ್‌ಗಳು, ಜಮ್ಮುವಿನ ಕಂದಿಪಟ್ಟಿಯಲ್ಲಿನ ಕೊಳಗಳು ಮತ್ತು ತಮಿಳುನಾಡಿನಲ್ಲಿರುವ ಎಲಿಗಳು (ಕೆರೆಗಳು), ಕೇರಳದಲ್ಲಿನ ಸುರಂಗಗಳು ಮತ್ತು ಕರ್ನಾಟಕದಲ್ಲಿನ ಕೆಲ ಕಟ್ಟಡಗಳು.

ನೀರಿನ ಕೊಯ್ಲಿನ ಪ್ರಯೋಜನಗಳು

ನೀರಿನ ಕೊಯ್ಲಿನ ಮುಖ್ಯ ಉದ್ದೇಶವು ಅಂತರ್ಜಲವನ್ನು ಮರುಭರ್ತಿ ಮಾಡುವುದಾಗಿದೆ.

- ನೀರನ್ನು ನೆಲದೊಳಗೆ ಸಂಗ್ರಹಿಸುವುದರಿಂದ ಇದು ಆವಿಯಾಗುವುದಿಲ್ಲ.
- ಇದು ವಿಸ್ತರಣೆಗೊಂಡು ಬಾವಿಗಳನ್ನು ಮರುಪೂರಣಗೊಳಿಸುತ್ತದೆ.
- ವಿಶಾಲವಾದ ಪ್ರದೇಶಗಳಲ್ಲಿರುವ ಸಸ್ಯವರ್ಗಗಳಿಗೆ ತೇವಾಂಶವನ್ನು ಒದಗಿಸುತ್ತದೆ.
- ಇದು ತೆರೆದ ವಾತಾವರಣದಲ್ಲಿ ನೀರನ್ನು ನಿಲ್ಲಲು ಅವಕಾಶ ಮಾಡಿಕೊಡದ ಕಾರಣ ಸೊಳ್ಳೆಗಳಿಗೆ ಮೊಟ್ಟೆಗಳನ್ನಿಟ್ಟು ಮರಿ ಮಾಡಲು ಪ್ರದೇಶಗಳನ್ನು ಒದಗಿಸುವುದಿಲ್ಲ.
- ಮನುಷ್ಯರು ಮತ್ತು ಪ್ರಾಣಿಗಳ ತ್ಯಾಜ್ಯದಿಂದ ಉಂಟಾಗುವ ಮಾಲಿನ್ಯದಿಂದ ಅಂತರ್ಜಲವು ರಕ್ಷಿಸಲ್ಪಡುತ್ತದೆ.



ಸಮನ್ವಯಿ ಸಂಯುಕ್ತಗಳಿಗೆ ಸಂಬಂಧಿಸಿದ ಕೆಲವು ಪ್ರಮುಖ ಪದಗಳ ವ್ಯಾಖ್ಯಾನ

ರಸಾಯನಶಾಸ್ತ್ರ

ದ್ವಿತೀಯ ಪಿಯುಸಿ

1. ಸಮನ್ವಯಿ ಘಟಕ

ಒಂದು ಸಮನ್ವಯಿ ಘಟಕವು ನಿಶ್ಚಿತ ಸಂಖ್ಯೆಯ ಅಯಾನ್‌ಗಳು ಅಥವಾ ಅಣುಗಳಿಂದ ಬಂಧಿಸಲ್ಪಟ್ಟ ಒಂದು ಕೇಂದ್ರಿಯ ಲೋಹ ಪರಮಾಣು ಅಥವಾ ಅಯಾನ್ ಅನ್ನು ಒಳಗೊಂಡಿರುತ್ತದೆ.

ಉದಾಹರಣೆ:

$[COCl_3(NH_3)_3]$ ಒಂದು ಸಮನ್ವಯಿ ಘಟಕವಾಗಿದ್ದು, ಕೋಬಾಲ್ಟ್ ಅಯಾನ್, ಮೂರು ಅಮೋನಿಯ ಅಣುಗಳ ಮತ್ತು ಮೂರು ಕ್ಲೋರೈಡ್ ಅಯಾನ್‌ಗಳಿಂದ ಸುತ್ತುವರಿಯಲ್ಪಟ್ಟಿದೆ.

ಇತರೆ ಉದಾಹರಣೆಗಳು:-

$$[Ni(CO)_4],\ [PtCl_2(NH_3)_2],\ [Fe(CN)_6]^{4-},\ [CO(NH_3)_6]^{3+}$$

2. ಕೇಂದ್ರೀಯ ಪರಮಾಣು ಅಯಾನ್

ಒಂದು ಸಮನ್ವಯಿ ಘಟಕದಲ್ಲಿ, ನಿಶ್ಚಿತ ಸಂಖ್ಯೆಯ ಅಯಾನ್‌ಗಳು/ ಗುಂಪುಗಳು ಒಂದು ನಿರ್ದಿಷ್ಟ ಜ್ಯಾಮಿತಿ ವ್ಯವಸ್ಥೆಯಲ್ಲಿ ತನ್ನ ಸುತ್ತ ಬಂಧಿಸಲ್ಪಟ್ಟ ಪರಮಾಣು /ಅಯಾನ್ ಅನ್ನು ಕೇಂದ್ರೀಯ ಪರಮಾಣು ಅಥವಾ ಅಯಾನ್ ಎಂದು ಕರೆಯುತ್ತಾರೆ.

ಉದಾಹರಣೆ:

$$[NiCl_2\ (H_2O)_4],\ [CoCl(NH_3)_5]^{2+}\ \text{ಮತ್ತು}\ [Fe(CN)_6]^{3-}$$

ಇದರಲ್ಲಿ ಕೇಂದ್ರೀಯ ಪರಮಾಣು ಅಥವಾ ಅಯಾನ್ ಕ್ರಮವಾಗಿ Ni^{2+}, CO^{3+} ಮತ್ತು Fe^{3+} ಆಗಿರುತ್ತದೆ. ಇಂತಹ ಕೇಂದ್ರೀಯ ಪರಮಾಣು ಅಯಾನ್‌ಗಳಿಗೆ ಲೆವಿಸ್ ಆಮ್ಲಗಳು ಎಂದೂ ಸಹ ಉಲ್ಲೇಖಿಸಲಾಗುತ್ತದೆ.

3. ಲಿಗ್ಯಾಂಡ್ಸ್

ಸಮನ್ವಯಿ ಘಟಕದಲ್ಲಿ ಕೇಂದ್ರೀಯ ಪರಮಾಣು ಅಥವಾ ಅಯಾನ್‌ಗೆ ಬಂಧಿಸಲ್ಪಟ್ಟ ಅಯಾನ್ ಅಥವಾ ಅಣುಗಳಿಗೆ ಲಿಗ್ಯಾಂಡ್ಸ್‌ಗಳೆಂದು ಕರೆಯುತ್ತಾರೆ. ಇವುಗಳು Cl^- ನಂತಹ ಸರಳ ಅಯಾನ್‌ಗಳು, H_2O ಅಥವಾ NH_3 ದಂತಹ ಸಣ್ಣ ಅಣುಗಳು $H_2N\text{-}CH_2\text{-}CH_2\text{-}NH_2$ ಅಥವಾ $N(CH_2\text{-}Ch_2\text{-}NH_2)_3$ ನಂತಹ ದೊಡ್ಡ ಅಣುಗಳು ಅಥವಾ ಪ್ರೊಟೀನ್‌ನಂತಹ ಬೃಹತ್ ಅಣುಗಳೂ ಕೂಡ ಆಗಿರಬಹುದು.

ಒಂದು ಏಕೈಕ ದಾನೀಯ ಪರಮಾಣುವಿನಿಂದ ಒಂದು ಲೋಹದ ಅಯಾನ್‌ಗೆ ಬಂಧಿತವಾಗಿರುವ ಲಿಗ್ಯಾಂಡ್ ಏಕದಂತೀಯ ಲಿಗ್ಯಾಂಡ್ ಎಂದು ಹೇಳಲ್ಪಡುತ್ತದೆ.

ಉದಾಹರಣೆ: Cl^-, H_2O, NH_3


ಎರಡು ದಾನೀಯ ಪರಮಾಣುವಿನ ಮೂಲಕ ಬಂಧವನ್ನು ಮಾಡಿದಾಗ ಅಂತಹ ಲಿಗ್ಯಾಂಡ್ ದ್ವಿದಂತೀಯ ಲಿಗ್ಯಾಂಡ್‌ಗಳೆನ್ನುವರು.

ಉದಾಹರಣೆ: $H_2NCH_2CH_2NH_2$ (ಈಥೇನ್1.2-ಡೈ ಅಮೈನ್) ಅಥವಾ $C_2O_4^{2-}$ (ಆಕ್ಸಲೇಟ್) ಲಿಗ್ಯಾಂಡ್‌ಗಳು.

ಲಿಗ್ಯಾಂಡ್‌ನಲ್ಲಿ ಬಹುಸಂಖ್ಯೆಯ ದಾನೀಯ ಪರಮಾಣುಗಳು ಇದ್ದರೆ ಆ ಲಿಗ್ಯಾಂಡ್ ಬಹುದಂತೀಯ ಎನ್ನುವರು.

ಉದಾಹರಣೆ: $N(CH_2CH_2NH_2)_3$

ಈಥಿಲಿನ್ ಡೈಅಮೈನ್‌ಟೆಟ್ರಾಅಸಿಟೇಟ್ ಅಯಾನ್ $[EDTA]^{4-}$ ಒಂದು ಅತಿಮುಖ್ಯ ಷಟ್‌ದಂತೀಯ ಲಿಗ್ಯಾಂಡ್.




ಇದು ಕೇಂದ್ರೀಯ ಲೋಹದ ಪರಮಾಣುವಿನೊಡನೆ ಎರಡು ಸಾರಜನಕ ಪರಮಾಣು ಮತ್ತು 4 ಆಮ್ಲಜನಕದ ಪರಮಾಣುಗಳ ಮೂಲಕ ಬಂಧಿಸಲ್ಪಡುತ್ತದೆ.

ಒಂದು ದ್ವಿದಂತೀಯ ಅಥವಾ ಬಹುದಂತೀಯ ಲಿಗ್ಯಾಂಡ್ ತನ್ನ ಎರಡು ಅಥವಾ ಅದಕ್ಕಿಂತ ಹೆಚ್ಚು ದಾನೀಯ ಪರಮಾಣುಗಳನ್ನು ಬಳಸಿ, ಒಂದು ಏಕೈಕ ಲೋಹದ ಅಯಾನ್‌ಗೆ ಬಂಧಿತವಾದರೆ ಅದನ್ನು ಕೀಲೇಟ್ ಲಿಗ್ಯಾಂಡ್ ಎನ್ನುತ್ತಾರೆ. ಅಂತಹ ದಂತೀಯ ಗುಂಪುಗಳ ಸಂಖ್ಯೆಯನ್ನು ಲಿಗ್ಯಾಂಡಿನ ದಂತೀಯತೆ (denticity) ಎನ್ನುವರು.


ಎರಡು ಬೇರೆ ಬೇರೆ ಪರಮಾಣುವಿನ ಮೂಲಕ ಬಂಧಿಸಿಕೊಳ್ಳುವ ಲಿಗ್ಯಾಂಡ್ ಅನ್ನು ಉಭಯ ದಂತೀಯ ಲಿಗ್ಯಾಂಡ್ ಎನ್ನುವರು.

ಉದಾಹರಣೆ: NO_2^- ಮತ್ತು SCN^- ಅಯಾನ್‌ಗಳು, NO_2 ಅಯಾನ್, ಕೇಂದ್ರೀಯ ಲೋಹದ ಪರಮಾಣುವಿಗೆ, ಸಾರಜನಕದ ಅಥವಾ ಆಮ್ಲಜನಕದ ಮೂಲಕ ಸಮನ್ವಯತೆಯನ್ನು ಹೊಂದಲು ಸಾಧ್ಯ.



nitrito-N nitrito-O

M ← SCN thiocyanato-S; M ← NCS thiocyanato-N



ಸುಭಾಷಿತ

ಗುಣಮಟ್ಟ ಎಂದರೆ, ಯಾರೊಬ್ಬರೂ ಗಮನಿಸದೇ ಇದ್ದಾಗಲೂ ಸರಿಯಾದುದನ್ನು ಮಾಡುವುದೇ ಆಗಿದೆ.

–ಹೆನ್ರಿ ಫೋರ್ಡ್

ರಾಜಕೀಯ ದ್ವೇಷ ಸಾಧನೆಗೆ ಸಿಬಿಐ ಬಳಕೆ: ಕೇಂದ್ರಕ್ಕೆ ಭೂಷಣವಲ್ಲ

ನಾರದಾ ಮಾರುವೇಷದ ಕಾರ್ಯಾಚರಣೆಯ ಲಂಚ ಪ್ರಕರಣವನ್ನು ಮುಂದಿಟ್ಟುಕೊಂಡು ಪಶ್ಚಿಮ ಬಂಗಾಳದಲ್ಲಿ ಆಡಳಿತಾರೂಢ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಪಕ್ಷಕ್ಕೆ ಮುಜುಗರ ಉಂಟುಮಾಡುವ ಬಿಜೆಪಿ ನೇತೃತ್ವದ ಕೇಂದ್ರದ ಎನ್‌ಡಿಎ ಸರ್ಕಾರ ಯತ್ನಿಸುತ್ತಿದೆ ಎಂಬ ಆರೋಪಕ್ಕೆ ಪುಷ್ಟಿ ನೀಡುವಂತಿದೆ ಸಿಬಿಐ ನಡೆ. ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಟಿಎಂಸಿ ಭಾರಿ ಗೆಲುವು ಸಿಕ್ಕಿದೆ. ಮಮತಾ ಬ್ಯಾನರ್ಜಿ ಅವರು ಮೂರನೇ ಅವಧಿಗೆ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಬೆನ್ನಿಗೇ ಸಿಬಿಐ ಅಧಿಕಾರಿಗಳು ಟಿಎಂಸಿ ಮುಖಂಡರನ್ನು ಬಂಧಿಸಿದ್ದಾರೆ. ಸ್ವತಂತ್ರ ತನಿಖಾ ಸಂಸ್ಥೆಯನ್ನು ರಾಜಕೀಯ ದ್ವೇಷ ಸಾಧನೆಗೆ ಬಳಸಿಕೊಳ್ಳಲಾಗಿದೆ ಎಂಬುದಕ್ಕೆ ಇಂಬು ಕೊಡುವ ಹಲವು ಅಂಶಗಳು ಈ ಪ್ರಕರಣದಲ್ಲಿ ಕಾಣಿಸುತ್ತಿವೆ. ಕೇಂದ್ರ ಭದ್ರತಾ ಪಡೆಗಳ ಜೊತೆಗೆ ಬಂದ ಸಿಬಿಐ ಅಧಿಕಾರಿಗಳು ಸಚಿವರಾದ ಫಿರ್ಹಾದ್ ಹಕೀಮ್ ಮತ್ತು ಸುಬ್ರತಾ ಮುಖರ್ಜಿ, ಶಾಸಕ ಮದನ್ ಮಿತ್ರಾ ಹಾಗೂ ಟಿಎಂಸಿಯ ಮಾಜಿ ಮುಖಂಡ ಸೋವನ್ ಚಟರ್ಜಿ ಅವರನ್ನು ನಾರದಾ ಪ್ರಕರಣದಲ್ಲಿ ಬಂಧಿಸಿದ್ದಾರೆ. ಇದು 2014ರ ಪ್ರಕರಣ. ನಾರದಾ ಸುದ್ದಿ ಪೋರ್ಟಲ್‌ನ ಪತ್ರಕರ್ತರೊಬ್ಬರು ಉದ್ಯಮಿಯ ಮಾರುವೇಷದಲ್ಲಿ ಕಾರ್ಯಾಚರಣೆ ನಡೆಸಿದ್ದರು. ದೆಹಲಿಯಿಂದ ಕೋಲ್ಕತ್ತಕ್ಕೆ ಬಂದ 'ಉದ್ಯಮಿ', ತಮಗೆ ಪಶ್ಚಿಮ ಬಂಗಾಳದಲ್ಲಿ ಬಂಡವಾಳ ಹೂಡಿಕೆಗೆ ಅವಕಾಶ ನೀಡಬೇಕೆಂದು ಕೋರಿ ಆಗಿನ ಸರ್ಕಾರದ ನಾಲ್ವರು ಸಚಿವರು, ಒಬ್ಬ ಶಾಸಕ ಮತ್ತು ಒಬ್ಬ ಪೊಲೀಸ್ ಅಧಿಕಾರಿಗೆ ₹4 ಲಕ್ಷದಿಂದ 5 ಲಕ್ಷ ಲಂಚ ನೀಡಿದ್ದರು ಎನ್ನಲಾದ ಪ್ರಕರಣವಿದು. ಲಂಚ ನೀಡುವಿಕೆಯು ಕ್ಯಾಮೆರಾದಲ್ಲಿ ಸೆರೆಯಾಗಿತ್ತು. 2016ರ ರಾಜ್ಯ ವಿಧಾನಸಭಾ ಚುನಾವಣೆಗೆ ಕೆಲವೇ ದಿನಗಳ ಮೊದಲು ಈ ವಿಡಿಯೊ ಬಹಿರಂಗವಾಗಿತ್ತು. ಹೀಗಾಗಿ ಕಾರ್ಯಾಚರಣೆಯ ಹಿಂದೆ ರಾಜಕೀಯ ದುರುದ್ದೇಶವಿದೆ ಎಂದು ಆಗ ಆರೋಪಿಸಲಾಗಿತ್ತು. ಈ ಪ್ರಕರಣದ ತನಿಖೆ ನಡೆಸುವಂತೆ ಸಿಬಿಐಗೆ ಕೋಲ್ಕತ್ತ ಹೈಕೋರ್ಟ್ 2017ರಲ್ಲಿ ಆದೇಶ ನೀಡಿತ್ತು. ಬಂಧಿಸಲಾಗಿರುವ ನಾಲ್ವರಿಗೆ ನ್ಯಾಯಾಲಯವು ಜಾಮೀನು ನೀಡಿತ್ತು. ಆದರೆ, ಇದಕ್ಕೆ ಹೈಕೋರ್ಟ್‌ನಿಂದ ಸಿಬಿಐ ತಡೆಯಾಜ್ಞೆ ತಂದಿದೆ.



ಸಿಬಿಐಯನ್ನು ದುರ್ಬಳಕೆ ಮಾಡಿಕೊಳ್ಳುವುದು ಸರ್ಕಾರದ ತಪ್ಪು ನಡೆ ಹೇಗೋ ಹಾಗೆ ಆಡಳಿತಾರೂಢರ ಕೈಗೊಂಬೆಯಂತೆ ವರ್ತಿಸಿದರೆ ತನ್ನ ವರ್ಚಸ್ಸು ಪಾತಾಳಕ್ಕೆ ಕುಸಿಯುತ್ತಾ ಹೋಗುತ್ತದೆ ಎಂಬುದರ ಅರಿವು ತನಿಖಾ ಸಂಸ್ಥೆಗೂ ಆಗಬೇಕು

ಈ ಬಂಧನವನ್ನು ಖಂಡಿಸಿ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರೇ ಸಿಬಿಐನ ಕೋಲ್ಕತ್ತ ಕಚೇರಿಯ ಮುಂದೆ ಧರಣಿ ನಡೆಸಿರುವುದು ಪ್ರಕರಣದ ರಾಜಕೀಯ ಆಯಾಮಗಳನ್ನು ಎತ್ತಿ ತೋರಿದೆ. ಈಗ ಬಿಜೆಪಿಯಲ್ಲಿ ಇರುವ ಮುಕುಲ್ ರಾಯ್ ಮತ್ತು ಪಶ್ಚಿಮ ಬಂಗಾಳ ವಿಧಾನಸಭೆಯ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಅವರ ಹೆಸರೂ ಎಫ್‌ಐಆರ್‌ನಲ್ಲಿ ಇದೆ. ಎಫ್‌ಐಆರ್ ಪ್ರಕಾರ, ಮುಕುಲ್ ರಾಯ್ ಅವರು ಮೊದಲ ಆರೋಪಿ. ಸಿಬಿಐ ಈ ಇಬ್ಬರನ್ನು ಬಂಧಿಸಿಲ್ಲ ಅಥವಾ ತನಿಖೆಗೂ ಒಳಪಡಿಸಿಲ್ಲ. ನಾಲ್ವರು ಮುಖಂಡರ ಬಂಧನದ ಹಿಂದೆ ರಾಜಕೀಯ ದುರುದ್ದೇಶ ಇದೆ ಎಂಬುದಕ್ಕೆ ಇದು ಪುಷ್ಟಿ ಕೊಡುತ್ತದೆ. ಬಂಧಿತರಲ್ಲಿ ಒಬ್ಬರಾದ ಸೋವನ್ ಚಟರ್ಜಿ ಅವರು ಟಿಎಂಸಿ ಬಿಟ್ಟು 2019ರಲ್ಲಿ ಬಿಜೆಪಿ ಸೇರಿದ್ದರು. ಆದರೆ ಈ ಮಾರ್ಚ್‌ನಲ್ಲಿ ಅವರು ಬಿಜೆಪಿಗೆ ರಾಜೀನಾಮೆ ನೀಡಿದ್ದಾರೆ. ಅವರು ಬಿಜೆಪಿ ತೊರೆದದ್ದೇ ಬಂಧನಕ್ಕೆ ಕಾರಣ ಎಂದು ಹೇಳಲಾಗುತ್ತಿದೆ. ಸಂಸದರಾಗಿದ್ದ ಸುವೇಂದು ಅಧಿಕಾರಿ ಹಾಗೂ ಇನ್ನಿತರ ಮೂವರನ್ನು ವಿಚಾರಣೆಗೆ ಒಳಪಡಿಸಲು ಅನುಮತಿ ಕೋರಿ 2019ರ ಏಪ್ರಿಲ್‌ನಲ್ಲಿ ಲೋಕಸಭೆಯ ಸ್ಪೀಕರ್ ಅವರಿಗೆ ಪತ್ರ ಬರೆಯಲಾಗಿತ್ತು. ಈವರೆಗೂ ಅನುಮತಿ ದೊರೆತಿಲ್ಲ ಎಂದು ಸಿಬಿಐ ಅಧಿಕಾರಿಗಳು ಈಗ ಹೇಳತೊಡಗಿದ್ದಾರೆ. ನಾರದಾ ಪ್ರಕರಣದಲ್ಲಿ ತಪ್ಪಿತಸ್ಥರಿಗೆ ಶಿಕ್ಷೆ ಆಗಬೇಕು ಎನ್ನುವುದರಲ್ಲಿ ಎರಡು ಮಾತಿಲ್ಲ. ರಾಜಕೀಯ ದ್ವೇಷ ಸಾಧನೆಗೆ ಈ ಪ್ರಕರಣವನ್ನು ಬಳಸಿಕೊಳ್ಳುವುದು, ಬಿಜೆಪಿ ಮುಖಂಡರನ್ನು ಪ್ರಕರಣದಿಂದ ಕೈಬಿಡುವುದು, ಸಿಬಿಐ ದುರುಪಯೋಗವು ಸರಿಯಾದ ನಡವಳಿಕೆ ಅಲ್ಲ. ಕೇಂದ್ರದ ಆಡಳಿತಾರೂಢ ಪಕ್ಷದ ಕೈಗೊಂಬೆಯಂತೆ ಸಿಬಿಐ ವರ್ತಿಸುತ್ತಿದೆ ಎಂಬ ಆರೋಪ ಹಲವು ವರ್ಷಗಳಿಂದ ಇದೆ. ಅದು ನಿಜ ಎನ್ನುವಂತೆ ಸಿಬಿಐ ಹಲವು ಬಾರಿ ವರ್ತಿಸಿದೆ. ತನ್ನ ಹೆಸರಿಗೆ ಪದೇ ಪದೇ ಕಳಂಕ ಮೆತ್ತಿಕೊಳ್ಳುವ ಮೂಲಕ ಈ ಸಂಸ್ಥೆಯು ತನ್ನ ವಿಶ್ವಾಸಾರ್ಹತೆಯನ್ನೇ ಪಣಕ್ಕಿಟ್ಟಿದೆ. ಅಧಿಕಾರಾರೂಢ ಪಕ್ಷವನ್ನು ಅನುಸರಿಸುವ ವರ್ತನೆಯನ್ನು ಸಿಬಿಐ ನಿಲ್ಲಿಸಬೇಕು. [illegible] ಗಟ್ಟಿಯಾಗಿರುವ ಸಂಸ್ಥೆಯಾಗಿ ಕೆಲಸ ನಿರ್ವಹಿಸಬೇಕು. ಸಿಬಿಐ ಅಂದರೆ 'ಕಾಂಗ್ರೆಸ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್' ಎಂದು ಬಿಜೆಪಿ ಆರೋಪಿಸುತ್ತಿತ್ತು. ಈಗ ಅದೇ ಬಿಜೆಪಿ ಕಣ್ಣಿಗೆ ರಾಚುವಂತೆ ಸಿಬಿಐನ ದುರ್ಬಳಕೆಯಲ್ಲಿ ತೊಡಗಿರುವುದಕ್ಕೆ ಹಲವು ನಿದರ್ಶನಗಳನ್ನು ನೀಡಬಹುದು. ಪಕ್ಷಗಳು ಹೇಳಿದಂತೆ ಕೇಳಿದರೆ ಹಾಳಾಗುವುದು ತನ್ನ ವರ್ಚಸ್ಸು ಎಂಬುದು ಸಿಬಿಐಗೂ ಅರ್ಥ ಆಗಬೇಕು.

ದಿನದ ಟ್ವೀಟ್

ವಿಳಂಬದ ನಿರ್ಧಾರ



ಭಾರತೀಯ ವೈದ್ಯಕೀಯ ಸಂಶೋಧನಾ ಮಂಡಳಿ (ಐಸಿಎಂಆರ್) ತನ್ನ ಕೋವಿಡ್ ಚಿಕಿತ್ಸಾ ಮಾರ್ಗಸೂಚಿಯಿಂದ ಪ್ಲಾಸ್ಮಾ ಚಿಕಿತ್ಸೆಯನ್ನು ಕೈಬಿಟ್ಟಿರುವುದು ಒಳ್ಳೆಯ ಸುದ್ದಿ. ಆದರೆ, ಈ ಚಿಕಿತ್ಸೆಯ ಕಾರ್ಯಸಾಧುತ್ವದ ಬಗ್ಗೆ ಯಾವುದೇ ಪುರಾವೆಯಿಲ್ಲದೆ ಲಕ್ಷಾಂತರ ಜನರಿಗೆ ಚಿಕಿತ್ಸೆ ನೀಡಿದ ಬಳಿಕವಷ್ಟೇ ಇಂತಹ ಕ್ರಮಕ್ಕೆ ಮುಂದಾಗಿದ್ದು ಕೆಟ್ಟ ಸಂಗತಿ.

ಡಾ. ಸಿಮಲ್ ಸೋಯಿನ್, ವೈದ್ಯೆ, ಉದ್ಯಮಿ

25 ವರ್ಷಗಳ ಹಿಂದೆ

ಭಾನುವಾರ, 19-5-1996

● **27ರಂದೇ ವಿಶ್ವಾಸಮತ 'ಜನ ಖರೀದಿ' ಇಲ್ಲ: ಬಿಜೆಪಿ**

ನವದೆಹಲಿ, ಮೇ 18– ಈ ತಿಂಗಳ ಇಪ್ಪತ್ತೆರಡರಂದು ಸೇರಲಿರುವ ಹನ್ನೊಂದನೇ ಲೋಕಸಭೆಯ ಪ್ರಾರಂಭಿಕ ಅಧಿವೇಶನದಲ್ಲಿ 27ರಂದೇ ಭಾರತೀಯ ಜನತಾ ಪಕ್ಷ ನೇತೃತ್ವದ ಸರ್ಕಾರದ ಅಳಿವು ಉಳಿವಿನ ಪ್ರಶ್ನೆ ಇತ್ಯರ್ಥವಾಗಲಿದೆ. ಇಂದು ಸಂಜೆ ನಾಲ್ಕು ಗಂಟೆಗೆ ನಡೆದ ಕೇಂದ್ರ ಸಂಪುಟದ ಸಭೆಯು ಈ ಮುಂಚೆ 24ರಿಂದ ಮಾಡಬೇಕೆಂದು ತೀರ್ಮಾನಿಸಿದ್ದ ಅಧಿವೇಶನವನ್ನು 22ರಿಂದಲೇ ಆರಂಭಿಸಲು ನಿರ್ಧರಿಸಿತು.

ಈ ತಿಂಗಳ 31ರೊಳಗೆ ವಿಶ್ವಾಸಮತ ಕೋರಬೇಕೆಂದು ರಾಷ್ಟ್ರಪತಿ ಅವರು ಆಜ್ಞಾಪಿಸಿರುವುದರಿಂದ ಆದಷ್ಟು ಮುಂಚಿತವಾಗಿಯೇ ಪ್ರಧಾನಿ ವಾಜಪೇಯಿ ಅವರು ವಿಶ್ವಾಸಮತ ಕೋರುವುದು ಈಗಿನ ಬದಲಾವಣೆಯ ಉದ್ದೇಶ ಎಂಬುದಾಗಿ ಅಧಿಕೃತ ಮೂಲಗಳು ಹೇಳಿವೆ.

● **ಕಾವೇರಿ: 'ರಾಜ್ಯದ ನಿಲುವು ಬದಲಿಲ್ಲ'**

ಬೆಂಗಳೂರು, ಮೇ 18– ತೃತೀಯ ರಂಗದಲ್ಲಿ ಡಿಎಂಕೆ ನಿರ್ಣಾಯಕ ಪಾತ್ರ ವಹಿಸಿದ ಮಾತ್ರಕ್ಕೆ ರಾಜ್ಯ ಸರ್ಕಾರ ಕಾವೇರಿ ನದಿ ನೀರು ವಿವಾದಕ್ಕೆ ಸಂಬಂಧಿಸಿದಂತೆ ತಳೆದಿರುವ ನಿಲುವಿನಲ್ಲಿ ಯಾವುದೇ ರೀತಿಯ ಬದಲಾವಣೆಯೂ ಆಗುವುದಿಲ್ಲ ಎಂದು ತೃತೀಯ ರಂಗದ ನಾಯಕ ಮುಖ್ಯಮಂತ್ರಿ ಎಚ್.ಡಿ.ದೇವೇಗೌಡ ಇಂದು ಇಲ್ಲಿ ಘೋಷಿಸಿದರು.

50 ವರ್ಷಗಳ ಹಿಂದೆ

ಬುಧವಾರ, 19-5-1971

● **ಕೆಣಕಿದರೆ ಮಗ್ಗಲು ಮುರಿದೇವು: ಪಾಕ್‌ಗೆ ಇಂದಿರಾ ಎಚ್ಚರಿಕೆ**

ರಾಣಿಖೇತ್, ಮೇ 18– ಪಾಕಿಸ್ತಾನ ಹಾಕುವ ಯಾವ ಬೆದರಿಕೆಗಳಿಗೂ ಭಾರತ ಹೆದರದು ಎಂದು ಇಲ್ಲಿ ಇಂದು ಘೋಷಿಸಿದ ಪ್ರಧಾನಿ ಇಂದಿರಾ ಗಾಂಧಿ ಅವರು, 'ಅಂಥ ಪರಿಸ್ಥಿತಿಗೆ ನಮ್ಮನ್ನು ಬಲವಂತವಾಗಿ ಎಳೆದರೆ, ಹೋರಾಡಲು ನಾವು ಸಂಪೂರ್ಣ ಸನ್ನದ್ಧರಾಗಿದ್ದೇವೆ' ಎಂದರು.

ಪೂರ್ವ ಬಂಗಾಳದಲ್ಲಿ ಎಲ್ಲವೂ ಚೆನ್ನಾಗಿದೆಯೆಂಬ ಪಾಕಿಸ್ತಾನದ ಹೇಳಿಕೆಗಳ ಸತ್ಯವನ್ನು ಅವರು ಪ್ರಶ್ನಿಸಿ, ಇದು ವಾಸ್ತವವೇ ಆಗಿದ್ದರೆ ಭಾರತಕ್ಕೆ ಧಾವಿಸುತ್ತಿರುವ ನಿರಾಶ್ರಿತರನ್ನು ತತ್‌ಕ್ಷಣವೇ ಪಾಕಿಸ್ತಾನ ವಾಪಸು ಕರೆಸಿಕೊಳ್ಳಬೇಕೆಂದರು.

● **ಕಂದಾಯ ಬಾಕಿ ವಸೂಲಿಯಲ್ಲಿ ಕಿರುಕುಳವಿಲ್ಲ: ರಾಜ್ಯಪಾಲರ ಭರವಸೆ**

ಬೆಂಗಳೂರು, ಮೇ 18– ಭೂ ಕಂದಾಯ ಮತ್ತು ತಕರಾರು ತಖ್ತೆ ದಂಡ ವಸೂಲಿಯಲ್ಲಿ 'ದುರ್ಬಲರಿಗೆ' ಕಿರುಕುಳ ಕೊಡಬಾರದೆಂದು ಅಧಿಕಾರಿಗಳಿಗೆ ತಾವು ಸೂಚನೆ ನೀಡುವುದಾಗಿ ರಾಜ್ಯಪಾಲ ಶ್ರೀ ಧರ್ಮವೀರ ಅವರು ಇಂದು ರಾಜ್ಯದ ಸಂಸತ್ ಸದಸ್ಯರಿಗೆ ಭರವಸೆ ನೀಡಿದರೆಂದು ತಿಳಿದುಬಂದಿದೆ.

ಇಂದು ಸಂಜೆ ಸಂಸತ್ ಸದಸ್ಯರನ್ನು ರಾಜ್ಯಪಾಲರು ಭೇಟಿ ಮಾಡಿದಾಗ, ಕಂದಾಯ ವಸೂಲಿ ಮಾಡುವುದರಲ್ಲಿ ಅಧಿಕಾರಿಗಳು 'ಕಿರುಕುಳ' ಕೊಡುತ್ತಿದ್ದಾರೆ ಎಂದು ಅನೇಕ ಸದಸ್ಯರು ದೂರಿದರು.

ಕೋವಿಡ್ ಬಗೆಗಿಂತ ಹೆಚ್ಚಿನ ಮೌನವನ್ನು ನಮ್ಮ ನಾಯಕರು ಆರ್ಥಿಕತೆಯ ಬಗ್ಗೆ ವಹಿಸಿದ್ದಾರೆ

ಅಸಮಾನತೆಯ ಮಹಾಮಾರಿ



ವಿಶ್ಲೇಷಣೆ

ಎಂ.ಎಸ್.ಶ್ರೀರಾಮ್

ಕಳೆದ ವರ್ಷ ರಾಷ್ಟ್ರವ್ಯಾಪಿ ಲಾಕ್‌ಡೌನ್ ಆದಾಗ– ಅದೊಂದು ತಾತ್ಕಾಲಿಕ ಕಷ್ಟಕಾಲ ಅನ್ನಿಸಿತ್ತು ಹಾಗೂ ಕೋವಿಡ್-19 ಮಹಾಮಾರಿಯ ಭಯದಿಂದ ಲಾಕ್‌ಡೌನ್ ಹೇರಲಾಗಿತ್ತು. ಆದರೆ ಅದು ಆರೋಗ್ಯ ಸೇವೆಗಳಿಗಿಂತ ಹೆಚ್ಚಾಗಿ ಜೀವನೋಪಾಯಕ್ಕೆ ಸಂಬಂಧಿಸಿದ ಆರ್ಥಿಕ ಬಿಕ್ಕಟ್ಟಾಯಿತು. ಕೇಂದ್ರ ಸರ್ಕಾರ ಪರಿಸ್ಥಿತಿಯನ್ನು ನಿಯಂತ್ರಿಸಿ ಸೀಮಿತ ಮಟ್ಟದಲ್ಲಾದರೂ ಪ್ರತಿಸ್ಪಂದಿಸುತ್ತಿದ್ದಂತೆ ಕಾಣುತ್ತಿತ್ತು. ಆ ಪರಿಸ್ಥಿತಿಯಿಂದ ಬೇಗ ಹೊರಬರುವ ಒಂದು ವಿಚಿತ್ರ ನಂಬಿಕೆಯೂ ಇತ್ತು. ಆದರೆ ಈಗ ಎದುರಾಗಿರುವುದು ಆರೋಗ್ಯ ಸೇವೆ ಮತ್ತು ಆರ್ಥಿಕತೆಗಳೆರಡನ್ನೂ ಏಕಕಾಲಕ್ಕೆ ಬಿಕ್ಕಟ್ಟಿಗೆ ಸಿಲುಕಿಸಿರುವ ಮಹಾಮಾರಿ.

ಎರಡೂ ಕ್ಷೇತ್ರಗಳ ವಿಷಯದಲ್ಲಿ ಸರ್ಕಾರ ಸ್ಪಂದಿಸುತ್ತಿಲ್ಲ. ಆ ಬಗ್ಗೆ ಭರವಸೆ ಹುಟ್ಟಿಸುವ, ರಾಷ್ಟ್ರಕ್ಕೊಂದು ಸಂದೇಶ ನೀಡುವ ಪರಿಸ್ಥಿತಿಯಲ್ಲೂ ನಮ್ಮ ಪ್ರಧಾನಿಯಿಲ್ಲ.

ನಾಳಿನ ಬಗೆಗೆ ನಂಬಿಕೆಯೇ ನಮ್ಮ ವ್ಯಾಪಾರಗಳನ್ನು ಮುಂದುವರಿಸುವ ಉಮೇದನ್ನು ನೀಡುತ್ತದೆ. ಆದರೀಗ ಇರುವುದು ಅನಿರ್ದಿಷ್ಟಾವಧಿಯ ರಜಾಕಾಲ. ಆರೋಗ್ಯದ ದೃಷ್ಟಿಯಿಂದ ಈ ಮಹಾಮಾರಿ ಎಲ್ಲರನ್ನೂ ಸಮಾನವಾಗಿ ತಟ್ಟಿದೆಯಾದರೂ ಆರ್ಥಿಕವಾಗಿ ಇದರ ದೊಡ್ಡ ಪೆಟ್ಟು ಬಿದ್ದಿರುವುದು ಬಡವರಿಗೆ. ಈ ದೃಷ್ಟಿಯಲ್ಲಿ ಮಹಾಮಾರಿಯ ಬಗೆಗಿನ ಸರ್ಕಾರದ ಮೌನ ಒಂದೆಡೆಯಾದರೆ, ಕೌಟುಂಬಿಕ ಮಟ್ಟದಲ್ಲಿ ಆಗುತ್ತಿರುವ ಆರ್ಥಿಕ ಬಿಕ್ಕಟ್ಟಿನ ಬಗೆಗಿನ ಮೌನವಂತೂ ನಮ್ಮ ಕಿವಿಗಳಲ್ಲಿ ಅನುರಣಿಸುತ್ತಿದೆ. ಮೌನ ಇಷ್ಟು ಭೀಕರವಾಗಿ, ನಿರ್ದಯಿಯಾಗಿ, ನಿರ್ಮಮಕಾರದಿಂದ ಕೂಡಿದ್ದನ್ನು ನಾವು ಮೊದಲ ಬಾರಿಗೆ ಕಾಣುತ್ತಿದ್ದೇವೆ.

ಬಡತನಕ್ಕೆ ಜಾರುವ ಪ್ರಕ್ರಿಯೆಗೆ ಮುಖ್ಯ ಕಾರಣ ಆರೋಗ್ಯಕ್ಕೆ ಸಂಬಂಧಿಸಿದ ಘಟನೆಗಳೆಂದು ಮಾಜಿ ಐಎಎಸ್ ಅಧಿಕಾರಿ ಮತ್ತು ಡ್ಯೂಕ್ ವಿಶ್ವವಿದ್ಯಾಲಯದ ಪ್ರಾಧ್ಯಾಪಕ ಅನಿರುದ್ಧ ಕೃಷ್ಣ ಅವರ ಅಧ್ಯಯನಗಳು ತೋರಿಸಿವೆ. ಅವರ ಪುಸ್ತಕದ ಹೆಸರೇ 'ಒನ್ ಇಲ್‌ನೆಸ್ ಅವೇ'. ಇದು ಸಾಮಾನ್ಯ ಪರಿಸ್ಥಿತಿಯ ಕಥೆ.

ಲಾಕ್‌ಡೌನ್‌ನಿಂದಾಗಿ ಯಾವುದೇ ಆದಾಯವಿಲ್ಲ-ದಿದ್ದರೆ ಅಂದಂದಿನ ಸಂಪಾದನೆಯಿಂದ ಬದುಕುವವರ ಗತಿ ಏನು? ಇದನ್ನು ನಾವು ಹೋದವರ್ಷ ತಕ್ಕಮಟ್ಟಿಗೆ ನಿಭಾಯಿಸಲು ಪ್ರಯತ್ನಿಸಿದರೂ ಈ ಬಾರಿಯ ಮೌನ ಸಹಿಸಲು ಅಸಾಧ್ಯ. ಆರೋಗ್ಯಕ್ಕೆ ಸಂಬಂಧಿಸಿದ ಖರ್ಚುಗಳು ಜನರ ಕೌಟುಂಬಿಕ ಆರ್ಥಿಕತೆಯನ್ನು ಧ್ವಂಸ ಮಾಡುವುದಕ್ಕೆ ಮುಖ್ಯ ಕಾರಣವೆಂದರೆ, ಆ ಖರ್ಚುಗಳ ಸ್ವರೂಪ ಹೇಗಿರುತ್ತದೆ ಮತ್ತು ಯಾವ ಮಟ್ಟದ್ದಾಗಿರುತ್ತದೆ ಎಂಬುದು ಊಹಾತೀತ. ಆರೋಗ್ಯ ಬಿಗಡಾಯಿಸಿ ಆಸ್ಪತ್ರೆಗೆ ಹೋಗುವ ಸಂದರ್ಭದಲ್ಲಿ ಯಾವ ಚೌಕಾಸಿಗೂ ಎಡೆಯಿಲ್ಲ. ಸಿಕ್ಕ ವಾಹನವನ್ನು ಏರಬೇಕು, ಸಿಕ್ಕ ವೈದ್ಯರನ್ನು ಕಾಣಬೇಕು, ಅವರು ಹೇಳಿದ್ದನ್ನು ಮಾಡಬೇಕು. ಹೆಚ್ಚು ಪ್ರಶ್ನಿಸುವ ಅಥವಾ ಮತ್ತೊಬ್ಬ ವೈದ್ಯರ ಬಳಿಗೆ ಹೋಗುವ ಸಾಧ್ಯತೆ ಕಡಿಮೆ. ಒಂದು ಅಸಹಾಯಕ ಪರಿಸ್ಥಿತಿಯಲ್ಲಿ ಯಾವ ತಪಾಸಣೆ ಹೇಳಿದರೆ ಅದು, ಯಾವ ಮದ್ದು ಹೇಳಿದರೆ ಅದು ಎಂದು ಓಡಾಡುವ– ಆಗುವ ಖರ್ಚನ್ನು ಪರಿಗಣಿಸದಿರುವ ಪರಿಸ್ಥಿತಿಯಲ್ಲಿ ನಾವಿರುತ್ತೇವೆ.

ಹೀಗೆ ಖರ್ಚಿಗೆ ಕಡಿವಾಣವಿಲ್ಲದ ಅಸಹಾಯಕ ಪರಿಸ್ಥಿತಿಗೆ ಸಿಲುಕುವವರು ಮನೆಯ ಅನ್ನ ಗಳಿಸುವವರೇ ಆಗಿರುತ್ತಾರೆ. ಯಾಕೆಂದರೆ ಅವರು ಸಂಪಾದನೆಗಾಗಿ ಮನೆಯಿಂದ ಆಚೆ ಹೋಗಿರುತ್ತಾರೆ. ಇದೇ ಕಾರಣಕ್ಕಾಗಿಯೇ ಜನರ ಸಂಪರ್ಕಕ್ಕೆ ಬಂದಿರುತ್ತಾರೆ. ಬೀದಿಯಲ್ಲಿ ತರಕಾರಿ ಮಾರುವವರಿಗೆ, ರಸ್ತೆಯಂಚಿನಲ್ಲಿ ಪಾನಿಪೂರಿ ಮಾರುವವರಿಗೆ, ಮನೆಗೆಲಸ, ಬಟ್ಟೆಗಳಿಗೆ ಇಸ್ತ್ರಿ ಹಾಕುವ, ಆಟೊರಿಕ್ಷಾ ಚಲಾಯಿಸುವ ಮತ್ತು ದಿನಗೂಲಿಗೆ ಕೆಲಸ ಮಾಡುವ ಅನೇಕರಿಗೆ ವರ್ಕ್ ಫ್ರಂ ಹೋಂ ಸವಲತ್ತಿರುವುದಿಲ್ಲ.

ಲಾಕ್‌ಡೌನ್‌ನಿಂದಾಗಿ ನಾವು ದಿನಸಿ ಮತ್ತು ತರಕಾರಿ ಖರೀದಿಸುವ ವಿಧಾನ ಹೇಗೆ ಬದಲಾಗಿದೆ ಎಂಬುದನ್ನು ನೋಡೋಣ. ಬೆಳಿಗ್ಗೆ ಮನೆಗೇ ಸರಬರಾಜಾಗುವ ಹಾಲು, ಪೇಪರು ಮತ್ತು ಹತ್ತು ಗಂಟೆಯ ಒಳಗಾಗಿ ರಸ್ತೆಬದಿಯ ತಳ್ಳುಗಾಡಿಗಳಿಂದ ಕೊಳ್ಳಬಹುದಾದ ತರಕಾರಿ ಬಿಟ್ಟರೆ ಮಿಕ್ಕದ್ದು ಆನ್‌ಲೈನ್ ಖರೀದಿಯೇ. ಆನ್‌ಲೈನ್ ಖರೀದಿ ಮಾಡುವವರಿಗೆ (ಹಾಗೂ ಮಾರಾಟ ಮಾಡುವವರಿಗೆ) ಒಂದು ಇಂಟರ್‌ನೆಟ್ ಸಂಪರ್ಕವಿರಬೇಕು. ಆನ್‌ಲೈನಿನಲ್ಲಿ ವ್ಯವಹರಿಸಲು ಹಣಕಾಸನ್ನು ವರ್ಗಾಯಿಸುವ ಆ್ಯಪ್ ಅಥವಾ ಬ್ಯಾಂಕಿನ ಖಾತೆಯಿರಬೇಕು. ಇದಕ್ಕೊಂದು ಕಂಪ್ಯೂಟರೋ ಅಥವಾ ಸ್ಮಾರ್ಟ್ ಫೋನೋ ಬೇಕು. ಎಷ್ಟು ಜನರಿಗೆ ಈ ಸವಲತ್ತಿವೆ?

ಹೋಮ್ ಡೆಲಿವರಿಗೆ ಲಾಕ್‌ಡೌನ್ ನಿಯಮಗಳು ಅನ್ವಯಿಸುವುದಿಲ್ಲ. ಅವು ಅತ್ಯವಶ್ಯಕ ಸೇವೆಗಳು. ಅದರಿಂದಾಗಿ ಕೆಲವರಿಗೆ ನೌಕರಿ– ಆದಾಯ ಸಿಕ್ಕರೂ, ಅಸಂಘಟಿತ ಕ್ಷೇತ್ರದಲ್ಲಿ ಆದಾಯ ಕಳೆದುಕೊಂಡವರ ಸಂಖ್ಯೆಯೇ ಹೆಚ್ಚು. ಆದರೆ ಅದಕ್ಕಿಂತ ಮಹತ್ವದ ವಿಷಯವೊಂದಿದೆ– ವ್ಯಾಪಾರವೊಂದು ಸ್ಥಳೀಯ ಕಿರಾಣಿ ಅಂಗಡಿಯಿಂದ ಬಹುರಾಷ್ಟ್ರೀಯ ಅಮೆಜಾನ್‌ಗೆ ವರ್ಗಾವಣೆಯಾದಾಗ ದೊಡ್ಡ ಮಟ್ಟದಲ್ಲಿ ಈ ಅಸಮಾನತೆ ಹೇಗೆ ಬೆಳೆಯುತ್ತದೆ ಎನ್ನುವುದನ್ನು ಗಮನಿಸಿ. ಅಸಂಘಟಿತ ಕ್ಷೇತ್ರದಿಂದ ಉಂಟಾಗುತ್ತಿದ್ದ ಪ್ರತೀ ವ್ಯವಹಾರವೂ ಅಮೆಜಾನ್‌ಗೇ (ಆ ರೀತಿಯ ಕೈಬೆರಳೆಣಿಕೆಯ ಕೆಲ ಸಂಸ್ಥೆಗಳಿಗೆ) ಹೋಗುತ್ತದೆ ಎಂದು ಕ್ಷಣದ ಮಟ್ಟಿಗೆ ನಂಬೋಣ. ಅಂದರೆ ಲಕ್ಷಾಂತರ ಸಣ್ಣ ವ್ಯಾಪಾರಿಗಳಿಗೆ ದಿನನಿತ್ಯದ ವ್ಯಾಪಾರ ಇಲ್ಲವಾಗಿ, ಆ ಸಂಬಂಧದ ಆದಾಯದ ಹೆಚ್ಚು ಭಾಗ ದೊಡ್ಡ ಸಂಸ್ಥೆಗಳಿಗೆ ವರ್ಗಾಂತರವಾಗುತ್ತದೆ. ಹೀಗಾಗಿ ಮೊದಲೇ ಬಡವರಾಗಿದ್ದವರು ಇನ್ನಷ್ಟು ಬಡವರಾದರೆ, ಈಗಾಗಲೇ ಶ್ರೀಮಂತ-ರಾಗಿರುವವರು ಮತ್ತಷ್ಟು ಶ್ರೀಮಂತರಾಗುತ್ತಾರೆ. ಒಂದು ಮಟ್ಟದಲ್ಲಿ ಇದು ಅನ್ಯಾಯವಲ್ಲ.



ಸೋಂಕು ಹಬ್ಬದಿರಲು ಲಾಕ್‌ಡೌನ್ ಬೇಕು. ಲಾಕ್‌ಡೌನ್ ಕಾಲದಲ್ಲಿ ದಿನಸಿಯ ಸರಬರಾಜೂ ಆಗಬೇಕು. ಜನರ ಮನೆಗೇ ದಿನಸಿ ತಲುಪುವ ವ್ಯವಸ್ಥೆಯು ಉತ್ತಮ. ಆ ವ್ಯವಸ್ಥೆಯನ್ನು ಏರ್ಪಾಟು ಮಾಡಬಹು-ದಾದವರು ಹೂಡಿಕೆಯಿಟ್ಟ ದೊಡ್ಡ ವ್ಯಾಪಾರಿಗಳು. ಆ ಲಾಭ ಅವರಿಗೇ ಹೋಗುತ್ತದೆ. ನ್ಯಾಯವೇ... ಆದರೂ ಇದು ಅಸಮಾನತೆಯನ್ನು ಬೆಳೆಸುತ್ತಿಲ್ಲವೇ... ದೇಶವೇ ಬಿಕ್ಕಟ್ಟಿನಲ್ಲಿ ಸಿಲುಕಿರುವಾಗ ಷೇರು ಮಾರುಕಟ್ಟೆಯಲ್ಲಿ ಹಲವೇ ಕಂಪನಿಗಳು ಉತ್ತಮ ಪ್ರದರ್ಶನ ಮತ್ತು ಅಧಿಕ ಲಾಭ ತೋರಿಸುತ್ತಿರುವುದರಲ್ಲಿ ಆಶ್ಚರ್ಯವೇನು?

ಈ ಅಸಹಾಯಕ ಪರಿಸ್ಥಿತಿಯಲ್ಲಿ ಸರ್ಕಾರ ಮಾಡಬೇಕಾದ್ದೇನು? ಈಗ ಏರ್ಪಟ್ಟಿರುವ ಬಿಕ್ಕಟ್ಟಿ-ನಿಂದಾಗಿ ಹೆಚ್ಚಿನ ಆದಾಯ ಪಡೆಯುತ್ತಿರುವ ದೊಡ್ಡ ವ್ಯಾಪಾರಿಗಳ ಮೇಲೆ ತೆರಿಗೆಯನ್ನು ಹೆಚ್ಚಿಸುವುದು ಅಥವಾ ಅವರೊಂದಿಗೆ ಮಾತನಾಡಿ ಹೆಚ್ಚಿನ ದೇಣಿಗೆಯನ್ನು ಪಡೆಯುವುದು. ಆದರೆ ಕೋವಿಡ್ ಸೋಂಕಿನ ಬಗ್ಗೆ ನಮ್ಮ ನಾಯಕರು ಎಷ್ಟು ಮೌನ ವಹಿಸಿದ್ದಾರೋ ಅದಕ್ಕಿಂತ ಹೆಚ್ಚಿನ ಮೌನವನ್ನು ಆರ್ಥಿಕತೆಯ ಬಗ್ಗೆ ವಹಿಸಿದ್ದಾರೆ. ಮೌನದಲ್ಲೂ ಲಘು ಮತ್ತು ಗಾಢ ಮೌನ ಇರಬಹುದೆಂದು ಸಾಬೀತುಪಡಿಸಿದ್ದಾರೆ.

ಈ ಲೇಖನವನ್ನು ಬರೆಯುತ್ತಿರುವಾಗ ನನಗೆ ಬಹಳ ಭಯವೂ ಆಗುತ್ತಿದೆ. ಇದರಲ್ಲಿನ ಸೂಚನೆಗಳನ್ನು ಕೇಂದ್ರ ಸರ್ಕಾರ ಪರಿಗಣಿಸಿ ಶ್ರೀಮಂತರ ದೇಣಿಗೆಯನ್ನು ಪಿ.ಎಂ. ಕೇರ್ಸ್‌ನಲ್ಲಿ ಪಡೆದು– ಕೆಲವು ರಾಜ್ಯಗಳ ಮತ್ತು ಕೆಲವೇ ಯೋಜನೆಗಳಿಗೆ ಮಾತ್ರ ಅಪಾರದರ್ಶಕವಾಗಿ ಹಂಚುವ ಅಪಾಯವಿದೆ. ಅಲ್ಲೂ ಅದರಲ್ಲೂ ಒಂದು ಮೌನವಿದೆ. ಅಪಾಯಕಾರಿ ಮೌನ.

ಮಜಕೂರು ಇಷ್ಟೇ. ಈ ಪರಿಸ್ಥಿತಿಯನ್ನು ಇನ್ನಷ್ಟು ಉತ್ತಮವಾಗಿ ನಿಭಾಯಿಸಬಹುದು. ಜನರ ಪರಿಸ್ಥಿತಿಯನ್ನು ಪರಿಗಣಿಸಿ ಮಾನವೀಯವಾಗಿ ಸ್ಪಂದಿಸಬಹುದು. ಸಾಂತ್ವನದ ಕೆಲವು ಕ್ರಮಗಳನ್ನು ಕೈಗೊಳ್ಳಬಹುದು. ಆದರೆ ಯಶಸ್ಸು ನನ್ನದು ವೈಫಲ್ಯ ನಿನ್ನದು. ನನ್ನ ಮನೆ ಸ್ವಚ್ಛವಾಗಿದೆ ಎಂದು ಬೀಗುತ್ತಲೇ ಗುಡಿಸಿದ ಕಸವನ್ನು ರಾಜ್ಯಗಳೆಡೆ ಎಸೆಯುತ್ತಿರುವ ಈ ನಿರ್ಮಮಕಾರಿ ಕೇಂದ್ರದ ಕಿವಿಯಲ್ಲಿ ಕಟು ಸತ್ಯಗಳನ್ನು ಹೇಳುವುದಾದರೂ ಹೇಗೆ?

ಮೌನ ಒಂದೆಡೆಯಾದರೆ, ಕಷ್ಟ ಕಾಣದ ಕುರುಡೂ ಆಕ್ರಂದನ ಕೇಳದ ಕಿವುಡೂ ಇದೇ ಸರ್ಕಾರಕ್ಕಿದೆ. ಡುಂಡಿರಾಜರ ಹಳೇ ಹನಿಗವನ ಇಷ್ಟು ಕಟುಸತ್ಯ ಆಗಬಹುದೆಂದು ಅನ್ನಿಸಿರಲಿಲ್ಲ.

ಅಕ್ಟೋಬರ್ 2ರ ಪ್ರತಿಜ್ಞೆ

'ಮಹಾತ್ಮಾ, ನೀನು
ಹೇಳಿದಂತೆಯೇ
ಮಾಡುತ್ತೇವೆ
ಕೆಟ್ಟದ್ದನ್ನು ಕೇಳುವುದಿಲ್ಲ
ನೋಡುವುದಿಲ್ಲ
ಆಡುವುದಿಲ್ಲ
ಮಾಡುತ್ತೇವೆ'.

ಚುರುಮುರಿ



ವ್ಯಾಕ್ಸೀನ್ ಆಗ್ಯದ?

● ಲಿಂಗರಾಜು ಡಿ.ಎಸ್.

ತರಕಾರಿ ತರುಮಾ ಅಂತ ತುರೇಮಣೆ ಮನೆ ತಾವು ಬತ್ತಿದ್ದಂಗೇ ಪಕ್ಕದ ಮನೇರ ದೊಡ್ಡ ನಾಯಿ ಬೌ ಅಂತ ನುಗ್ಗಿಬಂತು. ನಾವು ಗಾಬರಾಗಿಬುಟ್ವೋ.

'ಶಾಕಾದ್ರಾ ಸಾ! ಹೆದುರ್ಕಬ್ಯಾಡಿ. ಇದು ನಮ್ಮ ಶಾಕುನಾಯಿ. ಬಲ್ರಿ ಕಾಪಿ ಕುಡದೋಗೂರಿ' ಅಂತ ಕರುದ್ರು ಅವರು. 'ಇಲ್ಲ ಇನ್ನೊಂದ್ಸಾರಿ ಬತ್ತೀವಿ' ಅಂದೋ ನಾವು ಭಯ ಬಿದ್ದು.

'ನೋಡ್ರಾ, ಮೊದಲು ನಾಯಿ ಬೊಗುಳಿಕ್ಯಂಡು ಬಂದಾಗ 'ಅದುಕ್ಕೆ ವ್ಯಾಕ್ಸೀನ್ ಆಗ್ಯದ?' ಅಂತ ಕೇಳಿಕ್ಯಂಡು ಹೋಯ್ತಿದ್ದೋ. ಈಗ ಹಂಗಲ್ಲ 'ನಿಮಗೆ ವ್ಯಾಕ್ಸೀನ್ ಆಗ್ಯದ' ಅಂತ ಇಚಾರಿಸ್ಕಂಡು ಹೋಗೋ ಪರಿಸ್ಥಿತಿ ಬಂದದೆ' ಅಂತು ಯಂಟಪ್ಪಣ್ಣ ಬೇಜಾರಲ್ಲಿ.

ತುರೇಮಣೆಯೋರ ಅವ್ವ ಊರಿಂದ ಬಂದುತ್ತು. 'ಏನವ್ವೋ ಊರಗೆ ಎಲ್ಲಾ ಚನ್ನಗವ್ರೋ?' ಅಂತ ಮಾತಾಡಿಸಿದೆ. 'ಏನು ಚಂದವೋ ಏನೋ ಬುಡಪ್ಪಾ. ಎಣ್ಣೆ-ಹಾಲು ಒಟ್ಟಿಗೆ ತರೂ ಟೈಂ ಬಂದದೆ!' ಅಂತು ಅಜ್ಜಿ.

'ವೋಗ್ಲಿ ಬುಡವ್ವಾ, ಕಸಾಯ-ಗಿಸಾಯ ಏನಾದ್ರೂ ಕುಡೀತಿದ್ದಯಾ?' ಅಂತು ಯಂಟಪ್ಪಣ್ಣ. 'ಅಯ್ಯೋ ಬುಡಪ್ಪ, ಕಸಾಯ ಕುಡುದ್ರೆ ಕೊರೋನಾ ಬರೂದಿಲ್ಲ ಅಂದೋರೇನು ಸರ್ವಜ್ಞರೇ!' ಅಜ್ಜಿ ತಲೆ ಒಗೀತು.

'ವ್ಯಾಕ್ಸೀನ್ ತಗಂಡೇನವ್ವಾ?' ಕೇಳಿದೆ. 'ವ್ಯಾಕ್ಸೀನು ಎಲ್ಲ್ಯದೆ ಮಗಾ. ವ್ಯಾಕ್ಸೀನು, ಆಮ್ಲಜನಕ ಸಿಗನಿಲ್ಲ ಅಂದ್ರೆ ಸರ್ಕಾರ ನೇಣಾಕ್ಕ್ಯತದಾ?' ಅಂತ ಟೀಕಾ ಪ್ರಹಾರ ಮಾಡಿತು.

'ಅಲ್ಲಾ ಕವ್ವಾ, ಸರ್ಕಾರಕ್ಕಿನ್ನೇನು ಕೆಲಸ? ಸತ್ತರೆ ಸಾಯಲಿ ಅಂತ ಗಳಿಗ್ಗೊಂದು ಮಾತಾಡ್ತಿದ್ರೆ ಹ್ಯಂಗೆ?' ಅಂದೆ.

'ಎರಡಕ್ಕೋದೋನೆ ತೊಳಕಬೇಕಲ್ಲವ್ವಾ? ನಮ್ಮ ರೋಗಕ್ಷೇಮ ನಾವೇ ನೋಡ್ಕಬೇಕು ಕಪ್ಪಾ. ನಿಮ್ಮಂಗೇ ಚಂಗಲು ಬಿದ್ದೋರು ಭಾಳಾ ಜನಾಗ್ಯವರೆ' ಅಂತು ಅಜ್ಜಿ.

'ಹಂಗಂದ್ರೇನವ್ವಾ?' ಅಂತ ಕೇಳಿದೆ.

'ಮಾನಗೆಟ್ಟ ನನ ಮಕ್ಕಳಾ, ಬಿದಿರು ಮೋಟ್ರು ಬೇಕಾದರೆ ಬೀದಿ ಸುತ್ತಿ. ಬದುಕು ಬೇಕಾದರೆ ಅಮಿಕ್ಕಂಡು ಮನೇಲಿರಿ' ಅಜ್ಜಿ ಕಣ್ಣು ಮೆಡರಿಸ್ತಿದ್ದಂಗೇ ನಾವು ಪರಾರಿಯಾದೋ!

ಸಂಗತ

ಕೋವಿಡ್ ಅಲೆಯಲ್ಲಿ ಆನ್‌ಲೈನ್ ತರಂಗ

ಕೋವಿಡ್‌ಪೂರ್ವ ಯುಗದಲ್ಲಿ ಸೀಮಿತವಾಗಿ ಬಳಕೆಯಲ್ಲಿದ್ದ ಆನ್‌ಲೈನ್ ವೈದ್ಯಕೀಯ ಸಲಹೆ, ಈಗ ಅದರ ಬಗ್ಗೆ ಅಧ್ಯಯನಗಳು ನಡೆಯುವಷ್ಟು ಬೆಳೆದುನಿಂತಿದೆ

● ಡಾ. ಕೆ.ಎಸ್.ಪವಿತ್ರ

ಕೋವಿಡ್ ಎರಡನೇ ಅಲೆ ಜೋರಾಗಿರುವ ಈ ಸಮಯದಲ್ಲಿ 'ನಿಮಗೆ ಆಸ್ಪತ್ರೆಗೆ ಹೋಗಲಿಷ್ಟವೇ' ಎಂಬ ಪ್ರಶ್ನೆ ಯಾರಿಗಾದರೂ ಎದುರಾದರೆ?! ಉತ್ತರ ನಿಸ್ಸಂದೇಹವಾಗಿ 'ಇಲ್ಲ' ಎಂದೇ ಆಗಿರುತ್ತದೆ. ಇದು ಈಗ ಮಾತ್ರವಲ್ಲ, ಯಾವಾಗಲೂ ಎಂಬುದು ಸತ್ಯದ ಮಾತೇ.

ಆಸ್ಪತ್ರೆಗಳನ್ನು ಸಾಮಾನ್ಯವಾಗಿ ನಾವ್ಯಾರೂ ಇಷ್ಟಪಡುವುದಿಲ್ಲ. ದುಡ್ಡು ಖರ್ಚಾಗಬಹುದು ಎಂಬ ಒಂದೇ ಕಾರಣಕ್ಕಲ್ಲ. ಆಸ್ಪತ್ರೆಯಲ್ಲಿನ 'ವಾಸನೆ', ಕಾಯಬೇಕಾದ ಸಮಯ, ವೈದ್ಯರು ಏನು ಹೇಳುತ್ತಾರೋ, ಪರೀಕ್ಷೆಗಳು ಏನು ಕಂಡು-ಹಿಡಿಯುತ್ತವೋ ಎಂಬ ಅವ್ಯಕ್ತ ಭಯ ಎಲ್ಲವೂ ನಮ್ಮನ್ನು ಕಾಡುತ್ತವೆ. ಇವಲ್ಲದೆ ಔಷಧಿಗಳು- ಅವುಗಳ ಖರ್ಚು- ಅವುಗಳಿಂದ ಅಡ್ಡಪರಿಣಾಮದ ಭಯ, ಮನೋವೈದ್ಯಕೀಯ- ಏಡ್ಸ್- ಕ್ಯಾನ್ಸರ್‌ನಂತಹ ಕಾಯಿಲೆಗಳಲ್ಲಿ ಸಮಾಜ ತಗುಲಿಸಬಹುದಾದ ಹಣೆಪಟ್ಟಿಯ ಹೆದರಿಕೆ ಕೂಡ ಆಸ್ಪತ್ರೆಗಳಿಗೆ ಜನರು ಬರಲು ಹಿಂಜರಿಯುವುದಕ್ಕೆ ಇರುವ ಕಾರಣಗಳು. ಈಗ ಕೋವಿಡ್ ಸಮಯದಲ್ಲಂತೂ ಆಸ್ಪತ್ರೆಯಿಂದಲೇ ಸೋಂಕು ತಗುಲುವ ಬೆದರಿಕೆ ಬೇರೆ.

ಕೋವಿಡ್ ಸಮಯದಲ್ಲಿ ಇತರ ಕಾಯಿಲೆಗಳು ನಿರ್ಲಕ್ಷ್ಯಕ್ಕೀಡಾಗುವ ಬಗ್ಗೆ ಮಾಧ್ಯಮಗಳು ಗಮನ ಸೆಳೆದಿವೆ. ಸಾರಿಗೆ ಮುಷ್ಕರ, ನಂತರ ಲಾಕ್‌ಡೌನ್‌ಗಳು ದೂರದ ಹಳ್ಳಿಗಳಿಂದ ಪಟ್ಟಣಗಳಿಗೆ ವೈದ್ಯಕೀಯ ಸಲಹೆಗೆಂದು ಬರುವ ಅಸಂಖ್ಯಾತ ಜನರಿಗೆ ಚಿಕಿತ್ಸೆಯನ್ನು ಮತ್ತಷ್ಟು ದುರ್ಲಭವಾಗಿಸಿವೆ. ಹಾಗಿದ್ದರೆ ಇಂತಹ ಪರಿಸ್ಥಿತಿಯನ್ನು ಬದಲಿಸಲು ಸಾಧ್ಯವಿಲ್ಲವೇ?

ಇಂಥ ಸಂದರ್ಭದಲ್ಲಿಯೇ, ವೈದ್ಯಕೀಯ ಕ್ಷೇತ್ರದ ಇನ್ನೊಂದು ಶಾಖೆಯಾಗಿ ಆನ್‌ಲೈನ್ ಸಲಹೆ-ಚಿಕಿತ್ಸೆಗಳು ಬೆಳೆದು ನಿಂತಿರುವುದು. ಕೋವಿಡ್‌ಪೂರ್ವ ಯುಗದಲ್ಲಿ ತುಂಬ ಸೀಮಿತವಾಗಿ ಬಳಕೆಯಲ್ಲಿದ್ದ ಈ ಬಗೆಯ ಸಲಹೆ, ಕಳೆದ ಒಂದು ವರ್ಷದಲ್ಲಿ ಅದರ ಬಗ್ಗೆ ಅಧ್ಯಯನಗಳು ನಡೆಯುವಷ್ಟು ಬೆಳೆದುನಿಂತಿದೆ. ವೈದ್ಯಕೀಯ ವಿದ್ಯಾರ್ಥಿ ಈವರೆಗೆ ಕಲಿಯಬೇಕಾಗಿದ್ದ 'ಬೆಡ್‌ಸೈಡ್ ಮ್ಯಾನರ್ಸ್' ಬದಲು 'ವೆಬ್‌ಸೈಡ್ ಮ್ಯಾನರ್ಸ್' ಕಲಿಯಬೇಕಾಗಿದೆ!

ಈಗಿರುವ ಆಸ್ಪತ್ರೆ ವ್ಯವಸ್ಥೆಯನ್ನು ಕ್ರಾಂತಿಕಾರಕವಾಗಿ ಬದಲಿಸುವ ಎಲ್ಲ ಸಾಧ್ಯತೆಗಳತ್ತ ಆನ್‌ಲೈನ್ ಸಲಹೆ ದಾಪುಗಾಲಿಕ್ಕಿದೆ. ಆದರೆ ಅದರ ಉಪಯುಕ್ತತೆ-ಸವಾಲು-ಮಿತಿಗಳನ್ನು ಜನರು ಮತ್ತು ವೈದ್ಯಕೀಯ ಕ್ಷೇತ್ರ ಅರ್ಥಮಾಡಿಕೊಳ್ಳುವುದು ಈ ಹೊತ್ತಿನ ತುರ್ತು ಎಂಬುದನ್ನು ನಾವು ಮರೆಯುವಂತಿಲ್ಲ.

ಕಳೆದ ಹತ್ತು ವರ್ಷಗಳಲ್ಲಿ ದೇಶದ ಜನಸಂಖ್ಯೆಗೆ ಅನುಗುಣವಾಗಿ ಆರೋಗ್ಯದ ಖರ್ಚೂ ಹೆಚ್ಚುತ್ತಿದೆ. 90ರ ದಶಕದಲ್ಲಿ ಶೇ 50ರಷ್ಟು ಸಾವುಗಳು ಸೋಂಕು ರೋಗಗಳು, ಅಪೌಷ್ಟಿಕತೆಯ ಸಮಸ್ಯೆ ಮತ್ತು ಮಾತೃ-ಶಿಶು ಮರಣದಿಂದ ನಡೆಯುತ್ತಿದ್ದವು. ಈಗ ಭಾರತದ ಜನಸಂಖ್ಯೆ ಹೆಚ್ಚು ಅಪಾಯ ಎದುರಿಸುತ್ತಿರುವುದು ದೀರ್ಘಕಾಲಿಕ ಕಾಯಿಲೆಗಳಾದ ಹೃದಯ ಸಂಬಂಧಿ ಸಮಸ್ಯೆಗಳು, ಬೊಜ್ಜು, ಕ್ಯಾನ್ಸರ್, ಮಧುಮೇಹಗಳಿಂದ. ಸೋಂಕು ರೋಗಗಳ ಚಿಕಿತ್ಸೆ ಒಂದು ಬಾರಿಯ ವೆಚ್ಚವಾದರೆ ಈ ದೀರ್ಘಕಾಲಿಕ ಕಾಯಿಲೆಗಳಿಗೆ ಬೇಕಾದ ಚಿಕಿತ್ಸೆ-ಸಲಹೆ ನಿರಂತರ. ರಕ್ತದೊತ್ತಡ, ಮಧುಮೇಹ, ಖಿನ್ನತೆಯು ದೀರ್ಘಾವಧಿಯ ಫಾಲೊ ಅಪ್ ಬೇಕಾದ ಕಾಯಿಲೆಗಳು. ಇವು ಸಾರಿಗೆ ಖರ್ಚು, ಕಾಯಿಲೆಯ ರಜೆಯಂತಹವುಗಳಿಗೆ ಕಾರಣವಾಗಿ ದೇಶದ ಆರ್ಥಿಕತೆಯನ್ನು ನರಳಿಸುತ್ತವೆ. ಇನ್ನೊಂದೆಡೆ, ಈಗಾಗಲೇ ಕಡಿಮೆ ಪ್ರಮಾಣದಲ್ಲಿರುವ ವೈದ್ಯಕೀಯ ಮಾನವ ಸಂಪನ್ಮೂಲವನ್ನು ಕಬಳಿಸುತ್ತವೆ.

ಶೇ 46ರಷ್ಟು ಆಸ್ಪತ್ರೆ ಆರೈಕೆಯು ರೋಗಿಯ ಮನೆಯಲ್ಲಿಯೇ ನಡೆಯಲು ಸಾಧ್ಯ ಎಂಬುದನ್ನು ಸಂಶೋಧನೆಗಳು ದೃಢಪಡಿಸಿವೆ. ಎಂತಹವರಿಗೆ ಆನ್‌ಲೈನ್ ಸಲಹೆ ಬಹು ಉಪಯುಕ್ತ? ವೃದ್ಧರು, ಆಸ್ಪತ್ರೆಗೆ ತೆರಳಲು ಇನ್ನೊಬ್ಬರ ಸಹಾಯ ಬೇಕಾದ ಹಿರಿಯರು, ಮರಣಶಯ್ಯೆಯಲ್ಲಿರುವ ರೋಗಿಗಳು ಮನೆಯಲ್ಲಿಯೇ ತೆರೆಯ ಮೇಲೆ ವೈದ್ಯರಿಂದ ಸಲಹೆ ಪಡೆಯುವಂತಾದರೆ ಅದು ಜೀವನದ ಗುಣಮಟ್ಟವನ್ನು ಏರಿಸಬಲ್ಲದು.



ಸಾಮಾನ್ಯವಾಗಿ ಆನ್‌ಲೈನ್ ಸಲಹೆಯನ್ನು ಬಳಸಲು ವೈದ್ಯರಿಗಾಗಲೀ ರೋಗಿಗಳಿಗಾಗಲೀ ಇರುವ ಬಹು ದೊಡ್ಡ ಅಡ್ಡಿಯೆಂದರೆ ಮಾನವ ಸ್ಪರ್ಶದ ಕೊರತೆ. ಕೋವಿಡ್‌ನಂತಹ ಸೋಂಕಿನ ಸಮಯ ಇದು ಹೇಗೂ ಸಾಧ್ಯವಾಗದ ಪರಿಸ್ಥಿತಿ ಸೃಷ್ಟಿಸಿದೆ. ಹಾಗಾಗಿ ಆನ್‌ಲೈನ್ ಸಲಹೆಯನ್ನು ಪ್ರಯೋಗಕ್ಕೆ ಒಡ್ಡಲು ಇದೊಂದು ಅವಕಾಶವೇ ಆಗಬಹುದು. ಆದರೆ ದೈಹಿಕ ಪರೀಕ್ಷೆ ಅಗತ್ಯವಿರುವ ಸಂದರ್ಭಗಳಲ್ಲಿ ಆನ್‌ಲೈನ್ ಮುಖಾಂತರ ಹೇಗಾದರೂ ಮುಗಿಸಿಬಿಡುವ, ಮುಖತಃ ಭೇಟಿಯನ್ನು ಮುಂದೆ ತಳ್ಳಿಬಿಡುವ ಪ್ರವೃತ್ತಿಯನ್ನು ವೈದ್ಯ-ರೋಗಿ ಇಬ್ಬರೂ ತಡೆಯುವ ಧೈರ್ಯ ಮಾಡುವುದು ಅತ್ಯವಶ್ಯ.

ಆನ್‌ಲೈನ್ ಸಲಹೆಯು ಬಹಳಷ್ಟು ಪರಿಣಾಮಕಾರಿಯಾಗಿದ್ದು, ಸಾಂಕ್ರಾಮಿಕದ ನಂತರವೂ ಮುಂದುವರಿಯುತ್ತದೆ ಎಂದು ಶೇ 94ರಷ್ಟು ವೈದ್ಯರು ಅಭಿಪ್ರಾಯಪಟ್ಟಿದ್ದಾರೆ. 'ದ ಡಾಕ್ಟರ್ ವಿಲ್ ಝೂಮ್ ಯು ನೌ' ಎಂಬ ಪ್ರಮುಖ ಸಮೀಕ್ಷೆಯ ಪ್ರಕಾರ, ರೋಗಿಗಳಲ್ಲಿ ಕನಿಷ್ಠಪಕ್ಷ ವೈದ್ಯರನ್ನು ನೋಡಿದ ತೃಪ್ತಿ, ಟೆಲಿಫೋನ್‌ಗಿಂತ ವಿಡಿಯೊ ಕಾಲ್‌ಗೆ ಹೆಚ್ಚು ಆದ್ಯತೆ, ತಂತ್ರಜ್ಞಾನದ ಅಡೆತಡೆಗಳ ಬಗ್ಗೆ ಹತಾಶೆ ಎಲ್ಲವೂ ಕಂಡುಬಂದಿವೆ.

ಆನ್‌ಲೈನ್ ವೈದ್ಯಕೀಯ ಸಲಹೆಯ ಮೂಲಕ ಮನೆಯನ್ನೇ ಶುಶ್ರೂಷಾಲಯವಾಗಿಸುವ ಕಾಲವಂತೂ ನಮಗಿಷ್ಟವಿರಲಿ ಬಿಡಲಿ ಬಂದಿದೆ. ಅದನ್ನು ಯಾವಾಗ, ಎಷ್ಟು, ಹೇಗೆ ಬಳಸಿಕೊಳ್ಳಬೇಕು ಎಂಬ ಅರಿವು, ಅದು ಆರೋಗ್ಯಕ್ಕೆ ಪೂರಕವೇ ಅಲ್ಲವೇ ಎಂಬುದನ್ನು ನಿರ್ಧರಿಸಲಿದೆ.

ವಾಚಕರ ವಾಣಿ

ಬಾಲ್ಯವಿವಾಹ ತಡೆ ಸಾಧ್ಯವಿರಲಿಲ್ಲವೇ?

ಮುಳಬಾಗಿಲು ತಾಲ್ಲೂಕಿನಲ್ಲಿ ಒಂದೇ ಮುಹೂರ್ತದಲ್ಲಿ ಅಕ್ಕ-ತಂಗಿಯರನ್ನು ವರಿಸಿದ್ದ ವರ ಹಾಗೂ ಪೋಷಕರ ವಿರುದ್ಧ ಪೊಲೀಸರಿಂದ ಬಾಲ್ಯ ವಿವಾಹ ನಿಷೇಧ ಕಾಯ್ದೆ ಅಡಿಯಲ್ಲಿ ಪ್ರಕರಣ ದಾಖಲಾಗಿದೆ (ಪ್ರ.ವಾ., ಮೇ 17). ಇದು ಕಾನೂನಿನ ದೃಷ್ಟಿಯಲ್ಲಿ ಸರಿಯಾದ ಕ್ರಮ. ಆದರೆ, ಆಮಂತ್ರಣ ಪತ್ರಿಕೆಯನ್ನು ಮುದ್ರಿಸಿ ವಿತರಣೆ ಮಾಡಿ ಬಹಿರಂಗವಾಗಿಯೇ ನಡೆದಿರುವ ಈ ಬಾಲ್ಯವಿವಾಹವನ್ನು ಮುಂಚಿತವಾಗಿಯೇ ತಡೆಯಲು ಸಾಧ್ಯವಿರಲಿಲ್ಲವೇ?

ಇಂಥ ಮದುವೆಗಳು ನಡೆಯುವ ಸಾಧ್ಯತೆ ಇರುವ ಪ್ರದೇಶದಲ್ಲಿ ವಾಸಿಸುವ ಪ್ರಜ್ಞಾವಂತ ನಾಗರಿಕರು, ಗ್ರಾಮ ಪಂಚಾಯಿತಿ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಸ್ವಲ್ಪ ಎಚ್ಚರ ವಹಿಸಿದ್ದರೆ ಈ ಕಾರ್ಯ ಸಾಧ್ಯವಿತ್ತು. ಪ್ರತಿಯೊಂದು ಮದುವೆಯ ವರ ಮತ್ತು ವಧುವಿನ ವಯಸ್ಸಿನ ದಾಖಲೆಗಳನ್ನು ಪರಿಶೀಲಿಸುವ ಮೂಲಕ, ಸ್ಥಳೀಯ ಆಡಳಿತದಿಂದ ಪ್ರಮಾಣಪತ್ರ ಪಡೆಯುವುದನ್ನು ಕಡ್ಡಾಯ ಮಾಡಲು ಸಾಧ್ಯವಾದರೆ ಬಾಲ್ಯವಿವಾಹಗಳನ್ನು ತಡೆಗಟ್ಟಬಹುದು.

ಡಾ. ಜಿ.ಬೈರೇಗೌಡ, ಬೆಂಗಳೂರು

ಜನರ ಪಾಲಿಗೆ ಕಹಿಯಾದ 'ಸೇವೆ'

ಮಂಡ್ಯ ಜಿಲ್ಲೆಯಲ್ಲಿ ವ್ಯವಹಾರಕ್ಕಾಗಿ ಬ್ಯಾಂಕಿಗೆ ಹೋದ ರೈತರೊಬ್ಬರಿಗೆ ಕನ್ನಡ ಬಾರದ ಮೇಲಧಿಕಾರಿಯು ಇಂಗ್ಲಿಷ್ ಅಥವಾ ಮರಾಠಿ ಭಾಷೆಯಲ್ಲಿ ಮಾತನಾಡುವಂತೆ ತಾಕೀತು ಮಾಡಿದ್ದನ್ನು ವಿವೇಕ್ ಶಂಕರ್ ಅವರು ಆಕ್ಷೇಪಿಸಿರುವುದು (ವಾ.ವಾ., ಮೇ 18) ಸರಿಯಾಗಿದೆ. 80-90ರ ದಶಕಗಳಲ್ಲಿ ಬ್ಯಾಂಕ್ ಅಧಿಕಾರಿಗಳಾಗಿ ಬಡ್ತಿ ಹೊಂದಿದವರನ್ನು ಉತ್ತರ ಭಾರತದಲ್ಲಿರುವ ಬ್ಯಾಂಕ್ ಶಾಖೆಗಳಿಗೆ ಕಡ್ಡಾಯವಾಗಿ ವರ್ಗಾವಣೆ ಮಾಡುವ ಪದ್ಧತಿ ಇತ್ತು. ಅದರಂತೆ 90ರ ದಶಕದಲ್ಲಿ ನನಗೆ ಪಂಜಾಬಿನ ಪಟಿಯಾಲ ನಗರದ ಕೆನರಾ ಬ್ಯಾಂಕ್ ಶಾಖೆಗೆ ವರ್ಗವಾಯಿತು. ಅಲ್ಲಿನ ಗ್ರಾಹಕರಿಗೆ ನನ್ನ ಮಾತೃಭಾಷೆ ಕನ್ನಡ ಕಿಂಚಿತ್ತೂ ಗೊತ್ತಿರಲಿಲ್ಲ. ಪಂಜಾಬಿ ಭಾಷೆಯ ಗಂಧ ನನಗೂ ಇರಲಿಲ್ಲ.

ಆಗ ನಾನು ಖಾತೆಯಿಂದ ಖಾತೆಗೆ ಹಣ ವರ್ಗಾವಣೆ ಮಾಡುವ ವಿಭಾಗದಲ್ಲಿದ್ದೆ. ಬ್ಯಾಂಕಿನ ಚೆಕ್ಕುಗಳಲ್ಲಿನ ಪ್ರಕಾರ, ಯಾರ ಹೆಸರಿನ ಖಾತೆಗೆ ಹಣ ಸಂದಾಯ ಆಗಬೇಕೋ ಅವರಿಗೇ ಸರಿಯಾಗಿ ಆಗುತ್ತಿದೆಯೇ ಎಂದು ಗಮನಿಸಬೇಕಾಗಿತ್ತು. ಆದರೆ ಆ ಮಾಹಿತಿ ಪಂಜಾಬಿ ಭಾಷೆಯಲ್ಲಿ ಇರುತ್ತಿದ್ದುದರಿಂದ ಈ ಜವಾಬ್ದಾರಿಯು ನನಗೆ ಕಷ್ಟವಾದ ಕೆಲಸವಾಗಿತ್ತು.

ಹೀಗಾಗಿ, ಒಂದೆರಡು ತಿಂಗಳುಗಳಲ್ಲಿಯೇ '30 ದಿನಗಳಲ್ಲಿ ಪಂಜಾಬಿ ಕಲಿಯಿರಿ' ಪುಸ್ತಕ ಖರೀದಿಸಿ ಪಂಜಾಬಿ ಭಾಷೆಯನ್ನು ನಾನು ಕಲಿಯಲೇಬೇಕಾಯಿತು. ಅಲ್ಲಿನ ಬ್ಯಾಂಕ್ ಸಹೋದ್ಯೋಗಿಗಳಿಗೆ ಪಂಜಾಬಿ ಕಲಿಯುವಲ್ಲಿನ ನನ್ನ ಆಸಕ್ತಿ ನೋಡಿ ಆಶ್ಚರ್ಯವಾಗಿತ್ತು. ನನ್ನ ಕ್ರಿಯಾಶೀಲತೆ ಕಂಡು ನನಗೆ ಸಹಕರಿಸಿದ ಅವರೆಲ್ಲ ನನ್ನನ್ನು ಪ್ರೀತಿಯಿಂದ, ರಾವ್ ಸಾಬ್ (ಆಗ ರಾಷ್ಟ್ರಮಟ್ಟದಲ್ಲಿ ಎನ್.ಟಿ.ರಾಮರಾವ್, ನರಸಿಂಹ ರಾವ್ ಹೆಸರಾಗಿದ್ದರು) ಎಂದು ಕರೆಯುತ್ತಿದ್ದರು.

ಕಂಪ್ಯೂಟರ್ ಇಲ್ಲದ ದಿನಗಳಲ್ಲಿ ಮಾಡಿದ ಸೇವೆಯ ಬಗ್ಗೆ ಬ್ಯಾಂಕಿನ ನಿವೃತ್ತ ನೌಕರನಾಗಿ ಈಗಲೂ ನಾನು ಎದೆ ತಟ್ಟಿ ಹೇಳಿಕೊಳ್ಳುವೆ. ಆದರೆ, ಇಂದು ಬ್ಯಾಂಕಿನಲ್ಲಿ ಸೇವೆ ಸಲ್ಲಿಸುವವರ ಮನೋಭಾವ ಜನಸಾಮಾನ್ಯರ ಪಾಲಿಗೆ ಕಹಿಯೇ ಕಹಿ. ಬೇರೆ ದಾರಿ ಇಲ್ಲದೆ ಸಹಿಸಿಕೊಂಡು ಹೋಗಬೇಕಾಗಿದೆ.

ರಘುನಾಥರಾವ್ ತಾಪ್ಸೆ, ದಾವಣಗೆರೆ

ಕಲಾವಿದರ ಬವಣೆ ಕಣ್ತೆರೆದು ನೋಡಿ

ಒಬ್ಬ ಪ್ರತಿಭಾವಂತ ರಂಗಭೂಮಿ ಯುವ ಕಲಾವಿದ. ರಂಗಭೂಮಿಯನ್ನು ವೃತ್ತಿಯಾಗಿ ತೆಗೆದುಕೊಂಡಿದ್ದಾತ. ಇಂದು ಈತನ ಇಡೀ ಕುಟುಂಬ ಕೋವಿಡ್‌ಗೆ ತುತ್ತಾಗಿ ಪರಿತಪಿಸುತ್ತಿದೆ. ಐದು ತಿಂಗಳ ಮಗು ಮತ್ತು ನಾಲ್ಕು ವರ್ಷದ ಮಗುವಿನ ತಾಯಿ ಕೋವಿಡ್‌ಗೆ ಬಲಿಯಾದರೆ, ಕಲಾವಿದ ಮತ್ತು ಆತನ ತಂದೆ, ತಾಯಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮತ್ತೊಬ್ಬ ಬೆಂಗಳೂರು ಹವ್ಯಾಸಿ ರಂಗಭೂಮಿಯ ಕಲಾವಿದ. ಕೋವಿಡ್‌ನಿಂದ ಆಸ್ಪತ್ರೆಗೆ ದಾಖಲಾಗಿ, ಮನೆಗೆ ಬಂದರು. ಆದರೆ ಅವರ ಇಬ್ಬರು ಅಕ್ಕಂದಿರು ಆಸ್ಪತ್ರೆಗೆ ದಾಖಲಾಗಿದ್ದಾರೆ. ಸೋಂಕುಪೀಡಿತರಾಗಿದ್ದ ತಾಯಿ ಐಸಿಯುನಿಂದ ಹೊರಬಂದಿದ್ದು ಶವವಾಗಿ. ಖಿನ್ನತೆಗೆ ಒಳಗಾದ ಕಲಾವಿದ ಆತ್ಮಹತ್ಯೆಗೆ ಪ್ರಯತ್ನಿಸಿ ಈಗ ಚೇತರಿಸಿಕೊಳ್ಳುತ್ತಿದ್ದಾರೆ. ಇನ್ನೊಬ್ಬ ಹವ್ಯಾಸಿ ರಂಗಕಲಾವಿದೆ ಆಸ್ಪತ್ರೆಯಲ್ಲಿ ಒಂದು ತಿಂಗಳಿಗೂ ಹೆಚ್ಚುಕಾಲ ಚಿಕಿತ್ಸೆ ಪಡೆದು ಹೊರಬಂದಿದ್ದಾರೆ. ಅವರಿಗೆ ವೈದ್ಯಕೀಯ ವೆಚ್ಚ ಭರಿಸುವ ಶಕ್ತಿ ಎಲ್ಲಿಂದ ಬರಬೇಕು?

ಇವು ಕೆಲವು ಉದಾಹರಣೆಗಳಷ್ಟೆ. ಬೆಂಗಳೂರು ಸೇರಿದಂತೆ ರಾಜ್ಯದ ಅನೇಕ ಕಲಾವಿದರು ಆಸ್ಪತ್ರೆ, ಚಿಕಿತ್ಸೆ ಎಂದು ಎಡತಾಕುತ್ತಿದ್ದಾರೆ. ಕೊರೊನಾ ಜೊತೆಗೆ ಇವರನ್ನು ಕಾಡುತ್ತಿರುವುದು ಕಠಿಣ ಆರ್ಥಿಕ ಪರಿಸ್ಥಿತಿ. ರಂಗಕಲಾವಿದರಷ್ಟೇ ಅಲ್ಲ, ಕಂಪನಿ ಕಲಾವಿದರು, ಜನಪದ ಕಲಾವಿದರು, ಸಂಗೀತ, ನೃತ್ಯ, ಚಿತ್ರಕಲಾವಿದರು ಬಹಳಷ್ಟು ತೊಂದರೆಗೆ ಸಿಲುಕಿದ್ದಾರೆ. ಹಲವರು ಜೀವ ಕಳೆದುಕೊಂಡು ಕುಟುಂಬಗಳು ಅನಾಥವಾಗಿವೆ.

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಚಿವರು, ಲಾಕ್‌ಡೌನ್ ಸಂದರ್ಭದಲ್ಲಿ ಯಾವುದೇ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯದ ಕಾರಣ, ಅದಕ್ಕಾಗಿ ಇದ್ದ ಹಣವನ್ನು ಇಲಾಖೆಯ ಆಸ್ತಿಯನ್ನು ಹೆಚ್ಚಿಸಲು ಬಳಕೆ ಮಾಡುವಂತೆ ಸೂಚಿಸಿರುವುದಾಗಿ ಪತ್ರಿಕೆಗಳಲ್ಲಿ ವರದಿಯಾಗಿದೆ. ಹಾಗಿದ್ದರೆ ಕಲಾವಿದರು ಸಂಸ್ಕೃತಿ ಇಲಾಖೆಯ ಆಸ್ತಿಯಲ್ಲವೇ?

ಕೋವಿಡ್‌ನಿಂದ ಆರ್ಥಿಕ ತೊಂದರೆಗೆ ಸಿಲುಕಿರುವ ಕಲಾವಿದರ ಕುಟುಂಬಗಳನ್ನು ಜಿಲ್ಲಾ ಹಂತದಲ್ಲಿ ಗುರುತಿಸಿ, ಇಲಾಖೆಯ ಸಹಾಯಕ ನಿರ್ದೇಶಕರ ಮೂಲಕ ಅರ್ಹ ಕುಟುಂಬಗಳಿಗೆ ವೈದ್ಯಕೀಯ ವೆಚ್ಚವನ್ನು ಭರಿಸಲು ಮುಂದಾಗಬೇಕು. ಹಾಗೆಯೇ ಈ ಸೋಂಕಿನಿಂದ ಸಾವನ್ನಪ್ಪಿರುವ ಕಲಾವಿದರ ಕುಟುಂಬಗಳಿಗೆ ಆರ್ಥಿಕ ಸಹಾಯವನ್ನು ಘೋಷಿಸಬೇಕು. ಹೀಗಾದಾಗ ಕಲಾವಿದ, ಕಲೆ ಎರಡೂ ಉಳಿದು, ಸಾಂಸ್ಕೃತಿಕ ಲೋಕದ ಆಸ್ತಿ ವೃದ್ಧಿಯಾಗುತ್ತದೆ. ಮೂರಾಬಟ್ಟೆಯಾಗುತ್ತಿರುವ ಕಲಾವಿದರ ಬದುಕಿಗೆ ಆಸರೆಯಾದಂತೆ ಆಗುತ್ತದೆ.

ಶಶಿಧರ ಭಾರಿಘಾಟ್, ಬೆಂಗಳೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

‘ಸಿಬಿಐ ಪಂಜರದ ಗಿಳಿ’

ಸೆಂಟ್ರಲ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್ (ಸಿಬಿಐ) ಎಂಬ ದೇಶದ ಪರಮೋಚ್ಚ ತನಿಖಾ ಸಂಸ್ಥೆಯನ್ನು ಆಳುವ ಪಕ್ಷಗಳು ತನ್ನ ಕೈಗೊಂಬೆಯಾಗಿ ಬಳಸಿಕೊಂಡಿವೆ ಎಂಬ ಆರೋಪ ತೀರಾ ಹೊಸತೇನೂ ಅಲ್ಲ. ಆಳುವ ಪಕ್ಷಗಳು ಸಿಬಿಐ ಅನ್ನು ಎರಡು ರೀತಿಯಲ್ಲಿ ದುರ್ಬಳಕೆ ಮಾಡಿಕೊಳ್ಳುತ್ತವೆ ಎಂಬುದು ಪದೇಪದೇ ಗೋಚರವಾಗಿದೆ. ಪ್ರಮುಖವಾಗಿ ರಾಜಕೀಯ ಎದುರಾಳಿಗಳನ್ನು ಮತ್ತು ವಿರೋಧ ಪಕ್ಷಗಳನ್ನು ಹತ್ತಿಕ್ಕಲು ಆಡಳಿತ ಪಕ್ಷವು ಸಿಬಿಐ ಅನ್ನು ಬಳಸಿಕೊಳ್ಳುವುದು ಒಂದು ರೀತಿ. ತನ್ನದೇ ಹಗರಣಗಳಿಂದ ತನ್ನವರನ್ನು ರಕ್ಷಿಸಿಕೊಳ್ಳಲೂ ಆಡಳಿತ ಪಕ್ಷವು ಸಿಬಿಐ ಅನ್ನು ಬಳಸಿಕೊಂಡ ಉದಾಹರಣೆಗಳು ಇವೆ ಎಂಬುದು ಅಂದಂದಿನ ವಿರೋಧ ಪಕ್ಷಗಳ ಆರೋಪ. ಸಿಬಿಐ ಕ್ರಮಗಳು, ಕ್ರಮ ತೆಗೆದುಕೊಂಡ ಸಂದರ್ಭ ಮತ್ತು ಆ ಕ್ರಮಗಳ ವ್ಯಾಪ್ತಿಯೂ ಈ ಆರೋಪಕ್ಕೆ ಇಂಬು ನೀಡುತ್ತವೆ.

1993ರ ಹವಾಲಾ ಮತ್ತು ಜೈನ್ ಡೈರಿ ಪ್ರಕರಣದಲ್ಲಿ ಕಾಂಗ್ರೆಸ್‌ನ ಹಲವು ನಾಯಕರ ಹೆಸರು ಕೇಳಿಬಂದಿತ್ತು. ಸುಮಾರು 20 ವರ್ಷಕ್ಕೂ ಹೆಚ್ಚು ಕಾಲ ನಡೆದ ತನಿಖೆ ಅಂತಿಮ ಹಂತ ಮುಟ್ಟಲೇ ಇಲ್ಲ. 2013ರಲ್ಲಿ ಪ್ರಕರಣವನ್ನು ಮುಚ್ಚಿ ಹಾಕಲಾಯಿತು. ಇಲ್ಲಿ ಸಿಬಿಐ ಅನ್ನು ಕಾಂಗ್ರೆಸ್ ದುರ್ಬಳಕೆ ಮಾಡಿಕೊಂಡಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿದ್ದವು. ಕಲ್ಲಿದ್ದಲು ಹಗರಣದಲ್ಲಿ ಸಿಬಿಐ ಸರಿಯಾಗಿ ತನಿಖೆ ನಡೆಸುತ್ತಿಲ್ಲ ಎಂದು 2013ರಲ್ಲಿ ತನಿಖಾ ಸಂಸ್ಥೆಯನ್ನು ತರಾಟೆಗೆ ತೆಗೆದುಕೊಂಡಿದ್ದ ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಆರ್.ಎಂ.ಲೋಧಾ ಅವರು, ‘ಸಿಬಿಐ ಪಂಜರದ ಗಿಳಿ’ ಎಂದು ಕರೆದಿದ್ದರು. ವಿರೋಧ ಪಕ್ಷಗಳೂ ಈ ಮಾತನ್ನು ಈಗಲೂ ಬಳಸುತ್ತಿವೆ.

ಕೇಂದ್ರದಲ್ಲಿ ಕಾಂಗ್ರೆಸ್ ಮತ್ತು ಕಾಂಗ್ರೆಸ್ ನೇತೃತ್ವದ ಯುಪಿಎ ಅಧಿಕಾರದಲ್ಲಿ ಇದ್ದಾಗ ಸಿಬಿಐ ಅನ್ನು ದುರ್ಬಳಕೆ ಮಾಡಿಕೊಳ್ಳಲಾಗುತ್ತಿದೆ ಎಂದು ಬಿಜೆಪಿ ಮತ್ತು ಅದರ ಮಿತ್ರಪಕ್ಷಗಳು ಬಲವಾಗಿ ಆರೋಪಿಸಿದ್ದವು. ಸಿಬಿಐ ಅನ್ನು ಕಾಂಗ್ರೆಸ್ ಬ್ಯೂರೊ ಆಫ್ ಇನ್ವೆಸ್ಟಿಗೇಷನ್ ಎಂದು ಕರೆದಿದ್ದವು. ‘2005ರ ಸೊಹ್ರಾಬುದ್ದೀನ್ ಶೇಕ್ ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ಅಮಿತ್ ಶಾ ಅವರನ್ನು ರಾಜಕೀಯವಾಗಿ ತುಳಿಯಲು, ಸಿಬಿಐ ಮೂಲಕ ಅವರನ್ನು ಬಂಧಿಸಲಾಗಿದೆ. ಈ ಮೂಲಕ ನಮ್ಮ ಪಕ್ಷದ ಉದಯೋನ್ಮುಖ ನಾಯಕ ನರೇಂದ್ರ ಮೋದಿ ಅವರನ್ನು ತುಳಿಯುವುದಕ್ಕೆ ಸಿಬಿಐ ಅನ್ನು ಕಾಂಗ್ರೆಸ್ ಬಳಸಿಕೊಳ್ಳುತ್ತಿದೆ. ಇದನ್ನು ನಿಲ್ಲಿಸಿ’ ಎಂದು ಬಿಜೆಪಿ ನಾಯಕ ಅರುಣ್ ಜೇಟ್ಲಿ ಅವರು 2013ರಲ್ಲಿ ಅಂದಿನ ಪ್ರಧಾನಿ ಮನಮೋಹನ್ ಸಿಂಗ್ ಅವರಿಗೆ ಪತ್ರ ಬರೆದಿದ್ದರು.

2014ರಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದ ನಂತರ, ಇದೇ ಸೊಹ್ರಾಬುದ್ದೀನ್ ಶೇಕ್ ನಕಲಿ ಎನ್‌ಕೌಂಟರ್ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದ ಅಮಿತ್ ಶಾ ಅವರಿಗೆ ಸಿಬಿಐ ಕ್ಲೀನ್ ಚಿಟ್ ನೀಡಿತು.

ರಾಜಕೀಯ ಎದುರಾಳಿಗಳನ್ನು ಹತ್ತಿಕ್ಕಲು ಮತ್ತು ವಿಪಕ್ಷಗಳ ನಾಯಕರನ್ನು ತಮ್ಮ ಪಕ್ಷಕ್ಕೆ ಪಕ್ಷಾಂತರ ಆಗಲು ಒತ್ತಡ ಹೇರಲು, ಸಿಬಿಐ ಅನ್ನು ಬಿಜೆಪಿ ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು ವಿರೋಧ ಪಕ್ಷಗಳು ದೊಡ್ಡದನಿಯಲ್ಲಿ ಆರೋಪ ಮಾಡುತ್ತಿವೆ. ರಾಜಕೀಯ ಎದುರಾಳಿಯಾದ ಡಿಎಂಕೆಯ ಮುಖ್ಯಸ್ಥ ಎಂ.ಕೆ.ಸ್ಟಾಲಿನ್ ಮತ್ತವರ ಪಕ್ಷದ ನಾಯಕರ ಮೇಲೆ 2018-2019ರ ಅವಧಿಯಲ್ಲಿ ಸಿಬಿಐ ಮತ್ತು ಆದಾಯ ತೆರಿಗೆ ಇಲಾಖೆಗಳು ‘ದಾಳಿ’ ನಡೆಸಿದ್ದವು. ‘ಪಶ್ಚಿಮ ಬಂಗಾಳದ ನಾರದಾ ಮಾರುವೇಷದ ಕಾರ್ಯಾಚರಣೆಯ ಲಂಚ ಹಗರಣದಲ್ಲಿ ಟಿಎಂಸಿಯ ನಾಲ್ವರನ್ನು ಬಂಧಿಸಲಾಗಿದೆ. ಟಿಎಂಸಿಯ ಅಂದಿನ ನಾಯಕ ಹಾಗೂ ಈಗ ಬಿಜೆಪಿಯಲ್ಲಿ ಇರುವ ಸುವೇಂದು ಅಧಿಕಾರಿ ಸಹ ಲಂಚ ಪಡೆಯುತ್ತಿರುವ ದೃಶ್ಯ ನಾರದಾ ಟೇಪ್‌ನಲ್ಲಿ ದಾಖಲಾಗಿತ್ತು. ಆದರೆ ಅವರನ್ನು ಸಿಬಿಐ ಬಂಧಿಸಿಲ್ಲ. ಸಿಬಿಐ ಅನ್ನು ತೋರಿಸಿಯೇ, ಸುವೇಂದು ಅವರನ್ನು ಬಿಜೆಪಿ ಸೆಳೆದುಕೊಂಡಿದೆ’ ಎಂದು ಸಾಮಾಜಿಕ ಜಾಲತಾಣಗಳಲ್ಲಿ ಚರ್ಚೆಯಾಗುತ್ತಿದೆ. ವಿಪಕ್ಷಗಳು ಸಿಬಿಐ ಅನ್ನು, ‘ಸೆಂಟ್ರಲ್ ಬಿಜೆಪಿ ಇನ್ವೆಸ್ಟಿಗೇಷನ್’ ಎಂದು ಕರೆಯುತ್ತಿವೆ.



ರಫೇಲ್ ಯುದ್ಧ ವಿಮಾನ ಖರೀದಿಗೆ ಸಂಬಂಧಿಸಿದಂತೆ ತನಿಖೆ ನಡೆಸಲು ಸಿದ್ಧತೆ ನಡೆಸಿದ್ದ ಸಿಬಿಐ ನಿರ್ದೇಶಕ ಆಲೋಕ ವರ್ಮಾ ಅವರನ್ನು ಬಿಜೆಪಿ ಸರ್ಕಾರವು ವಜಾ ಮಾಡಿದೆ. ಅವರನ್ನು ಮತ್ತೆ ನಿರ್ದೇಶಕರನ್ನಾಗಿ ನೇಮಿಸಬೇಕು ಎಂದು ರಾಹುಲ್ ಗಾಂಧಿ ಸೇರಿ ಕಾಂಗ್ರೆಸ್‌ನ ಹಲವು ನಾಯಕರು 2018ರಲ್ಲಿ ಸಿಬಿಐ ಕೇಂದ್ರ ಕಚೇರಿ ಎದುರು ಪ್ರತಿಭಟನೆ ನಡೆಸಿದ್ದರು —ಪಿಟಿಐ ಚಿತ್ರ

ಚುನಾವಣೆ ಹೊಸ್ತಿಲಲ್ಲಿ ‘ಶೋಧ’ ಕಾರ್ಯಾಚರಣೆ

ತಮಿಳುನಾಡು ವಿಧಾನಸಭಾ ಚುನಾವಣೆಯ ಮತದಾನಕ್ಕೆ ಕೆಲವೇ ದಿನಗಳು ಬಾಕಿಯಿದ್ದಾಗ, ಡಿಎಂಕೆ ಮುಖ್ಯಸ್ಥ ಎಂ.ಕೆ. ಸ್ಟಾಲಿನ್ ಅವರ ಮಗಳು–ಅಳಿಯನ ಮನೆಯಲ್ಲಿ ಆದಾಯ ತೆರಿಗೆ ಇಲಾಖೆ ಅಧಿಕಾರಿಗಳು ಶೋಧ ನಡೆಸಿದ್ದರು. ಅಧಿಕಾರದ ದುರ್ಬಳಕೆ ಆರೋಪದಲ್ಲಿ ಚುನಾವಣಾ ಆಯೋಗಕ್ಕೆ ಪಕ್ಷ ದೂರು ನೀಡಿತ್ತು. ಈ ವರ್ಷದ ಫೆಬ್ರವರಿಯಲ್ಲಿ ಚುನಾವಣೆ ಘೋಷಣೆಗೆ ಕೆಲವೇ ತಿಂಗಳು ಬಾಕಿ ಇರುವಾಗ, ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಸೋದರಳಿಯ ಅಭಿಷೇಕ್ ಬ್ಯಾನರ್ಜಿ ಅವರ ಪತ್ನಿ ರುಜೀರಾ ಬ್ಯಾನರ್ಜಿ ಅವರನ್ನು ಸಿಬಿಐ ಕಲ್ಲಿದ್ದಲು ಕಳ್ಳತನ ಹಗರಣದಲ್ಲಿ ಪ್ರಶ್ನಿಸಿತ್ತು.

ಇದೇ ಮಾರ್ಚ್‌ನಲ್ಲಿ ಚಿಟ್ ಫಂಡ್‌ಗೆ ಸಂಬಂಧಿಸಿದ ಎರಡು ಪ್ರಕರಣಗಳಲ್ಲಿ ಪಶ್ಚಿಮ ಬಂಗಾಳದ ಸಚಿವ ಪಾರ್ಥ ಚಟರ್ಜಿ ಮತ್ತು ಮಾಜಿ ಸಚಿವ ಮದನ್ ಮಿತ್ರ ಅವರನ್ನು ಜಾರಿ ನಿರ್ದೇಶನಾಲಯ (ಇ.ಡಿ.) ವಿಚಾರಣೆಗೆ ಕರೆಸಿತ್ತು. ಇಬ್ಬರೂ ವಿಧಾನಸಭಾ ಚುನಾವಣೆಯಲ್ಲಿ ಟಿಎಂಸಿ ಟಿಕೆಟ್‌ನಲ್ಲಿ ಸ್ಪರ್ಧಿಸುವವರಿದ್ದರು. ಶಾರದಾ ಚಿಟ್ ಫಂಡ್ ಹಗರಣಕ್ಕೆ ಸಂಬಂಧಿಸಿದಂತೆ ಟಿಎಂಸಿ ಅಭ್ಯರ್ಥಿ ವಿವೇಕ್ ಗುಪ್ತಾ ಅವರನ್ನು ಗಂಟೆಗಳ ಕಾಲ ಪ್ರಶ್ನಿಸಲಾಗಿತ್ತು.

ಚಿನ್ನ ಕಳ್ಳಸಾಗಣೆ ಪ್ರಕರಣದಲ್ಲಿ ಕೇರಳ ಮುಖ್ಯಮಂತ್ರಿಯ ಪ್ರಧಾನ ಕಾರ್ಯದರ್ಶಿ ಎಂ.ಶಿವಶಂಕರ್ ಅವರನ್ನು ಇ.ಡಿ. 2020ರ ಸೆಪ್ಟೆಂಬರ್‌ನಲ್ಲಿ ಬಂಧಿಸಿತ್ತು. ‘ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಆದೇಶದ ಮೇರೆಗೆ ಕಳ್ಳಸಾಗಣೆ ನಡೆದಿದೆ ಎಂದು ಪ್ರಕರಣದ ಪ್ರಮುಖ ಆರೋಪಿ ಸ್ವಪ್ನಾ ಸುರೇಶ್ ಹೇಳಿದ್ದಾರೆ’ ಎಂಬುದಾಗಿ ವಿಧಾನಸಭಾ ಚುನಾವಣೆಗೆ ವಾರಗಳ ಮೊದಲು, ಆದಾಯ ತೆರಿಗೆ ಇಲಾಖೆ ಮತ್ತು ಇ.ಡಿ. ಹೇಳಿದ್ದವು.

2019ರ ಏಪ್ರಿಲ್‌ನಲ್ಲಿ, ಲೋಕಸಭಾ ಚುನಾವಣೆಗೆ ಮುನ್ನ, ಅಂದಿನ ಮುಖ್ಯಮಂತ್ರಿ ಕಮಲನಾಥ್ ಅವರ ಆಪ್ತ ಸಹಾಯಕನಿಗೆ ಸೇರಿದ 52 ಸ್ಥಳಗಳಲ್ಲಿ ಆದಾಯ ತೆರಿಗೆ ಇಲಾಖೆ ಶೋಧ ನಡೆಸಿತ್ತು. ಸೆಪ್ಟೆಂಬರ್‌ನಲ್ಲಿ ಜಾರಿ ನಿರ್ದೇಶನಾಲಯವು (ಇ.ಡಿ.) ಎನ್‌ಸಿಪಿ ಮುಖ್ಯಸ್ಥ ಶರದ್ ಪವಾರ್ ಅವರಿಗೆ ನೋಟಿಸ್ ನೀಡಿತ್ತು. 2020ರ ಅಕ್ಟೋಬರ್‌ನಲ್ಲಿ, ಬಿಹಾರ ವಿಧಾನಸಭಾ ಚುನಾವಣೆಗೆ ಕೆಲವೇ ದಿನಗಳ ಮೊದಲು, ಆದಾಯ ತೆರಿಗೆ ಇಲಾಖೆ ಬಿಹಾರದ ಕಾಂಗ್ರೆಸ್ ಪಕ್ಷದ ಕಚೇರಿಯ ಮೇಲೆ ದಾಳಿ ನಡೆಸಿತ್ತು.

ಜಮ್ಮು ಮತ್ತು ಕಾಶ್ಮೀರದ ಮಾಜಿ ಮುಖ್ಯಮಂತ್ರಿ ಫಾರೂಕ್ ಅಬ್ದುಲ್ಲಾ ಅವರು ಗುಪ್ಕಾರ್ ಕೂಟ ರಚಿಸಿದ್ದರು. ಇದಾದ ಕೆಲವೇ ದಿನಗಳಲ್ಲಿ ಜಮ್ಮು ಮತ್ತು ಕಾಶ್ಮೀರ ಕ್ರಿಕೆಟ್ ಅಸೋಸಿಯೇಷನ್ ಹಗರಣಕ್ಕೆ ಸಂಬಂಧಿಸಿದಂತೆ ಇ.ಡಿ. ನೋಟಿಸ್ ಬಂದಿತ್ತು. 2018ರಲ್ಲಿ ಛತ್ತೀಸಗಡ ವಿಧಾನಸಭಾ ಚುನಾವಣೆಗೆ ಮುನ್ನ ಭೂಪೇಶ್ ಬಘೇಲ್ ಅವರನ್ನು ಸಿ.ಡಿ. ಹಗರಣದಲ್ಲಿ ಆರೋಪಿಯನ್ನಾಗಿ ಸಿಬಿಐ ಹೆಸರಿಸಿತ್ತು. 2020ರ ಫೆಬ್ರುವರಿಯಲ್ಲೂ ಆದಾಯ ತೆರಿಗೆ ತಂಡಗಳು ರಾಜ್ಯದಲ್ಲಿ ಮೂರು ದಿನ ಶೋಧ ನಡೆಸಿದ್ದವು.

2020ರ ಜುಲೈನಲ್ಲಿ ರಾಜಸ್ಥಾನ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಅವರ ನಿಷ್ಠಾವಂತರಿಗೆ ಸೇರಿದ ಸ್ಥಳಗಳಲ್ಲಿ ಐ.ಟಿ. ಶೋಧ ನಡೆಸಿತ್ತು. ಅದರ ಬೆನ್ನಲ್ಲೇ, ಅವರ ಪುತ್ರ ವೈಭವ್ ಅವರ ವ್ಯವಹಾರ ಪಾಲುದಾರ ಮತ್ತು ಮಾರಿಷಸ್‌ನ ಹೂಡಿಕೆದಾರರ ನಡುವಿನ ಹೂಡಿಕೆ ಒಪ್ಪಂದದ ತನಿಖೆಗೆ ಇ.ಡಿ. ಅಧಿಕಾರಿಗಳು ಮುಂದಾದರು. ಈ ದಾಳಿಯು ಕಾಂಗ್ರೆಸ್ ಸರ್ಕಾರವನ್ನು ಉರುಳಿಸಲು ಬಿಜೆಪಿ ನಡೆಸಿದ ಪ್ರಯತ್ನವಲ್ಲದೇ ಮತ್ತೇನಲ್ಲ ಎಂದು ಕಾಂಗ್ರೆಸ್ ಹೇಳಿತ್ತು.

ಚುನಾವಣೆಗೆ ಮುನ್ನ ಮಹಾರಾಷ್ಟ್ರ ಮತ್ತು ಹರಿಯಾಣದ ತಮ್ಮ ಲೆಕ್ಕಪತ್ರ ಕಚೇರಿಗೆ ತೆರಿಗೆ ಇಲಾಖೆ ಅಧಿಕಾರಿಗಳು ಯಾವುದೇ ಸೂಚನೆಯಿಲ್ಲದೇ ದಾಳಿಯಿಡುತ್ತಿದ್ದಾರೆ ಎಂದು ಆರೋಪಿಸಿ 2019ರ ಅಕ್ಟೋಬರ್‌ನಲ್ಲಿ ಕಾಂಗ್ರೆಸ್ ಪಕ್ಷವು ಚುನಾವಣಾ ಆಯೋಗಕ್ಕೆ ದೂರು ನೀಡಿತ್ತು. ಮಣಿಪುರದ ಕಾಂಗ್ರೆಸ್ ಶಾಸಕರು ಪೌರತ್ವ (ತಿದ್ದುಪಡಿ) ಮಸೂದೆ ವಿರುದ್ಧ ಪ್ರತಿಭಟನೆ ನಡೆಸಿದ್ದರು. ಇದಕ್ಕೆ ಕೆಲ ದಿನಗಳ ಮುನ್ನ ಮಣಿಪುರದ ಮಾಜಿ ಮುಖ್ಯಮಂತ್ರಿ ಒಕ್ರಮ್ ಇಬೊಬಿ ಸಿಂಗ್ ಅವರ ಅಧಿಕೃತ ಮತ್ತು ಖಾಸಗಿ ನಿವಾಸಗಳಲ್ಲಿ ಸಿಬಿಐ ಶೋಧ ನಡೆಸಿತ್ತು.

ಕಾಂಗ್ರೆಸ್ ಪಕ್ಷದ ಕರ್ನಾಟಕ ಘಟಕದ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರ ನಿವಾಸದಲ್ಲಿ 2019ರ ಆಗಸ್ಟ್‌ನಲ್ಲಿ ಇ.ಡಿ. ಶೋಧ ನಡೆಸಿತ್ತು. ರಾಜ್ಯಸಭಾ ಚುನಾವಣೆಯ ಸಂದರ್ಭದಲ್ಲಿ ಅಡ್ಡ ಮತದಾನ ತಪ್ಪಿಸಲು ಗುಜರಾತಿನ ಕಾಂಗ್ರೆಸ್ ಶಾಸಕರನ್ನು ಬೆಂಗಳೂರಿಗೆ ಕರೆತಂದು ರಕ್ಷಣೆ ನೀಡಿದ್ದರು ಹಾಗೂ ಜೆಡಿಎಸ್ ಜತೆಗೂಡಿ ಕಾಂಗ್ರೆಸ್ ಸರ್ಕಾರ ರಚನೆಯಾಗುವಲ್ಲಿ ಪ್ರಮುಖ ಪಾತ್ರ ವಹಿಸಿದ್ದರು ಎಂಬುದೇ ಶೋಧಕ್ಕೆ ಕಾರಣ ಎಂದು ಕಾಂಗ್ರೆಸ್ ಆರೋಪಿಸಿತ್ತು.

ರಾಜಕೀಯ ಮುಖಂಡರೇ ಗುರಿ


ಐಎನ್‌ಎಕ್ಸ್ ಮೀಡಿಯಾ ಹಗರಣಕ್ಕೆ ಸಂಬಂಧಿಸಿದಂತೆ 2019ರ ಸೆಪ್ಟೆಂಬರ್ 5ರಂದು ಕಾಂಗ್ರೆಸ್ ಮುಖಂಡ ಪಿ. ಚಿದಂಬರಂ ಅವರನ್ನು ಸಿಬಿಐ ಬಂಧಿಸಿತ್ತು. ಹಗರಣದ ಪ್ರಮುಖ ಆರೋಪಿಗಳಲ್ಲಿ ಚಿದಂಬರಂ ಅವರ ಪುತ್ರ ಕಾರ್ತಿ ಚಿದಂಬರಂ ಅವರೂ ಇದ್ದರು.

ಚಿದಂಬರಂ ಅವರು ಕೇಂದ್ರದ ಹಣಕಾಸು ಸಚಿವರಾಗಿದ್ದ ಅವಧಿಯಲ್ಲಿ ಐಎನ್‌ಎಕ್ಸ್ ಮೀಡಿಯಾ ಸಂಸ್ಥೆಯಲ್ಲಿ ಹೂಡಿಕೆ ನಡೆಸಲು ವಿದೇಶಿ ಹೂಡಿಕೆ ಉತ್ತೇಜನ ಮಂಡಳಿಯು (ಎಫ್‌ಐಪಿಬಿ) ಕೆಲವು ಸಂಸ್ಥೆಗಳಿಗೆ ಅನುಮೋದನೆ ನೀಡಿತ್ತು. ಇವುಗಳಲ್ಲಿ ಹಲವು ಸಂಸ್ಥೆಗಳು ನಕಲಿಯಾಗಿದ್ದವು ಮತ್ತು ಅವುಗಳು ಚಿದಂಬರಂ ಮತ್ತು ಅವರ ಪುತ್ರನ ಮಾಲೀಕತ್ವದ್ದಾಗಿದ್ದವು. ಹಣದ ಅಕ್ರಮ ವರ್ಗಾವಣೆಗೆ ಇವುಗಳನ್ನು ಬಳಸಲಾಗಿತ್ತು ಎಂಬುದು ಇವರ ವಿರುದ್ಧದ ಆರೋಪಗಳಾಗಿದ್ದವು.

- ಡಿ.ಕೆ. ಶಿವಕುಮಾರ್ ಅವರಿಗೆ ಸೇರಿದ ದೆಹಲಿ, ಮಹಾರಾಷ್ಟ್ರ ಹಾಗೂ ಬೆಂಗಳೂರಿನ ಮನೆಗಳಲ್ಲಿ ಸಿಬಿಐ 2020ರ ಅಕ್ಟೋಬರ್ ತಿಂಗಳಲ್ಲಿ ಶೋಧ ನಡೆಸಿತ್ತು. ಆ ಸಂದರ್ಭದಲ್ಲಿ ರಾಜ್ಯದಲ್ಲಿ ಉಪಚುನಾವಣೆಗಳಿಗೆ ಸಿದ್ಧತೆಗಳು ಜೋರಾಗಿ ನಡೆಯುತ್ತಿದ್ದವು. ಘೋಷಿತ ಆದಾಯಕ್ಕಿಂತ ಸುಮಾರು ₹75 ಕೋಟಿಯಷ್ಟು ಹೆಚ್ಚಿನ ಆಸ್ತಿಯನ್ನು ಹೊಂದಿದ್ದಾರೆ ಎಂದು ಶಿವಕುಮಾರ್ ವಿರುದ್ಧ ದೂರು ದಾಖಲಿಸಲಾಗಿತ್ತು.
- 2019ರ ಜ. 25, ಹರಿಯಾಣದ ಜಿಂದ್‌ನಲ್ಲಿ ಉಪಚುನಾವಣೆಗೂ ಸ್ವಲ್ಪ ಮುನ್ನ, ರಾಜ್ಯದ ಕಾಂಗ್ರೆಸ್ ಮುಖಂಡ ಭೂಪಿಂದರ್‌ಸಿಂಗ್ ಹೂಡಾ ಅವರ ವಿರುದ್ಧ ಭೂಸ್ವಾಧೀನ ಹಗರಣಕ್ಕೆ ಸಂಬಂಧಿಸಿ ಭ್ರಷ್ಟಾಚಾರ ನಡೆಸಿದ ದೂರನ್ನು ಸಿಬಿಐ ದಾಖಲಿಸಿಕೊಂಡಿತು. ಅದು ಹೂಡಾ ವಿರುದ್ಧ ಸಿಬಿಐ ದಾಖಲಿಸಿದ್ದ ಮೂರನೇ ಎಫ್‌ಐಆರ್ ಆಗಿತ್ತು.
- 2019ರ ಲೋಕಸಭಾ ಚುನಾವಣೆಯಲ್ಲಿ ಉತ್ತರಪ್ರದೇಶದಲ್ಲಿ ಎಸ್‌ಪಿ– ಬಿಎಸ್‌ಪಿ ಮೈತ್ರಿ ಮಾತುಕತೆ ಅಂತಿಮ ಹಂತದಲ್ಲಿತ್ತು. ಮೈತ್ರಿ ಘೋಷಣೆಯಾಗುವುದಕ್ಕೂ ಒಂದು ವಾರ ಮೊದಲು, ರಾಜ್ಯದ ಅನೇಕ ಕಡೆಗಳಲ್ಲಿ ಸಿಬಿಐ ಶೋಧ ನಡೆಸಿತು. 2012ರಿಂದ 2016ರ ಅವಧಿಯಲ್ಲಿ ನಡೆದಿದೆ ಎನ್ನಲಾದ ಅಕ್ರಮ ಗಣಿಗಾರಿಕೆಗೆ ಸಂಬಂಧಿಸಿದಂತೆ ಈ ಶೋಧಗಳು ನಡೆದಿದ್ದವು. ಕೆಲವು ಅಧಿಕಾರಿಗಳು ಹಾಗೂ ಎರಡೂ ಪಕ್ಷಗಳ ಮುಖಂಡರ ಮನೆಗಳಲ್ಲಿ ಶೋಧ ನಡೆದಿತ್ತು.
- ಒಡಿಶಾದಲ್ಲಿ 2017ರ ಪಂಚಾಯತ್ ಚುನಾವಣೆಗಳಿಗೂ ಕೆಲವೇ ದಿನ ಮೊದಲು ಬಿಜೆಡಿಯ ಕೆಲವು ಶಾಸಕರು ಮತ್ತು ಮುಖ್ಯಮಂತ್ರಿ ನವೀನ್ ಪಟ್ನಾಯಕ್ ಅವರ ಕಚೇರಿಯ ಅಧಿಕಾರಿಗಳ ಮನೆಯಲ್ಲಿ ಸಿಬಿಐ ಶೋಧ ನಡೆಸಿತ್ತು. ₹ 500 ಕೋಟಿ ಮೌಲ್ಯದ ಚಿಟ್‌ಫಂಡ್ ಅಕ್ರಮದಲ್ಲಿ ಇವರು ಶಾಮೀಲಾಗಿದ್ದಾರೆ ಎಂದು ಸಿಬಿಐ ಶಂಕಿಸಿತ್ತು.
- 2016ರಲ್ಲಿ ಉತ್ತರಾಖಂಡದಲ್ಲಿ ರಾಜಕೀಯ ತುಮುಲ ಸೃಷ್ಟಿಯಾಗಿ, ಕಾಂಗ್ರೆಸ್ ಪಕ್ಷ ಅಧಿಕಾರ ಕಳೆದುಕೊಳ್ಳುವ ಸ್ಥಿತಿ ನಿರ್ಮಾಣವಾಗಿತ್ತು. ಮುಖ್ಯಮಂತ್ರಿ ವಿಶ್ವಾಸಮತ ಪಡೆಯಬೇಕಾಗಿ ಬಂದಿತ್ತು. ತನ್ನ ಪರವಾಗಿ ಮತ ಚಲಾಯಿಸಲು ರಾವತ್ ಅವರು ಲಂಚದ ಆಮಿಷ ತೋರಿಸಿದ್ದರು ಎಂದು ಬಂಡಾಯ ಶಾಸಕರು ಆರೋಪಿಸಿದ್ದರು. ಇದರ ಆಧಾರದಲ್ಲಿ ಬಿಜೆಪಿಯ ಮುಖಂಡರೊಬ್ಬರು ಸಾರ್ವಜನಿಕ ಹಿತಾಸಕ್ತಿ ಅರ್ಜಿ ಸಲ್ಲಿಸಿದ್ದರು. ಈ ಅರ್ಜಿಯನ್ನೇ ಆಧಾರವಾಗಿಟ್ಟು, ಸಿಬಿಐ ತನಿಖೆಯನ್ನು ಆರಂಭಿಸಿತ್ತು. ವಿಶ್ವಾಸಮತ ಯಾಚನೆಯ ಹಿಂದಿನ ದಿನ ವಿಚಾರಣೆಗೆ ಹಾಜರಾಗುವಂತೆ ರಾವತ್ ಅವರಿಗೆ ಸಿಬಿಐ ನೋಟಿಸ್ ನೀಡಿತ್ತು.

ನಾರದಾ ಲಂಚ ಹಗರಣ

‘ಸುವೇಂದು ತನಿಖೆಗೆ ಅನುಮತಿ ಸಿಕ್ಕಿಲ್ಲ’



ಮುಕುಲ್ ರಾಯ್

ನವದೆಹಲಿ (ಪಿಟಿಐ): ಟಿಎಂಸಿಯಿಂದ ಬಿಜೆಪಿಗೆ ಪಕ್ಷಾಂತರ ಮಾಡಿರುವ ಮುಕುಲ್ ರಾಯ್ ಮತ್ತು ಟಿಎಂಸಿ ಸಂಸದ ಅಪರೂಪ ಪೊದ್ದಾರ್ ಅವರ ವಿರುದ್ಧ ನಾರದಾ ಹಗರಣದಲ್ಲಿ ಯಾವುದೇ ಪುರಾವೆ ಸಿಕ್ಕಿಲ್ಲ. ಸುವೇಂದು ಅಧಿಕಾರಿ ಅವರ ವಿರುದ್ಧ ತನಿಖೆಗೆ ಅನುಮತಿ ಕೋರಿ ಲೋಕಸಭಾ ಸ್ಪೀಕರ್‌ಗೆ ಪತ್ರ ಬರೆಯಲಾಗಿದೆ ಎಂದು ಸಿಬಿಐ ಅಧಿಕಾರಿಗಳು ಮಂಗಳವಾರ ಹೇಳಿದ್ದಾರೆ.

2019ರ ಏಪ್ರಿಲ್ 6ರಂದು ಈ ಪತ್ರ ಬರೆಯಲಾಗಿದೆ. ಅನುಮತಿ ಕೋರಿ ಎರಡು ವರ್ಷಗಳಾದರೂ ಸ್ಪೀಕರ್ ಅವರು ಇನ್ನೂ ಅನುಮತಿ ಕೊಟ್ಟಿಲ್ಲ.



ಸುವೇಂದು

ಟಿಎಂಸಿ ಮುಖ್ಯಸ್ಥೆ ಮತ್ತು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರಿಗೆ ಒಂದು ಕಾಲದಲ್ಲಿ ಆಪ್ತರಾಗಿದ್ದ ಸುವೇಂದು ಅವರು 2020ರ ಡಿಸೆಂಬರ್‌ನಲ್ಲಿ ಬಿಜೆಪಿ ಸೇರಿದ್ದಾರೆ. ವಿಧಾನಸಭೆಗೆ ಇತ್ತೀಚೆಗೆ ನಡೆದ ಚುನಾವಣೆಯಲ್ಲಿ ಅವರು ಮಮತಾ ವಿರುದ್ಧ ನಂದಿಗ್ರಾಮ ಕ್ಷೇತ್ರದಲ್ಲಿ ಅಲ್ಪ ಅಂತರದ ಗೆಲುವು ಪಡೆದಿದ್ದಾರೆ.

2014ರಲ್ಲಿ ‘ನಾರದಾ ನ್ಯೂಸ್’ ನಡೆಸಿದ್ದ ಮಾರುವೇಷದ ಕಾರ್ಯಾಚರಣೆಯಲ್ಲಿ ಟಿಎಂಸಿಯ ಕೆಲವು ಮುಖಂಡರು ಲಂಚ ಪಡೆಯುವುದನ್ನು ಚಿತ್ರೀಕರಿಸಲಾಗಿದೆ ಎನ್ನಲಾಗಿತ್ತು. ಈ ವಿಡಿಯೊವನ್ನು 2016ರ ಪಶ್ಚಿಮ ಬಂಗಾಳ ವಿಧಾನಸಭೆ ಚುನಾವಣೆಗೆ ಮುನ್ನ ಬಹಿರಂಗಪಡಿಸಲಾಗಿತ್ತು. ವಿಡಿಯೊ ಬಹಿರಂಗವಾದಾಗ ಸುವೇಂದು ಅವರು ಲೋಕಸಭೆಯ ಸದಸ್ಯರಾಗಿದ್ದರು. ಹಾಗಾಗಿ, ಸ್ಪೀಕರ್ ಅನುಮತಿಗಾಗಿ ಕಾಯಲಾಗುತ್ತಿದೆ ಎಂದು ಮೂಲಗಳು ತಿಳಿಸಿವೆ.

ಸುವೇಂದು ಅವರಲ್ಲದೆ, ಟಿಎಂಸಿ ಮುಖಂಡರಾದ ಪ್ರಶೂನ್ ಬ್ಯಾನರ್ಜಿ, ಸೌಗತಾ ರಾಯ್ ಮತ್ತು ಕಕಲಿ ಘೋಷ್ ದಸ್ತಿದಾರ್ ಅವರ ವಿರುದ್ಧ ತನಿಖೆಗೆ ಸ್ಪೀಕರ್ ಅನುಮತಿ ಕೋರಲಾಗಿದೆ. 2016ರಲ್ಲಿ ಇವರೆಲ್ಲರೂ ಸಂಸದರಾಗಿದ್ದರು.

ಬಿಜೆಪಿ ಮುಖಂಡ ಮುಕುಲ್ ರಾಯ್ ಅವರ ಹೆಸರೂ ಎಫ್‌ಐಆರ್‌ನಲ್ಲಿ ಇದೆ. ಮುಕುಲ್ ಮತ್ತು ಸುವೇಂದು ಅವರು ಬಿಜೆಪಿಯಲ್ಲಿ ಇದ್ದಾರೆ. ಹಾಗಾಗಿ, ಅವರನ್ನು ಬಂಧಿಸಲಾಗಿಲ್ಲ ಎಂದು ಟಿಎಂಸಿ ಆರೋಪಿಸಿದೆ.

ಸುವೇಂದು ವಿರುದ್ಧ ಯಾವುದೇ ಕ್ರಮವನ್ನು ಯಾಕೆ ಕೈಗೊಂಡಿಲ್ಲ ಎಂದು ಮಾರುವೇಷದ ಕಾರ್ಯಾಚರಣೆ ನಡೆಸಿದ್ದ ಹಿರಿಯ ಪತ್ರಕರ್ತ ಮ್ಯಾಥ್ಯೂ ಸ್ಯಾಮುವೆಲ್ ಪ್ರಶ್ನಿಸಿದ್ದಾರೆ.

ಬಂಧಿತರು ಆಸ್ಪತ್ರೆಗೆ

ನಾರದಾ ಹಗರಣದಲ್ಲಿ ಸಿಬಿಐ ಬಂಧಿಸಿರುವ ಪಶ್ಚಿಮ ಬಂಗಾಳದ ಸಚಿವ ಸುಬ್ರತಾ ಮುಖರ್ಜಿ, ಟಿಎಂಸಿ ಶಾಸಕ ಮದನ್ ಮಿತ್ರಾ ಮತ್ತು ಪಕ್ಷದ ಮಾಜಿ ಮುಖಂಡ ಸೋವನ್ ಚಟರ್ಜಿ ಅವರನ್ನು ಅನಾರೋಗ್ಯದ ಕಾರಣ ಆಸ್ಪತ್ರೆಗೆ ದಾಖಲಿಸಲಾಗಿದೆ.

ಬಂಧನಕ್ಕೆ ಒಳಗಾಗಿರುವ ಇನ್ನೊಬ್ಬ ಸಚಿವ ಫಿರ್ಹಾದ್ ಹಕೀಮ್ ಅವರಿಗೆ ಮಂಗಳವಾರ ಬೆಳಿಗ್ಗೆ ಜ್ವರ ಕಾಣಿಸಿಕೊಂಡಿತ್ತು. ಹಾಗಾಗಿ, ಅವರನ್ನು ಬಂಧಿಸಿ ಇರಿಸಲಾಗಿರುವ ಪ್ರೆಸಿಡೆನ್ಸಿ ಕರೆಕ್ಷನಲ್ ಹೋಮ್‌ನ ಆರೋಗ್ಯ ಕೇಂದ್ರಕ್ಕೆ ಸ್ಥಳಾಂತರಿಸಲಾಯಿತು.

ಮಿತ್ರಾ ಮತ್ತು ಚಟರ್ಜಿ ಅವರು ಉಸಿರಾಟದ ಸಮಸ್ಯೆಯಾಗುತ್ತಿದೆ ಎಂದು ಹೇಳಿಕೊಂಡ ಕಾರಣ ಅವರಿಬ್ಬರನ್ನು ಎಸ್‌ಎಸ್‌ಕೆಎಂ ಸರ್ಕಾರಿ ಆಸ್ಪತ್ರೆಗೆ ದಾಖಲಿಸಲಾಯಿತು. ಮುಖರ್ಜಿ ಅವರೂ ಇದೇ ಆಸ್ಪತ್ರೆಯಲ್ಲಿ ಇದ್ದಾರೆ.

ಈಗ ಬಂಧಿತರಾಗಿರುವ ನಾಲ್ವರು, ಐಪಿಎಸ್ ಅಧಿಕಾರಿ ಎಸ್.ಎಂ.ಎಚ್ ಮೀರ್ಜಾ ಸೇರಿ 13 ಆರೋಪಿಗಳ ಮೇಲೆ ಎಫ್‌ಐಆರ್ ದಾಖಲಾಗಿದೆ.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

‘ಧೂಮಪಾನಿಗಳಿಗೆ ಕೊರೊನಾ ಸೋಂಕು ತಗುಲುವ ಸಾಧ್ಯತೆ ಕಡಿಮೆ. ಅವರಿಗೆ ಕೋವಿಡ್ ಬರುವ ಸಾಧ್ಯತೆ ಕಡಿಮೆ. ಧೂಮಪಾನದಿಂದ ಶ್ವಾಸನಾಳ ಮತ್ತು ಶ್ವಾಸಕೋಶದಲ್ಲಿ ಒಂದು ರೀತಿಯ ಲೋಳೆ ಕಟ್ಟಿಕೊಂಡಿರುತ್ತದೆ. ಕೊರೊನಾ ವೈರಾಣು ಈ ಲೋಳೆಗೆ ಅಂಟಿಕೊಳ್ಳುವ ಕಾರಣ, ಅದು ಶ್ವಾಸಕೋಶದ ಜೀವಕೋಶಗಳನ್ನು ಪ್ರವೇಶಿಸುವುದಿಲ್ಲ ಎಂದು ಕೇಂದ್ರ ಸರ್ಕಾರದ ವೈಜ್ಞಾನಿಕ ಸಂಶೋಧನಾ ಸಂಸ್ಥೆ ಸಿಎಸ್‌ಐಆರ್ ತನ್ನ ಪತ್ರಿಕಾ ಪ್ರಕಟಣೆಯಲ್ಲಿ ಹೇಳಿದೆ’ ಎಂಬ ಪೋಸ್ಟರ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ‘ಹೆಚ್ಚು ಧೂಮಪಾನ ಮಾಡುವುದರಿಂದ ಕೋವಿಡ್ ತಡೆಯಬಹುದು’ ಎಂಬ ಪೋಸ್ಟರ್ ಸಹ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ.



‘ಸಿಎಸ್‌ಐಆರ್ ನಡೆಸಿರುವ ಸೆರೊ ಸರ್ವೆಯ ವರದಿಯಲ್ಲಿ ಇಂತಹ ಯಾವುದೇ ನಿರ್ಧಾರಕ್ಕೆ ಬರಲಾಗಿಲ್ಲ. ಧೂಮಪಾನದಿಂದ ಮತ್ತು ಕೇವಲ ಸಸ್ಯಾಹಾರ ಸೇವನೆಯಿಂದ ಕೋವಿಡ್ ಹರಡುವುದನ್ನು ತಡೆಯಬಹುದು ಎಂಬುದು ಸಾಬೀತಾಗಿಲ್ಲ. ಇದಕ್ಕೆ ಸಂಬಂಧಿಸಿದಂತೆ ಸಿಎಸ್‌ಐಆರ್ ಯಾವುದೇ ಪತ್ರಿಕಾ ಪ್ರಕಟಣೆ ಹೊರಡಿಸಿಲ್ಲ. ಇಂತಹ ಸುಳ್ಳುಸುದ್ದಿಗಳಿಗೆ ಕಿವಿಗೊಡಬೇಡಿ. ಕೋವಿಡ್ ನಿಯಂತ್ರಣ ಮಾರ್ಗಸೂಚಿಗಳನ್ನು ಪಾಲಿಸಿ. ಅಂತರ ಕಾಯ್ದುಕೊಳ್ಳಿ, ಸ್ಯಾನಿಟೈಸರ್ ಬಳಸಿ ಮತ್ತು ಲಸಿಕೆ ಹಾಕಿಸಿಕೊಳ್ಳಿ’ ಎಂದು ಪಿಐಬಿ ತನ್ನ ಫ್ಯಾಕ್ಟ್‌ಚೆಕ್‌ನಲ್ಲಿ ಹೇಳಿದೆ.

ಗುಂಡಣ್ಣ



ಬೆರಗಿನ ಬೆಳಕು

ಗುರುರಾಜ ಕರಜಗಿ

ರಾಜನಿಷ್ಠೆ

ಮಹೋಷಧಕುಮಾರ, ಬ್ರಹ್ಮದತ್ತ ರಾಜನನ್ನು ಎತ್ತರದ ಅಂತಸ್ತಿಗೆ ಕರೆದೊಯ್ದು ಅವನನ್ನು ಸಿಂಹಾಸನದ ಮೇಲೆ ಕೂರಿಸಿ ಹೇಳಿದ, ‘ಮಹಾರಾಜಾ, ನಾನು ಏಕೆ ಮತ್ತೊಬ್ಬ ರಾಜನಡಿಯಲ್ಲಿ ಕೆಲಸ ಮಾಡುತ್ತಿದ್ದೇನೆ, ನಾನೇ ಯಾಕೆ ರಾಜನಾಗಲಿಲ್ಲವೆಂದು ತಾವು ಕೇಳಿದಿರಿ. ನಾನು ಮನಸ್ಸು ಮಾಡಿದ್ದರೆ ನಮ್ಮ ರಾಜ ವಿದೇಹರನ್ನು, ತಮ್ಮನ್ನು ಕೊಂದು ಎರಡು ದೇಶಗಳಿಗೂ ಒಡೆಯನಾಗಬಹುದಿತ್ತು. ಆದರೆ ಅದು ನನ್ನ ಕೆಲಸವಲ್ಲ. ದುಡ್ಡಿಗಾಗಿ ತನ್ನ ದೇಶವನ್ನು, ತಾನು ಒಪ್ಪಿದ ಪಕ್ಷವನ್ನು ಬಿಟ್ಟು ಬೇರೆಡೆಗೆ ಹೋಗುವವನು ಎಂದಿಗೂ ಉದ್ಧಾರವಾಗುವುದಿಲ್ಲ. ಹಣ ಶಾಶ್ವತವಲ್ಲ, ನಂಬಿಕೆ ಶಾಶ್ವತ. ಒಂದು ಸಲ ನಂಬಿಕೆಯನ್ನು ಕಳೆದುಕೊಂಡರೆ, ಆಗ ಹೋದ ಮರ್ಯಾದೆಯನ್ನು ಯಾವ ಹಣವೂ ಕೊಡಲಾರದು. ನಾನು ವಿದೇಹ ರಾಜನಿಗೆ, ಅವನಿಗೆ ಬೆಂಗಾವಲಾಗಿ ಇರುತ್ತೇನೆಂದು ತೆತ್ತುಕೊಂಡಿದ್ದೇನೆ. ಆತ ನನ್ನ ಮೇಲೆ ಕೋಪ ಮಾಡಿಕೊಂಡರೂ ಸರಿಯೆ, ದೇಶದಿಂದ ಬಹಿಷ್ಕಾರ ಮಾಡಿದರೂ ಸರಿಯೆ. ನಾನು ಮಾತ್ರ ಅವನಿಗೆ ಯಾವ ತೊಂದರೆಯೂ, ಅನ್ಯಾಯವೂ ಆಗದಂತೆ ನೋಡಿಕೊಳ್ಳುತ್ತೇನೆ. ಈಗ ನಿಮ್ಮ ಮಗಳನ್ನು ಆತ ಮದುವೆಯಾಗಬೇಕು ಎಂದು ಅಪೇಕ್ಷೆಪಟ್ಟ. ನನಗೆ ಗೊತ್ತಿತ್ತು, ನೀವು ಈ ಮೋಸವನ್ನು ಮಾಡಿ ಆತನನ್ನು ಮತ್ತು ನನ್ನನ್ನು ಕೊಲ್ಲಿಸಲು ಹೊಂಚು ಹಾಕಿದ್ದಿರಿ. ಆದರೆ ನನ್ನ ರಾಜ ಕಾಮದಲ್ಲಿ ಮೈಮರೆತಿದ್ದ. ಆದ್ದರಿಂದ ನಾನು ಯೋಜನೆ ಮಾಡಿ ಆತನ ಅಪೇಕ್ಷೆ ಪೂರೈಸುವಂತೆಯೂ ಮತ್ತು ಆತನ ಸರಿಯಾದ ರಕ್ಷಣೆಯಾಗುವಂತೆಯೂ ನೋಡಿಕೊಳ್ಳಬೇಕಾಯಿತು’.

ಈ ಉತ್ತರ ಬ್ರಹ್ಮದತ್ತ ಮಹಾರಾಜನಿಗೆ ತುಂಬ ಇಷ್ಟವಾಯಿತು. ಅವನ ರಾಜನಿಷ್ಠೆ, ವೃತ್ತಿಪರತೆಯನ್ನು ಮೆಚ್ಚಿದ. ಅಂಥ ಮಂತ್ರಿ ಇದ್ದರೆ ರಾಜ ನೆಮ್ಮದಿಯಿಂದ ಇರಬಹುದು ಎಂದುಕೊಂಡ. ತನ್ನ ದೇಶದ ಮಹಾಮಂತ್ರಿಯಾಗು, ನಿನಗೆ ಏನೆಲ್ಲವನ್ನೂ ಕೊಡುತ್ತೇನೆ ಎಂದು ಕೇಳಿದ. ಅದನ್ನು ಮಹೋಷಧಕುಮಾರ ವಿನಯದಿಂದ ನಿರಾಕರಿಸುವುದು ಮಾತ್ರವಲ್ಲ, ಮುಂದೆ ಇಬ್ಬರೂ ರಾಜರು ತಮ್ಮೊಳಗೆ ಕಾದಾಡದಂತೆ, ಅಣ್ಣತಮ್ಮಂದಿರಂತೆ ನಡೆದುಕೊಳ್ಳುವುದಾಗಿ ಭಾಷೆ ತೆಗೆದುಕೊಂಡ. ಇದರಿಂದ ಶಾಂತಿ ನೆಲೆಸಿ, ಪರಸ್ಪರ ಮೋಸದಾಟ ನಡೆಯದಂತೆ ಆಯಿತು.

ಅಲ್ಲಿಂದ ಹೊರಡುವಾಗ ಬ್ರಹ್ಮದತ್ತ ಮಹಾರಾಜನಿಗೆ ಮಹೋಷಧಕುಮಾರ ಆಶ್ವಾಸನೆಯನ್ನಿತ್ತ. ‘ಮಹಾರಾಜಾ, ನಿನ್ನ ಪರಿವಾರದವರ ಬಗ್ಗೆ ಯಾವ ಆತಂಕವೂ ಬೇಡ. ವಿದೇಹ ರಾಜ ತಮ್ಮ ತಾಯಿ ತಲತಲಾದೇವಿ ಮತ್ತು ರಾಣಿ ನಂದಾದೇವಿಯರನ್ನು ತನ್ನ ತಾಯಿಯಂತೆ, ನಿನ್ನ ಮಗನನ್ನು ತಮ್ಮನಂತೆ ನೋಡಿಕೊಳ್ಳುತ್ತಾನೆ. ನಾನು ಹೋದ ತಕ್ಷಣ ಮದುವೆಯ ವ್ಯವಸ್ಥೆ ಮಾಡಿ ತಿಳಿಸುತ್ತೇನೆ. ತಮ್ಮೆಲ್ಲ ಪರಿವಾರದೊಂದಿಗೆ ಬರಬೇಕು’. ಕುಮಾರನ ಮಾತು ಕೇಳಿ ರಾಜ ಬ್ರಹ್ಮದತ್ತನಿಗೆ ನಿರಾತಂಕವಾಯಿತು. ಕುಮಾರನನ್ನು ಮತ್ತೆ ಒಂದು ವಾರ ತನ್ನ ಬಳಿಯೇ ಇಟ್ಟುಕೊಂಡು ಅವನ ಮಾತುಗಳನ್ನು ಕೇಳಿದ. ‘ನಾನು ಅತ್ಯಂತ ಸಂತೋಷದಿಂದ ನಿನಗಾಗಿ ಸಾವಿರ ನಿಕಷಗಳನ್ನು, ಕಾಶೀಪದದ ಎಂಭತ್ತು ಗ್ರಾಮಗಳನ್ನು, ನಾಲ್ಕುನೂರು ದಾಸಿಯರನ್ನು, ನೂರು ಜನ ಅತ್ಯಂತ ಸುಂದರಿಯರನ್ನು ಕೊಡುತ್ತೇನೆ’ ಎಂದು, ವಿದೇಹ ಮಹಾರಾಜನಿಗೆ, ತನ್ನ ಮಕ್ಕಳಿಗೆ ಅನೇಕ ವಸ್ತ್ರ, ಅಲಂಕಾರ, ಹಿರಣ್ಯ, ಅಲಂಕೃತ ಆನೆಗಳನ್ನು, ಕುದುರೆ ರಥಾದಿಗಳನ್ನು ಕಾಣಿಕೆಯಾಗಿ ಕಳುಹಿಸಿದ. ❖

ದಿನ ಭವಿಷ್ಯ

ಬುಧವಾರ ಮೇ 19, 2021

ಶ್ರೀ ಪ್ಲವ ನಾಮ ಸಂವತ್ಸರ ಉತ್ತರಾಯಣ ವಸಂತ ಋತು ವೈಶಾಖ ಮಾಸ ಶುಕ್ಲ ಪಕ್ಷ ಮಳೆ ನಕ್ಷತ್ರ ಕೃತ್ತಿಕಾ ಸಪ್ತಮಿ ಗಂ. 3-29 (ಬೆ. 7-24) ಬುಧವಾರ ನಿತ್ಯ ನಕ್ಷತ್ರ ಆಶ್ಲೇಷಾ ಗಂ. 12-23 (ಹ. 10-58) ಧ್ರುವ ನಾಮ ಯೋಗ ಗಂ 36-54 ವಣಿಜ ಕರಣ ಗಂ. 3-29 ವಿಷ ಗಂ. 42-24 ಅಮೃತ ಗಂ. 7-07: ರಾಹುಕಾಲ: ಮ. ಗಂ. 12-00 ರಿಂದ 1-30 ಗುಳಿಕ ಕಾಲ ಬೆ. ಗಂ 10-30 ರಿಂದ 12-00 ಯಮಗಂಡ ಕಾಲ ಬೆ. ಗಂ 7-30 ರಿಂದ 9-00 ಸೂರ್ಯೋದಯ: 5-57 ಸೂರ್ಯಾಸ್ತ: 6-35 ಅದೃಷ್ಟ ಸಂಖ್ಯೆ 9

ಮೇಷ: ಕುಟುಂಬ ಸದಸ್ಯರಲ್ಲಿನ ಭಿನ್ನಮತದಿಂದಾಗಿ ಬೇಸರದ ವಾತಾವರಣ. ಹಿರಿಯರ, ಹಿತೈಷಿಗಳ ಮಧ್ಯಪ್ರವೇಶದಿಂದಾಗಿ ಎಲ್ಲವೂ ನಿರ್ಧಾರಕ್ಕೆ ಬರಲಿದೆ. ಆರ್ಥಿಕ ವ್ಯವಹಾರದಲ್ಲಿ ಸ್ವಲ್ಪ ಮಟ್ಟಿನ ಹಿಂಜರಿಕೆ ಕಂಡುಬರಲಿದೆ.

ವೃಷಭ: ಸಂಯಮದಿಂದ ಕಾರ್ಯ ಪ್ರವೃತರಾಗಿ. ಸಾಂಸಾರಿಕವಾಗಿ ತಲೆದೋರಿರುವ ಏರಿಳಿತಗಳ ಬಗ್ಗೆ ತಲೆ ಕೆಡಿಸಿಕೊಳ್ಳುವ ಅಗತ್ಯವಿಲ್ಲ. ಗುರುಹಿರಿಯರ ಸಕಾಲಿಕ ನೆರವಿನಿಂದ ಸಂತಸದ ಕ್ಷಣಗಳು ನಿಮ್ಮದಾಗುವವು.

ಮಿಥುನ: ನಿಮ್ಮ ಮುಂದಾಳುತನದ ಬಗ್ಗೆ ಎಲ್ಲರಿಂದ ಪ್ರಶಂಸೆ ವ್ಯಕ್ತವಾಗುವುದು. ಸಾಮಾಜಿಕ ಕೆಲಸಗಳಲ್ಲಿ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಾಧ್ಯತೆ. ಯಶಸ್ಸಿನ ಅಮಲಿನಲ್ಲಿ ಸಂಸಾರದ ಬಗ್ಗೆ ಅವಗಣನೆ ಸಲ್ಲ.

ಕರ್ಕಾಟಕ: ನಿಮ್ಮ ಬಹುದಿನದ ಕೆಲಸ ಕಾರ್ಯಗಳು ಕ್ಷಿಪ್ರಗತಿಯಲ್ಲಿ ಮುಗಿದು ಮನಸ್ಸಿಗೆ ನೆಮ್ಮದಿ ನೀಡಲಿದೆ. ಆರ್ಥಿಕ ರಂಗದಲ್ಲಿಯೂ ಉತ್ತಮ ಪ್ರಗತಿಯನ್ನು ಹೊಂದಿ ನೆಮ್ಮದಿ. ಮನೆಯಲ್ಲಿ ಹಬ್ಬದ ವಾತಾವರಣ.

ಸಿಂಹ: ಕಾರ್ಯಕ್ಷೇತ್ರದಲ್ಲಿ ಒತ್ತಡವಿದ್ದರೂ ಯೋಜಿತ ಕ್ರಮದಂತೆ ಸುಗಮವಾಗಿ ಕೈಗೂಡುವುದು. ಮನಸ್ಸಿಗೆ ನೆಮ್ಮದಿ ದೊರೆತು ನಿರಾಳರಾಗುವಿರಿ. ಸಂಗಾತಿಯೊಂದಿಗೆ ಸಂತಸವನ್ನು ಹಂಚಿಕೊಳ್ಳುವ ಸುಯೋಗ.

ಕನ್ಯಾ: ನಿಮ್ಮ ಧಾರ್ಮಿಕ ನಡೆಯ ಬಗ್ಗೆ ಇತರರಲ್ಲಿ ಅಚ್ಚರಿ ಮೂಡುವುದು. ಹೊಸ ವಿಚಾರವೊಂದು ಮನದಲ್ಲಿ ಮೂಡಿ ಚಿಂತನೆಗೆ ಹಚ್ಚಲಿದೆ. ಸಮತೋಲನ ದೃಷ್ಟಿಯಿಂದಾಗಿ ಎಲ್ಲರ ಮೆಚ್ಚುಗೆಗೆ ಪಾತ್ರರಾಗುವಿರಿ.

ತುಲಾ: ಪರಿಸ್ಥಿತಿ ನಿಮಗೆ ವಿರೋಧವಾಗಿರುವುದರ ಜೊತೆಗೆ ಮಕ್ಕಳ ನಡೆ ನುಡಿಗಳಿಗೆ ನೀವು ತಲೆ ತಗ್ಗಿಸುವ ಸಂದರ್ಭ ಒದಗಬಹುದು. ಆರೋಗ್ಯದಲ್ಲಿ ಸುಧಾರಣೆ ಕಂಡುಕೊಳ್ಳುವಿರಿ. ಕುಲದೇವತಾ ಆರಾಧನೆ ಮಾಡ.

ವೃಶ್ಚಿಕ: ನಿಮ್ಮ ಕೆಲಸ ಕಾರ್ಯಗಳು ಎಂದಿನಂತೆ ಸುಗಮವಾಗಿ ಸಾಗುತ್ತಿರುವಾಗ ಅನ್ಯರ ಅನಪೇಕ್ಷಿತ ಹಸ್ತಕ್ಷೇಪದಿಂದ ಮಾನಸಿಕ ಕಿರಿಕಿರಿ. ಸಂಯಮದಿಂದ ಹಸ್ತಕ್ಷೇಪವನ್ನು ಕಡೆಗಣಿಸುವುದು ಉತ್ತಮ. ಆರ್ಥಿಕ ರಂಗದಲ್ಲಿ ಪ್ರಗತಿ.

ಧನು: ವಿದ್ಯಾರ್ಥಿಗಳಿಗೆ ಪ್ರಗತಿದಾಯಕ ದಿನ. ವಿವಾಹಾಕಾಂಕ್ಷಿಗಳಿಗೆ ಉತ್ತಮ ಆಯ್ಕೆ ದೊರೆಯುವುದು. ಕ್ಷಿಪ್ರ ವಿವಾಹ ಸಂಬಂಧಗಳು ಕೂಡಿಬರುವ ಸಾಧ್ಯತೆ. ದಿನದಾಂತ್ಯಕ್ಕೆ ಮನೆಯಲ್ಲಿ ಸಂತಸದ ವಾತಾವರಣ ನೆಲೆಸಲಿದೆ.

ಮಕರ: ಬಾಹ್ಯ ಸೌಂದರ್ಯದ ಸೆಳೆತದಿಂದಾಗಿ ಸಂಕಟಗಳು ಎದುರಾಗುವ ಸಾಧ್ಯತೆ. ಮನೋವೃತ್ತಿಯ ಮೇಲೆ ಹಿಡಿತ ಸಾಧಿಸಿ ದಿನನಿತ್ಯದ ಕಾರ್ಯಗಳಲ್ಲಿ ಗಮನ ವಹಿಸುವುದು ಉತ್ತಮ. ಸಂಗಾತಿ ಮಾತಿಗೆ ಮನ್ನಣೆ ನೀಡಿ.

ಕುಂಭ: ಕಾವ್ಯ, ಕವನಗಳ ಬರವಣಿಗೆ ವಿಚಾರಗಳಲ್ಲಿ ಆಸಕ್ತಿ ಮೂಡುವುದು. ನಿಮ್ಮ ಮೇಲಿನ ಎಲ್ಲ ಆಪಾದನೆಗಳಿಂದ ಮುಕ್ತಿ ಪಡೆದು ಅಭಿಮಾನಕ್ಕೆ ಪಾತ್ರರಾಗುವಿರಿ. ಸಾಮಾಜಿಕ ಕಾರ್ಯಗಳಲ್ಲಿ ಯಶಸ್ಸು ನಿಮ್ಮದಾಗಲಿದೆ.

ಮೀನ: ಕೆಲಸ ಕಾರ್ಯಗಳಲ್ಲಿ ಹೊಸತನ, ಉತ್ಸಾಹಗಳು ಮೂಡಿಬರಲಿವೆ. ವೈದ್ಯಕೀಯ ವಲಯದಲ್ಲಿರುವವರಿಗೆ ವಿಶೇಷ ಧನಪ್ರಾಪ್ತಿ. ಹೊಸ ಹೊಸ ಸ್ನೇಹಿತರಿಂದ ಹೊಸ ಹೊಸ ವಿಚಾರಗಳ ಬಗ್ಗೆ ತಿಳಿವಳಿಕೆ. ಸಾಮಾಜಿಕ ಗೌರವ.

ನಿಮ್ಮ ಜನ್ಮದಿನ 19-ಮೇ ಈ ದಿನ ಅತ್ಯಂತ ಶುಭಕರ. ಸದೃಢ ಆರೋಗ್ಯವು ನಿಮ್ಮದಾಗಲಿದೆ. ಹಣಕಾಸು ವ್ಯವಹಾರಗಳಲ್ಲಿ ತೊಡಗುವವರಿಗೆ ಸ್ವಲ್ಪ ಮಟ್ಟಿನ ಹಿನ್ನಡೆ. ಕಟ್ಟಿಗೆ, ಕಬ್ಬಿಣ, ಪಶು ಮಾರಾಟ ವ್ಯವಹಾರಗಳಲ್ಲಿ ನಷ್ಟ ಸಂಭವಿಸಬಹುದು. ದೈಹಿಕ ಶ್ರಮ ವಹಿಸುವವರಿಗೆ ಅತ್ಯಂತ ಪ್ರಶಸ್ತವಾಗಿದೆ. ರೈತ, ಕಾರ್ಮಿಕ ವರ್ಗದವರಿಗೆ ಸುಖಪ್ರದವಾಗಿರುವುದು.


ಪದಬಂಧ 4601 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ವೇಗವಾಗಿ ವ್ಯಕ್ತವಾದ ಸಂಭ್ರಮ (3)
6.ಕನ್ನಡಿಗನು ಹಿಡಿದಿರುವ ಮೈಕ್ರೋಸ್ಕೋಪ್! (5)
7.ಸಲಿಗೆ ತೋರಿದವ ನೀಡಿದ ಕಂಠಾಭರಣ (3)
10.ಬೇರು ಸಹಿತ ನಾಶ ಮಾಡುವುದು (5)
15.ಬುಧವಾರ ಕಾಣಿಸಿದ ಪಂಡಿತ! (3)
16.ಅಂತರ್ಜಾತಿಯ ಲಗ್ನವನ್ನು ಹೀಗೂ ಹೇಳುವರು (5)
17.ಹೊಟ್ಟೆಕಿಚ್ಚು ಹೀಗೆ ವ್ಯಕ್ತವಾಗಿದೆ (3)

ಮೇಲಿಂದ ಕೆಳಕ್ಕೆ

1.ನಡುವೆ ಶ್ವಾಸ ಕೊಟ್ಟು ನೀಡಿದ ಭರವಸೆ (4)
2.ಕುಳಿತುಕೊಳ್ಳುವ ಪೀಠ (3)
3.ಸೂತ್ರವಿದ್ದಾಗಲೇ ಇದು ಸರಾಗ! (3)
4.ಅನುಕರಣೆಗೆ ಯೋಗ್ಯವಾದುದು (3)
5.ಗರ್ಭಗುಡಿಯ ಮುಂಭಾಗದ ಅಂಕಣ (4)
8.ಇದು ಲೋಹವಲ್ಲ! (3)
9.ವಾತಾಯನ ಇಲ್ಲಿದೆ (3)
11.ಮಿಡಿ ಹಿಡಿದು ತೋರಿದ ಸಿಟ್ಟು! (4)
12.ಅಪರಾಧಿಗಳನ್ನು ಕೊಲ್ಲಲು ನಿಯುಕ್ತನಾದವನು (4)
13.ಮುಂದೆ ಬರಲಿರುವ ಕಾಲ (3)
14.ಅಪಹಾಸ್ಯವನ್ನು ಮಾಡುವವನು (3)
15.ವಿಷಯಾನುಕ್ರಮಣಿಯಲ್ಲಿರುವ ಸಂವತ್ಸರ ಕಂಡೀತೇ? (3)



4600ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಹಾರವ 4.ರಥೋತ್ಸವ 6.ಶತಾಯುಷಿ 8.ನವೀನ 11.ಕಸೂತಿ 13.ಹಸುಗೂಸು 17.ಮದಗಜ 18.ಲಿಲಾವು

ಮೇಲಿಂದ ಕೆಳಕ್ಕೆ: 1.ಹಾಜರಿ 2.ವರಮಾನ 3.ಅಲ್ಪಾಯು 5.ವಶ 7.ಷಿಕಾರಿ 9.ನಡುಕ 10.ವಿವಾಹ 12.ತಿಲಾಂಜಲಿ 14.ಸುಷುಪ್ತಿ 15.ಸುಮ 16.ಹಗೇವು

ಸುಡೊಕು 4987

	7	9			3		8	
				8		2	5	9
8	1		2	6		7		
	8					1		5
	9	2	8	1	5		6	
5						8		
9		7	5					
	5			7	2		4	
4	3		6		1			2

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

4986 ಸುಡೊಕು

9	2	8	3	6	7	4	5	1
3	6	4	9	1	5	8	7	2
5	7	1	2	4	8	9	6	3
7	4	2	6	3	9	1	8	5
8	3	9	5	7	1	2	4	6
1	5	6	8	2	4	3	9	7
2	8	5	1	9	6	7	3	4
4	9	3	7	5	2	6	1	8
6	1	7	4	8	3	5	2	9

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ರಾಜ್ಯದಲ್ಲಿ 525 ಮಂದಿ ಮೃತ: ಈವರೆಗೆ 16.74 ಲಕ್ಷ ಮಂದಿ ಗುಣಮುಖ

ಕೋವಿಡ್: 58 ಸಾವಿರ ಮಂದಿ ಚೇತರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಪೀಡಿತರಲ್ಲಿ ರಾಜ್ಯದಲ್ಲಿ ಇದೇ ಮೊದಲ ಬಾರಿಗೆ 24 ಗಂಟೆಗಳ ಅವಧಿಯಲ್ಲಿ ಚೇತರಿಕೆ ಹೊಂದಿದವರ ಸಂಖ್ಯೆ 60 ಸಾವಿರದ (58,395) ಹತ್ತಿರ ಸಾಗಿದೆ. ಇದರಿಂದಾಗಿ ಆರು ಲಕ್ಷ ದಾಟಿದ್ದ ಸಕ್ರಿಯ ಪ್ರಕರಣಗಳ ಸಂಖ್ಯೆ 5.75 ಲಕ್ಷಕ್ಕೆ ಇಳಿಕೆಯಾಗಿದೆ.


ಸೋಂಕಿತರ ಸಂಖ್ಯೆ ರಾಜ್ಯದಲ್ಲಿ ಏರಿಕೆ ಕಾಣುತ್ತಿರುವ ಕಾರಣ ಕೋವಿಡ್ ಪೀಡಿತರಿಗೆ ಆಸ್ಪತ್ರೆ ಚಿಕಿತ್ಸೆ ಅವಧಿಯನ್ನು ಕಡಿತ ಮಾಡಲಾಗುತ್ತಿದೆ. ಇದರಿಂದಾಗಿ ಹೆಚ್ಚಿನ ಸಂಖ್ಯೆಯಲ್ಲಿ ಸೋಂಕಿತರು ಅಲ್ಪಾವಧಿಯಲ್ಲಿಯೇ ಆಸ್ಪತ್ರೆಯಿಂದ ಮನೆಗೆ ತೆರಳುತ್ತಿದ್ದಾರೆ. ಈವರೆಗೆ 16.74 ಲಕ್ಷ ಮಂದಿಗೆ ಕಾಯಿಲೆ ವಾಸಿಯಾಗಿದೆ.

ರಾಜ್ಯದಲ್ಲಿ 24 ಗಂಟೆಗಳ ಅವಧಿಯಲ್ಲಿ ನಡೆಸಲಾದ ಪರೀಕ್ಷೆಗಳ ಸಂಖ್ಯೆ 93 ಸಾವಿರಕ್ಕೆ ಇಳಿಕೆಯಾಗಿದೆ. 30,309 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢ ಪಟ್ಟಿದೆ. ಈವರೆಗೆ ಸೋಂಕಿತರಾದವರ ಒಟ್ಟು ಸಂಖ್ಯೆ 22.72 ಲಕ್ಷ ದಾಟಿದೆ.

ಕೋವಿಡ್ ಪೀಡಿತರಲ್ಲಿ ಬೆಂಗಳೂರಿನಲ್ಲಿ 298 ಮಂದಿ ಸೇರಿದಂತೆ ರಾಜ್ಯದಲ್ಲಿ 525 ಮಂದಿ ಮೃತಪಟ್ಟಿರುವುದು ದೃಢಪಟ್ಟಿದೆ. ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಮರಣ ಪ್ರಕರಣಗಳು ವರದಿಯಾಗಿವೆ. ಬಳ್ಳಾರಿಯಲ್ಲಿ 28 ಮಂದಿ, ಉತ್ತರ ಕನ್ನಡದಲ್ಲಿ 22 ಮಂದಿ, ಬೆಂಗಳೂರು ಗ್ರಾಮಾಂತರದಲ್ಲಿ 19 ಮಂದಿ, ಹಾಸನದಲ್ಲಿ 18 ಮಂದಿ, ತುಮಕೂರು ಮತ್ತು ಶಿವಮೊಗ್ಗದಲ್ಲಿ ತಲಾ 15 ಮಂದಿ, ಮೈಸೂರಿನಲ್ಲಿ 13 ಮಂದಿ ಸಾವಿಗೀಡಾಗಿರುವುದು ದೃಢಪಟ್ಟಿದೆ. ಮರಣ ಪ್ರಮಾಣ ದರವು ಶೇ 1.73ಕ್ಕೆ ತಲುಪಿದೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 22,838ಕ್ಕೆ ಏರಿಕೆಯಾಗಿದೆ.

ಬೆಂಗಳೂರಿನಲ್ಲಿ ಕೋವಿಡ್ ಪೀಡಿತರ ಸಂಖ್ಯೆ ಇಳಿಕೆ ಕಂಡಿದೆ. 8,676 ಮಂದಿ ಸೋಂಕಿತರಾಗಿರುವುದು ದೃಢಪಟ್ಟಿದೆ.

ಬೆಳಗಾವಿ (2,118), ಮೈಸೂರು (1,916), ಬಳ್ಳಾರಿ (1,799), ತುಮಕೂರು (1,562), ಬೆಂಗಳೂರು ಗ್ರಾಮಾಂತರ (1,339), ಶಿವಮೊಗ್ಗ (1,168), ಕೋಲಾರ (1,021) ಜಿಲ್ಲೆಯಲ್ಲಿ ಅಧಿಕ ಪ್ರಕರಣಗಳು ಹೊಸದಾಗಿ ವರದಿಯಾಗಿವೆ.



ಸೋಂಕಿತೆಯರಿಬ್ಬರು ಪರಾರಿ

ದಾವಣಗೆರೆ: ಕೊರೊನಾ ಸೋಂಕು ಪತ್ತೆಯಾಗಿ ಜೆ.ಎಚ್. ಪಟೇಲ್ ಬಡಾವಣೆಯ ಕೋವಿಡ್ ಕೇರ್ ಸೆಂಟರ್‌ನಲ್ಲಿ ಇದ್ದ ಯುವತಿಯರಿಬ್ಬರು ಪರಾರಿಯಾಗಿದ್ದಾರೆ.

'ಸ್ಟೇಹೋಂ' ನಿವಾಸಿಗಳಾಗಿದ್ದ 21 ಮತ್ತು 19 ವರ್ಷದ ಯುವತಿಯರು ಪರಾರಿಯಾದವರು. ನಾಲ್ಕು ವರ್ಷಗಳ ಹಿಂದೆ ಪ್ರೀತಿಸಿ ಅಂತರ್‌ಧರ್ಮೀಯ ಯುವಕನನ್ನು ಒಬ್ಬರು ಮದುವೆಯಾಗಿದ್ದರು. ಆದರೆ, ಆಗ 18 ವರ್ಷ ತುಂಬದೇ ಇದ್ದ ಕಾರಣ ಪ್ರಕರಣ ದಾಖಲಿಸಿ ಯುವಕನನ್ನು ಜೈಲಿಗೆ ಕಳುಹಿಸಲಾಗಿತ್ತು.

ಸೋಂಕಿತರಿಗೆ ಟೆಲಿ ಮೆಡಿಸಿನ್ ಸೇವೆ

ಬೆಂಗಳೂರು: ಕೋವಿಡ್ ಆರೈಕೆ ಕೇಂದ್ರದಲ್ಲಿರುವ ಸೋಂಕಿತರಿಗೆ ಜೀವ ಸಂಜೀವಿನಿ ತಂತ್ರಾಂಶದ ಮೂಲಕ ನಿತ್ಯ ವೈದ್ಯಕೀಯ ಸಲಹೆ ಒದಗಿಸಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ನಿಟ್ಟಿನಲ್ಲಿ ಕೋವಿಡ್ ಆರೈಕೆ ಕೇಂದ್ರಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಶುಶ್ರೂಷಕ ಸಿಬ್ಬಂದಿ ತಂತ್ರಾಂಶದ ಮೂಲಕ ಜಿಲ್ಲಾ ಆಸ್ಪತ್ರೆಗಳಲ್ಲಿನ ತಜ್ಞ ವೈದ್ಯರನ್ನು ಸೋಂಕಿತರು ಸಂಪರ್ಕಿಸಲು ನೆರವಾಗಬೇಕು. ಮೊಬೈಲ್‌ಗಳ ನೆರವಿನಿಂದ ಜಿಲ್ಲೆಯ ಹಬ್ ಸೆಂಟರ್‌ಗಳಿಗೆ ಸಂಪರ್ಕಿಸಿದಲ್ಲಿ ರೋಗಿಯ ಸ್ಥಿತಿಯ ಬಗ್ಗೆ ತಿಳಿಯುವ ಜತೆಗೆ ಹೆಚ್ಚಿನ ಚಿಕಿತ್ಸೆ ಸಹ ತಕ್ಷಣ ದೊರೆಯಲಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ. ಹಬ್ ಸೆಂಟರ್‌ಗಳಾದ ಸರ್ಕಾರಿ ವೈದ್ಯಕೀಯ ಕಾಲೇಜುಗಳು, ಜಿಲ್ಲಾ ಆಸ್ಪತ್ರೆಗಳು, ತಾಲ್ಲೂಕು ಆಸ್ಪತ್ರೆಗಳು, ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಗಲ್ಲಿ ತಜ್ಞ ವೈದ್ಯರನ್ನು ಪಾಳಿಯಲ್ಲಿ ನಿಯೋಜಿಸಬೇಕು. ವೈದ್ಯಕೀಯ ಸಲಹೆಗಳನ್ನು ನೀಡಲು ಸೂಚಿಸಿದ ಸಮುದಾಯ ಆರೋಗ್ಯ ಕೇಂದ್ರ ಹಾಗೂ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿನ ವೈದ್ಯರು ಕೂಡ ಸಲಹೆ ನೀಡಬಹುದು. ನಿತ್ಯ ಟೆಲಿ ಮೆಡಿಸಿನ್ ಸೇವೆ ಪಡೆದವರ ಸಂಖ್ಯೆ ಹಾಗೂ ನಿಯೋಜಿತರಾದ ತಜ್ಞರ ವಿವರವನ್ನು ದಾಖಲಿಸಿಕೊಳ್ಳಬೇಕು ಎಂದು ಸೂಚಿಸಲಾಗಿದೆ.

ಆರ್ಥಿಕ ಪ್ಯಾಕೇಜ್ ಕೊಡಲೇಬೇಕು: ಡಿಕೆಶಿ

ಬೆಂಗಳೂರು: 'ಲಾಕ್‌ಡೌನ್‌ನಿಂದ ಸಂಕಷ್ಟದಲ್ಲಿರುವವರಿಗೆ ರಾಜ್ಯ ಸರ್ಕಾರ ಆರ್ಥಿಕ ಪ್ಯಾಕೇಜ್ ಕೊಡಲೇಬೇಕು' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಆಗ್ರಹಿಸಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ಗೊಬ್ಬರದ ಬೆಲೆ ಗಗನಕ್ಕೇರಿದೆ. ಹೂ, ಹಣ್ಣು, ತರಕಾರಿ ಬೆಳೆಗಾರರು ಬೆಳೆ ಉಳಿಸಿಕೊಳ್ಳಲು ಸಾಧ್ಯವಿಲ್ಲ. ಹೀಗಾಗಿ ರೈತರಿಗೆ ವಿಶೇಷ ಪ್ಯಾಕೇಜ್ ನೀಡಬೇಕು' ಎಂದು ಒತ್ತಾಯಿಸಿದರು. 'ಲಸಿಕೆ ನೀಡುವುದು ಕೇಂದ್ರದ ಕೆಲಸ. ರಾಜ್ಯ ಸರ್ಕಾರ ಜಾಗತಿಕ ಟೆಂಡರ್ ಕರೆಯುವುದು ಏಕೆ. ಇದರಲ್ಲೂ ಕಮಿಷನ್ ಹೊಡೆಯಲು ಮುಂದಾಗಿದ್ದಾರೆ. ಲಸಿಕೆ ವಿಚಾರದಲ್ಲಿ ಆರೋಗ್ಯ ಸಚಿವರಿಗೂ, ಉಪಮುಖ್ಯಮಂತ್ರಿಗೂ ಸಮನ್ವಯತೆ ಇಲ್ಲ' ಎಂದರು.

'ಪಕ್ಷದ ಶಾಸಕರ, ಸಂಸದರ ನಿಧಿಯಿಂದ ₹ 100 ಕೋಟಿಯನ್ನು ಲಸಿಕಾ ಕಾರ್ಯಕ್ರಮಕ್ಕೆ ಬಳಸಲು ಸರ್ಕಾರ ಅನುಮತಿ ನೀಡಲಿ. ಲಸಿಕೆ ಹೇಗೆ ವಿತರಿಸಬೇಕು ಎಂಬುದನ್ನು ನಾವು ತೋರಿಸುತ್ತೇವೆ. ಸರ್ಕಾರದಲ್ಲಿ ಜಗಳ, ಯುದ್ಧ ನಡೆಯುತ್ತಿದ್ದು, ಅಧಿಕಾರಿಗಳು ಬರೆದುಕೊಟ್ಟಿದ್ದನ್ನು ಮುಖ್ಯಮಂತ್ರಿ ಓದುತ್ತಿದ್ದಾರೆ. ರಾಜ್ಯದ ನಾಯಕತ್ವದ ಬಗ್ಗೆ ಪ್ರಧಾನಿಗೆ ನಂಬಿಕೆ ಇಲ್ಲ. ನಂಬಿಕೆ ಇದ್ದಿದ್ದರೆ, ಅವರು ಜಿಲ್ಲಾಧಿಕಾರಿಗಳ ಸಭೆ ಯಾಕೆ ಮಾಡುತ್ತಿದ್ದರು' ಎಂದೂ ಪ್ರಶ್ನಿಸಿದರು.

ಸುದ್ದಿ 2 ನಿಮಿಷ

'ಟೂಲ್‌ಕಿಟ್' ಮೂಲಕ ಕಾಂಗ್ರೆಸ್ ಚೆಲ್ಲಾಟ: ಸಿ.ಟಿ.ರವಿ

ಬೆಂಗಳೂರು: ಕೊರೊನಾ ಸಂಕಷ್ಟದ ಸಂದರ್ಭದಲ್ಲೂ ಮೋದಿ ಸರ್ಕಾರದ ವಿರುದ್ಧ ಜನರನ್ನು ಎತ್ತಿಕಟ್ಟಲು ಕಾಂಗ್ರೆಸ್ ಪಕ್ಷ 'ಟೂಲ್‌ಕಿಟ್' ರೂಪಿಸಿ ಜನರ ಪ್ರಾಣದ ಜತೆ ಚೆಲ್ಲಾಟ ಆಡುತ್ತಿದೆ ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ ದೂರಿದ್ದಾರೆ.

'ಕೋವಿಡ್ ಸಂದರ್ಭದಲ್ಲಿ ಜನರ ಪ್ರಾಣ ರಕ್ಷಣೆ ಮಾಡುವಲ್ಲಿ ಸರ್ಕಾರದ ಜತೆ ಇರಬೇಕಾದ ವಿರೋಧ ಪಕ್ಷ, ತನ್ನ ಕುಕೃತ್ಯಗಳ ಮೂಲಕ ಜನರ ಜೀವಗಳಿಗೆ ಯಮನಾಗಿದ್ದು ದೌರ್ಭಾಗ್ಯವೇ ಹೊರತು ಬೇರೇನೂ ಅಲ್ಲ' ಎಂದು ಹೇಳಿದ್ದಾರೆ.

'ಚುನಾವಣೆಯಲ್ಲಿ ಜನರು ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ಮೂಲೆ ಗುಂಪು ಮಾಡಿದ್ದರೂ ಬುದ್ಧಿ ಬಂದಿಲ್ಲ. ದೇಶ ಮತ್ತು ವಿದೇಶಗಳಲ್ಲಿ ಅಪಪ್ರಚಾರ ಮಾಡಲು ಈ ಟೂಲ್‌ಕಿಟ್ ರೂಪಿಸಿದೆ. ಮನೆಗೆ ಮಗನೂ ಆಗಲಿಲ್ಲ ಸ್ಮಶಾನಕ್ಕೆ ಹೆಣವೂ ಆಗಲಿಲ್ಲ ಎಂಬ ಸ್ಥಿತಿಗೆ ಕಾಂಗ್ರೆಸ್ ಪಕ್ಷ ತಲುಪಿದೆ' ಎಂದಿದ್ದಾರೆ.

'ಲಸಿಕೆ ನಾವೇ ಕೊಡುತ್ತೇವೆ ಎಂಬ ಕಾಂಗ್ರೆಸ್ ರಾಜ್ಯ ಘಟಕದ ಅಧ್ಯಕ್ಷರ ಹೇಳಿಕೆ, ಅತ್ತೆಯ ಹಣವನ್ನು ಅಳಿಯ ದಾನ ಮಾಡಿದ ಎನ್ನುವ ಹಾಗಿದೆ. ಸರ್ಕಾರದ ನೂರು ಕೋಟಿ ಹಣವನ್ನು ಸರ್ಕಾರಕ್ಕೆ ಕೊಡುತ್ತೇವೆ ಎಂಬ ಸಿದ್ದರಾಮಯ್ಯ ಅವರ ಹಗಲು ನಾಟಕ, ಹಾಸಿಗೆಗಳನ್ನು ಬ್ಲಾಕ್ ಮಾಡಿ ತಮ್ಮ ಕಾಲು ಹಿಡಿದವರಿಗೆ ನೀಡುವ ಯೋಜನೆಗಳು ಎಲ್ಲ ಮಹಾನಾಟಕ' ಎಂದು ಹೇಳಿದ್ದಾರೆ.



ವಿಜಯಪುರ: ಮತ್ತೆ 10 ಕಪ್ಪು ಶಿಲೀಂಧ್ರ ಪ್ರಕರಣ ಪತ್ತೆ

ವಿಜಯಪುರ/ಬಳ್ಳಾರಿ: ಜಿಲ್ಲೆಯಲ್ಲಿ ಮಂಗಳವಾರ ಮತ್ತೆ 10 ಕಪ್ಪು ಶಿಲೀಂಧ್ರ(-ಬ್ಲ್ಯಾಂಕ್ ಫಂಗಸ್) ಪ್ರಕರಣ ಪತ್ತೆಯಾಗಿವೆ ಎಂದು ಜಿಲ್ಲಾಧಿಕಾರಿ ಪಿ.ಸುನೀಲ್ ಕುಮಾರ್ ತಿಳಿಸಿದ್ದಾರೆ.

ನಗರದ ಬಿಎಲ್‌ಡಿಇಯಲ್ಲಿ ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿರುವ 8 ಮತ್ತು ಯಶೋಧಾ ಆಸ್ಪತ್ರೆಯಲ್ಲಿ 2 ಪ್ರಕರಣಗಳು ಕಂಡುಬಂದಿವೆ ಎಂದು ಹೇಳಿದರು.

ಸೋಮವಾರ 26 ಪ್ರಕರಣಗಳು ವರದಿಯಾಗಿದ್ದವು. ಜಿಲ್ಲೆಯಲ್ಲಿ ಇದುವರೆಗೆ ಒಟ್ಟು 36 ಕಪ್ಪು ಶಿಲೀಂಧ್ರ ರೋಗ ತಗುಲಿದ್ದು, ಎಲ್ಲರೂ ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದರು.

ಬಳ್ಳಾರಿಯಲ್ಲಿ ಐವರಿಗೆ: ಬಳ್ಳಾರಿ ತಾಲ್ಲೂಕಿನ ಐವರಿಗೆ ಕಪ್ಪು ಶಿಲೀಂಧ್ರ ಸಮಸ್ಯೆ ಕಾಣಿಸಿಕೊಂಡಿದ್ದು, ವಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಚಿಕಿತ್ಸೆ ಪಡೆಯುತ್ತಿರುವವೆಲ್ಲರೂ 45 ವರ್ಷ ವಯಸ್ಸಿನ ಪುರುಷರು. ಅವರಲ್ಲಿ ಮೂವರು ಮಧುಮೇಹದಿಂದ ಹಾಗೂ ಇಬ್ಬರು ಮೂತ್ರಪಿಂಡ ಸಮಸ್ಯೆಯಿಂದ ಬಳಲುತ್ತಿದ್ದಾರೆ ಎಂದು ಆರೋಗ್ಯ ಇಲಾಖೆ ಮೂಲಗಳು ತಿಳಿಸಿವೆ.

ಮೊಳಕಾಲ್ಮುರು ವರದಿ: ಕೋವಿಡ್‌ಗೆ ಚಿಕಿತ್ಸೆ ಪಡೆಯುತ್ತಿದ್ದ ತಾಲ್ಲೂಕಿನ ನಾಗಸಮುದ್ರದ ವ್ಯಕ್ತಿಯೊಬ್ಬರಿಗೆ ಕಪ್ಪು ಶಿಲೀಂಧ್ರ ಸೋಂಕು ತಗುಲಿರುವುದು ಮಂಗಳವಾರ ಬೆಳಕಿಗೆ ಬಂದಿದೆ. ಚಿತ್ರದುರ್ಗದಲ್ಲಿ ಇದಕ್ಕೆ ಚಿಕಿತ್ಸೆ ಲಭ್ಯವಿಲ್ಲದ ಕಾರಣ ಬೆಂಗಳೂರಿನ ಸೇಂಟ್ ಜಾನ್ ಆಸ್ಪತ್ರೆಗೆ ದಾಖಲಿಸಲಾಗಿದೆ.

ಗರ್ಭಗುಡಿ ಎದುರು ಮೊಮ್ಮಗನ ಶವವಿಟ್ಟು ದೇವರ ಮೊರೆ ಹೋದ ಅಜ್ಜಿ!

ಪ್ರಜಾವಾಣಿ ವಾರ್ತೆ

ಯಲ್ಲಾಪುರ: ಪಟ್ಟಣದ ಗಣಪತಿ ಗಲ್ಲಿಯಲ್ಲಿ ಎರಡೂವರೆ ವರ್ಷದ ಬಾಲಕ ಮಂಗಳವಾರ ಗಂಟಲಲ್ಲಿ ಶೇಂಗಾ ಬೀಜ ಸಿಲುಕಿಕೊಂಡು ಉಸಿರುಕಟ್ಟಿ ಮೃತಪಟ್ಟ. ಇದರಿಂದ ದಿಕ್ಕೇ ತೋಚದ ಅಜ್ಜಿ, ಸಮೀಪದ ಗಣಪತಿ ದೇವಸ್ಥಾನಕ್ಕೆ ಮೃತದೇಹವನ್ನು ತೆಗೆದುಕೊಂಡು ಹೋಗಿ ದೇವರ ಗರ್ಭಗುಡಿ ಎದುರು ಇಟ್ಟು ಗಂಟೆ ಬಾರಿಸುತ್ತಾ, ಮೊಮ್ಮಗುವನ್ನು ಬದುಕಿಸು ಎಂದು ಅಂಗಲಾಚಿದರು.

ಈ ಸನ್ನಿವೇಶಗಳನ್ನು ಅಸಹಾಯಕರಾಗಿ ನೋಡುತ್ತಿದ್ದವರ ಕಂಗಳೂ ಹನಿಗೂಡಿದವು. ಇದಕ್ಕೂ ಮುನ್ನ ವೈದ್ಯರು ಮಾಡಿದ ಪ್ರಯತ್ನವೂ ಫಲ ನೀಡಲಿಲ್ಲ. ಮನೆಯವರ ಹಾಗೂ ತಾಯಿಯ ಆಕ್ರಂದನ ಮುಗಿಲು ಮುಟ್ಟಿತ್ತು.

ರಾಮನಾಥ ಆಚಾರಿ ಅವರ ಮಗ ಸಾತ್ವಿಕ್ ಮೃತ ಬಾಲಕ. ಮನೆಯಲ್ಲಿ ಸಂಜೆ ಶೇಂಗಾ ಬೀಜಗಳನ್ನು ತಿಂದಿದ್ದ. ಅಚಾನಕ್ ಆಗಿ ಅದು ಗಂಟಲಲ್ಲಿ ಸಿಲುಕಿಕೊಂಡಿತು. ಇದರಿಂದ ಉಸಿರಾಟದಲ್ಲಿ ತೊಂದರೆ ಕಾಣಿಸಿಕೊಂಡಿತು. ಮನೆಯವರು ತಕ್ಷಣವೇ ಗಂಟಲಿನಿಂದ ಎರಡು ಶೇಂಗಾ ಬೀಜಗಳನ್ನು ಹೊರ ತೆಗೆದರು. ಆದರೂ ಉಸಿರಾಟ ಸುಧಾರಿಸದ ಕಾರಣ ಪಟ್ಟಣದ ತಾಲ್ಲೂಕು ಆಸ್ಪತ್ರೆಗೆ ಕರೆದುಕೊಂಡು ಬಂದರು.

ಅಲ್ಲಿನ ವೈದ್ಯರು ಇನ್ನೂ ಒಂದು ಶೇಂಗಾ ಬೀಜವನ್ನು ಹೊರತೆಗೆದರು. ಆದರೆ, ಅಷ್ಟರಲ್ಲಿ ಮಗುವಿನ ಉಸಿರು ನಿಂತಿತ್ತು.

ಈ ಬಗ್ಗೆ ಪ್ರತಿಕ್ರಿಯಿಸಿದ ಸರ್ಕಾರಿ ಆಸ್ಪತ್ರೆಯ ವೈದ್ಯರು, 'ಮಗುವನ್ನು ಕರೆದುಕೊಂಡು ಬಂದಾಗಲೇ ಸ್ಪಂದಿಸುತ್ತಿರಲಿಲ್ಲ. ಶೇಂಗಾ ಬೀಜವು ಶ್ವಾಸಕೋಶದ ನಾಳಕ್ಕೆ ಅಡ್ಡ ನಿಂತಿರುವ ಸಾಧ್ಯತೆಗಳಿವೆ' ಎಂದು ತಿಳಿಸಿದರು.



ಯಲ್ಲಾಪುರದಲ್ಲಿ ಮೊಮ್ಮಗನ ಮೃತ ದೇಹವನ್ನು ದೇವರ ಗುಡಿ ಎದುರು ಇಟ್ಟು ಬದುಕಿಸಿಕೊಡುವಂತೆ ಅಜ್ಜಿ ಮೊರೆಯಿಡುತ್ತಿರುವುದು

15 ದಿನ ಮುಂಚೆ ಲಸಿಕೆ ಪೂರೈಕೆ: ಮೋದಿ ಭರವಸೆ

ಒಂದನೇ ಪುಟದಿಂದ

ಹಾಗಾಗಿ, ಜಿಲ್ಲಾಧಿಕಾರಿಗಳು ಮತ್ತು ಮಹಾನಗರಪಾಲಿಕೆ ಅಧಿಕಾರಿಗಳ ಜತೆಗೆ ನೇರವಾಗಿ ಸಂವಹನ ನಡೆಸಲಾಗುತ್ತಿದೆ.

ಜಿಲ್ಲಾಧಿಕಾರಿಗಳನ್ನು 'ಕ್ಷೇತ್ರ ಸೇನಾನಿಗಳು' (ಫೀಲ್ಡ್ ಕಮಾಂಡರ್) ಎಂದು ಮೋದಿ ಬಣ್ಣಿಸಿದ್ದಾರೆ. ಜಿಲ್ಲಾ ಮಟ್ಟದಲ್ಲಿ ಕೋವಿಡ್ ನಿರ್ವಹಣೆಗಾಗಿ ತಮ್ಮದೇ ಆದ ವಿನೂತನ ಕ್ರಮಗಳನ್ನು ಕೈಗೊಳ್ಳಲು ಅವರಿಗೆ ಎಲ್ಲ ಸ್ವಾತಂತ್ರ್ಯ ಇದೆ. ತಮ್ಮ ಕ್ರಮಗಳಿಂದಾಗಿ ಆಗಿರುವ ಬದಲಾವಣೆಗಳನ್ನು ಯಾವುದೇ ಹಿಂಜರಿಕೆ ಇಲ್ಲದೆ ಹೇಳಿಕೊಳ್ಳಬೇಕು ಎಂದು ಸೂಚಿಸಿದರು.

'ಪ್ರತಿ ಜಿಲ್ಲೆಯೂ ತನ್ನದೇ ಆದ ಸವಾಲುಗಳನ್ನು ಹೊಂದಿದೆ. ನಿಮ್ಮ ಜಿಲ್ಲೆ ಎದುರಿಸುತ್ತಿರುವ ಸವಾಲುಗಳು ನಿಮಗೆ ಚೆನ್ನಾಗಿ ತಿಳಿದಿರುತ್ತವೆ. ಹಾಗಾಗಿ, ನಿಮ್ಮ ಜಿಲ್ಲೆಯು ಗೆದ್ದರೆ ದೇಶವು ವಿಜಯಶಾಲಿಯಾಗಿ ಹೊರಹೊಮ್ಮುತ್ತದೆ. ನಿಮ್ಮ ಜಿಲ್ಲೆಯು ಕೊರೊನಾವನ್ನು ಸೋಲಿಸಿದರೆ ಇಡೀ ದೇಶವೇ ಕೊರೊನಾವನ್ನು ಸೋಲಿಸುತ್ತದೆ' ಎಂದು ಮೋದಿ ವಿವರಿಸಿದರು.

ಸ್ಥಳೀಯ ಮಟ್ಟದ ಕಂಟೈನ್‌ಮೆಂಟ್ ವಲಯಗಳನ್ನು ಗುರುತಿಸಿ, ಪರೀಕ್ಷೆ ಮತ್ತು ಸಂಪರ್ಕಿತರ ಪತ್ತೆಗೆ ಹೆಚ್ಚಿನ ಒತ್ತು ಕೊಡಿ, ಕೋವಿಡ್ ಹಿಮ್ಮೆಟ್ಟಿಸಲು ಬೇಕಾದ ಮಾಹಿತಿಯನ್ನು ಜನರಿಗೆ ಒದಗಿಸಿ ಎಂದು ಮೋದಿ ಸೂಚಿಸಿದ್ದಾರೆ. ತಲುಪುವುದಕ್ಕೇ ಕಷ್ಟವಿರುವ ಗ್ರಾಮೀಣ ಪ್ರದೇಶಗಳತ್ತ ಹೆಚ್ಚಿನ ಗಮನ ಹರಿಸಬೇಕಾಗಿದೆ ಎಂದು ಅವರು ಹೇಳಿದ್ದಾರೆ. ಕೊರೊನಾ ತಡೆಯಬೇಕು. ಜತೆಗೆ, ನಿತ್ಯಜೀವನಕ್ಕೆ ಬೇಕಾದ ವಸ್ತುಗಳ ಪೂರೈಕೆ ನಿರಂತರವಾಗಿ ಇರುವಂತೆಯೂ ನೋಡಿಕೊಳ್ಳಬೇಕು ಎಂದು ಪ್ರಧಾನಿ ನಿರ್ದೇಶನ ನೀಡಿದ್ದಾರೆ.

ಕೇರಳ ಸಂಪುಟದಲ್ಲಿ ಶೈಲಜಾಗೆ ಸ್ಥಾನ ಇಲ್ಲ

ಒಂದನೇ ಪುಟದಿಂದ

ಕೋವಿಡ್ ಮತ್ತು ನಿಫಾ ವೈರಸ್ ಸಂದರ್ಭದ ಕಾರ್ಯಾಚರಣೆಯಲ್ಲಿ ಎಲ್ಲರೂ ಕೈಜೋಡಿಸಿದ್ದರು ಎಂದಿದ್ದಾರೆ. ಎರಡನೇ ಅವಧಿಗೆ ಆಯ್ಕೆಯಾಗಿರುವ ವೀಣಾ ಜಾರ್ಜ್ ಅವರಿಗೆ ಸಚಿವ ಸ್ಥಾನ ದೊರೆಯಲಿದೆ. ಅವರು ಪತ್ರಕರ್ತೆ ಆಗಿದ್ದರು. ಮಾಜಿ ಸಂಸದ ಎಂ.ಬಿ. ರಾಜೇಶ್ ಅವರು ಸ್ಪೀಕರ್ ಹುದ್ದೆ ಪಡೆಯಲಿದ್ದಾರೆ.

ವಿಜಯನ್ ಅವರ ಅಳಿಯ ರಿಯಾಜ್ ಇದೇ ಮೊದಲ ಬಾರಿ ಶಾಸಕರಾಗಿದ್ದಾರೆ. ಅವರಿಗೆ ಸಚಿವ ಸ್ಥಾನ ನೀಡಿರುವುದರಿಂದಾಗಿ ಸ್ವಜನ ಪಕ್ಷಪಾತಿ ಎಂಬ ಆರೋಪಕ್ಕೆ ವಿಜಯನ್ ಅವರು ಗುರಿಯಾಗಬಹುದು. ಕಳೆದ ಅವಧಿಯಲ್ಲಿ ಬಿಜೆಪಿ ಗೆದ್ದಿದ್ದ ಏಕೈಕ ಕ್ಷೇತ್ರ ನೇಮಮ್‌ನಲ್ಲಿ ಈ ಬಾರಿ ಆ ಪಕ್ಷವನ್ನು ಸೋಲಿಸಿದ ವಿ. ಶಿವನ್‌ಕುಟ್ಟಿ ಅವರಿಗೂ ಸಚಿವ ಸ್ಥಾನ ಸಿಗಲಿದೆ.

ಎಲ್‌ಡಿಎಫ್‌ನ ಎರಡನೇ ಅತಿ ದೊಡ್ಡ ಪಕ್ಷವಾದ ಸಿಪಿಐ ಕೂಡ ಎಲ್ಲ ಹೊಸಮುಖಗಳಿಗೆ ಅವಕಾಶ ಕೊಟ್ಟಿದೆ. ಒಟ್ಟು ನಾಲ್ವರು ಮಹಿಳೆಯರು ಸಂಪುಟದಲ್ಲಿ ಇರಲಿದ್ದಾರೆ. ಕಳೆದ ಬಾರಿ ಇಬ್ಬರಷ್ಟೇ ಇದ್ದರು.

'ಮಾಧ್ಯಮ ಸ್ಪಂದನ' ತಂಡದಿಂದ ಅಂತಿಮ ವಿಧಿವಿಧಾನ

ಕೋವಿಡ್‌ನಿಂದ ವೃದ್ಧ ಸಾವು: ಪತ್ರಕರ್ತರಿಂದ ಅಂತ್ಯಸಂಸ್ಕಾರ

ಪ್ರಜಾವಾಣಿ ವಾರ್ತೆ

ಸಿದ್ದಾಪುರ (ಕೊಡಗು): ಸಮೀಪದ ಬಲಮುರಿ ಗ್ರಾಮದಲ್ಲಿ ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಯ ಅಂತ್ಯಕ್ರಿಯೆ ನಡೆಸಲು ಗ್ರಾಮಸ್ಥರು ಹಿಂದೇಟು ಹಾಕಿದ್ದರಿಂದ, ಸ್ಥಳೀಯ ಪತ್ರಕರ್ತರ ತಂಡವೊಂದು ಮೃತರ ಅಂತ್ಯಕ್ರಿಯೆ ನಡೆಸಿ ಮಾನವೀಯತೆ ತೋರಿದೆ.

ಸದಾ ಜನರ ಸಂಕಷ್ಟವನ್ನು ಪತ್ರಿಕೆಗಳಿಗೆ ಹಾಗೂ ದೃಶ್ಯ ವಾಹಿನಿಗಳಿಗೆ ವರದಿ ಮಾಡುತ್ತಿದ್ದ ಪತ್ರಕರ್ತರು, ಕೋವಿಡ್‌ನಿಂದ ಮೃತಪಟ್ಟವರ ಅಂತ್ಯಕ್ರಿಯೆ ನಡೆಸಿ ಸೇವಾ ಕಾರ್ಯ ಮಾಡಿದ್ದಾರೆ.

ಮೂರ್ನಾಡು ಸಮೀಪದ ಬಲಮುರಿ ಗ್ರಾಮದ 85 ವರ್ಷದ ವೃದ್ಧರೊಬ್ಬರು ಕೋವಿಡ್‌ನಿಂದ ಭಾನುವಾರ ನಿಧನರಾಗಿದ್ದರು. ಮನೆಯವರಿಗೂ ಕೋವಿಡ್ ಪಾಸಿಟಿವ್ ಆಗಿದ್ದು, ಮೃತ ವ್ಯಕ್ತಿಯ ಅಂತ್ಯಕ್ರಿಯೆ ನಡೆಸಲು ಗ್ರಾಮಸ್ಥರು ಹಿಂದೇಟು ಹಾಕಿದ್ದರು.

ಬಳಿಕ ಕೊಡಗು ಪ್ರೆಸ್‌ಕ್ಲಬ್ ಅಧ್ಯಕ್ಷ ಅಜ್ಜಮಾಡ ರಮೇಶ್ ಕುಟ್ಟಪ್ಪ ಅವರ ನೇತೃತ್ವದ 'ಮಾಧ್ಯಮ ಸ್ಪಂದನ' ಎಂಬ ಪತ್ರಕರ್ತರ ತಂಡಕ್ಕೆ ಮಾಹಿತಿ ನೀಡಿದ್ದರು. ವಿಷಯ ತಿಳಿದ ಪತ್ರಕರ್ತರಾದ ಪಪ್ಪು ತಿಮ್ಮಯ್ಯ, ರೆಜಿತ್ ಕುಮಾರ್ ಗುಹ್ಯ ನೇತೃತ್ವದ 'ಮಾಧ್ಯಮ ಸ್ಪಂದನ' ತಂಡವು, ಬಲಮುರಿ ಗ್ರಾಮಕ್ಕೆ ಧಾವಿಸಿದೆ. ಮೃತರ ಮನೆಗೆ ತೆರಳಿ, ಪಿ.ಪಿ.ಇ ಕಿಟ್ ಧರಿಸಿ ಅಂತ್ಯಕ್ರಿಯೆ ನಡೆಸಿದೆ. ಅಂತ್ಯಕ್ರಿಯೆ ನಡೆಸಿದ ತಂಡದಲ್ಲಿ ಸ್ಥಳೀಯರಾದ ಪ್ರವೀಣ್, ಅನೀಶ್, ಶರಿನ್ ಇದ್ದರು.

ಮೃತ ವ್ಯಕ್ತಿಯ ಮಗ ಕೂಡ ಪಿ.ಪಿ.ಇ ಕಿಟ್ ಧರಿಸಿ, ಕೊಡವ ಸಂಪ್ರದಾಯದಂತೆ ಅಂತಿಮ ವಿಧಿ ವಿಧಾನ ನೆರವೇರಿಸಿದರು. ಕೋವಿಡ್ ಪಾಸಿಟಿವ್ ವ್ಯಕ್ತಿಯ ಅಂತ್ಯಕ್ರಿಯೆ ನಡೆಸಿದ ಪತ್ರಕರ್ತರ ಕಾರ್ಯಕ್ಕೆ ಜಿಲ್ಲೆಯಲ್ಲಿ ಮೆಚ್ಚುಗೆ ವ್ಯಕ್ತವಾಗಿದೆ.



ಪಿ.ಪಿ.ಇ ಕಿಟ್ ಧರಿಸಿ, ಕೋವಿಡ್–19ನಿಂದ ಮೃತಪಟ್ಟ ವ್ಯಕ್ತಿಯ ಅಂತ್ಯಕ್ರಿಯೆ ನಡೆಸಿದ 'ಮಾಧ್ಯಮ ಸ್ಪಂದನ' ತಂಡದ ಸದಸ್ಯರು

ಯಾರೊಂದಿಗೂ ಹಸ್ತಲಾಘವ ಮಾಡಬೇಡಿ

ಅಂತರ ಕಾಯ್ದುಕೊಳ್ಳಿ

ಕೋವಿಡ್ ಲಸಿಕೆ ರಫ್ತು ಅಕ್ಟೋಬರ್‌ವರೆಗೆ ಇಲ್ಲ

ನವದೆಹಲಿ (ರಾಯಿಟರ್ಸ್): ಭಾರತವು ಕೋವಿಡ್–19 ನಿರೋಧಕ ಲಸಿಕೆಗಳನ್ನು ಅಕ್ಟೋಬರ್ ವರೆಗೆ ರಫ್ತು ಮಾಡುವ ಸಾಧ್ಯತೆ ಇಲ್ಲ. ತಯಾರಾಗುವ ಬಹುತೇಕ ಲಸಿಕೆಗಳನ್ನು ದೇಶೀಯವಾಗಿಯೇ ಬಳಸಿಕೊಳ್ಳಲು ನಿರ್ಧರಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಭಾರತದಲ್ಲಿ ಕೋವಿಡ್–19ರ ಎರಡನೇ ಅಲೆಯು ತೀವ್ರವಾಗಿದೆ. ಹಾಗಾಗಿ, ಲಸಿಕೆ ರಫ್ತನ್ನು ಒಂದು ತಿಂಗಳ ಹಿಂದೆ ನಿಲ್ಲಿಸಲಾಗಿತ್ತು. ಅದಕ್ಕೂ ಮೊದಲು 6.6 ಕೋಟಿ ಡೋಸ್ ಲಸಿಕೆಗಳನ್ನು ದಾನ ಅಥವಾ ಮಾರಾಟ ರೂಪದಲ್ಲಿ ರಫ್ತು ಮಾಡಲಾಗಿತ್ತು. ಭಾರತದಿಂದ ಲಸಿಕೆ ಸಿಗದು ಎಂಬ ಅಂಶವು ಬಾಂಗ್ಲಾದೇಶ, ನೇಪಾಳ, ಶ್ರೀಲಂಕಾ ಮತ್ತು ಆಫ್ರಿಕಾದ ಕೆಲವು ದೇಶಗಳಿಗೆ ಸಂಕಷ್ಟ ತಂದೊಡ್ಡಿದೆ. ಲಸಿಕೆಗೆ ಪರ್ಯಾಯ ಮಾರ್ಗವನ್ನು ಈ ದೇಶಗಳು ಹುಡುಕಿಕೊಳ್ಳಬೇಕಾಗಿದೆ.

'ಭಾರತದಲ್ಲಿ ಕೋವಿಡ್ ಪ್ರಕರಣಗಳ ಸಂಖ್ಯೆ 2.5 ಕೋಟಿ ದಾಟಿದೆ ಮತ್ತು ಪ್ರತಿದಿನ ದಾಖಲೆ ಮಟ್ಟದಲ್ಲಿ ಜನರು ಮರಣ ಹೊಂದುತ್ತಿದ್ದಾರೆ. ದೇಶದ ಪರಿಸ್ಥಿತಿಯೇ ಹೀಗಿರುವಾಗ ನಾವು ಯಾವ ದೇಶಕ್ಕೂ ಲಸಿಕೆ ರಫ್ತು ಮಾಡಲಾಗುವುದಿಲ್ಲ ಎಂದು ಅಧಿಕೃತವಾಗಿ ಹೇಳಬೇಕಿಲ್ಲ. ಲಸಿಕೆ ರಫ್ತು ಮಾಡುವುದು ಬೇಡ ಎಂದು ಆಂತರಿಕವಾಗಿ ಚರ್ಚಿಸಿ ನಿರ್ಧಾರ ತೆಗೆದುಕೊಳ್ಳಲಾಗಿದೆ. ಇಂಥ ಪರಿಸ್ಥಿತಿಯಲ್ಲಿ ನಮ್ಮಿಂದ ಲಸಿಕೆಗಳನ್ನು ನಿರೀಕ್ಷಿಸಬೇಡಿ ಎಂದು ಕೆಲ ದೇಶಗಳಿಗೆ ತಿಳಿಸಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಕೋವಿಡ್: ಪ್ರೊಬೇಷನರಿ ಪಿಎಸ್‌ಐ ಸಾವು

ಪ್ರಜಾವಾಣಿ ವಾರ್ತೆ

ಕೋಲಾರ: ಕೊರೊನಾ ಸೋಂಕು ತಗುಲಿ, ಇಲ್ಲಿನ ಆರ್.ಎಲ್. ಜಾಲಪ್ಪ ಆಸ್ಪತ್ರೆಗೆ ದಾಖಲಾಗಿದ್ದ ಪ್ರೊಬೇಷನರಿ ಹಂತದ ಪಿಎಸ್‌ಐ ಶಾಮಿಲಿ (24) ಅವರು ಮಂಗಳವಾರ ಮೃತಪಟ್ಟಿದ್ದಾರೆ. ಅವರು ಏಳು ತಿಂಗಳ ಗರ್ಭಿಣಿಯಾಗಿದ್ದರು.



ಶಾಮಿಲಿ

2020ರ ಡಿಸೆಂಬರ್‌ನಲ್ಲಿ ಪೊಲೀಸ್ ಇಲಾಖೆಗೆ ಸೇರಿದ್ದ ಅವರು, ಜ.11ರಿಂದ ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕಚೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದರು.

ಕೇಂದ್ರೀಯ ಮೀಸಲು ಪೊಲೀಸ್ ಪಡೆಯಲ್ಲಿ ಎಎಸ್‌ಐ ಆಗಿದ್ದ ಮುಳಬಾಗಿಲು ತಾಲ್ಲೂಕಿನ ವಿರೂಪಾಕ್ಷಿ ಗ್ರಾಮದ ಲಕ್ಷ್ಮಯ್ಯ ಅವರ ಮಗಳಾದ ಶಾಮಿಲಿ ಮಂಗಳೂರಿನಲ್ಲಿ ಎಂ.ಎಸ್ಸಿ ಓದಿದ್ದರು. ಬೆಂಗಳೂರು ಉತ್ತರ ವಿಶ್ವವಿದ್ಯಾಲಯದಲ್ಲಿ ಪ್ರಥಮ ದರ್ಜೆ ಸಹಾಯಕರಾಗಿರುವ ಶ್ರೀನಿವಾಸಪುರ ತಾಲ್ಲೂಕಿನ ಬೀರಗಾನಹಳ್ಳಿಯ ಸನತ್‌ಕುಮಾರ್ ಅವರನ್ನು 8 ತಿಂಗಳ ಹಿಂದೆ ಮದುವೆಯಾಗಿದ್ದರು.

ಶಾಮಿಲಿ, ರಜೆ ಪಡೆದು ಏ.29ರಂದು ಪತಿಯ ಮನೆಗೆ ಬಂದಿದ್ದರು. ಜ್ವರ ಬಂದಿದ್ದರಿಂದ ಮೇ 2ರಂದು ಜಾಲಪ್ಪ ಆಸ್ಪತ್ರೆಗೆ ದಾಖಲಾಗಿದ್ದರು. ಬೀರಗಾನಹಳ್ಳಿಯಲ್ಲಿ ಸರ್ಕಾರಿ ಗೌರವಗಳೊಂದಿಗೆ ಕೋವಿಡ್ ಮಾರ್ಗಸೂಚಿಯಂತೆ ಮಂಗಳವಾರ ಅಂತ್ಯಕ್ರಿಯೆ ನಡೆಸಲಾಯಿತು.

97 ಪೊಲೀಸರಿಗೆ ಕೊರೊನಾ

ಕೋಲಾರ: ಜಿಲ್ಲೆಯಲ್ಲಿ 97 ಪೊಲೀಸ್ ಸಿಬ್ಬಂದಿಗೆ ಕೋವಿಡ್–19 ದೃಢವಾಗಿದೆ. ಸೋಂಕಿತ ಸಿಬ್ಬಂದಿ ಪೈಕಿ ಮೂವರ ಸ್ಥಿತಿ ಗಂಭೀರವಾಗಿದ್ದು, ಅವರನ್ನು ಆಸ್ಪತ್ರೆಗಳಿಗೆ ದಾಖಲಿಸಲಾಗಿದೆ. ಉಳಿದ 94 ಮಂದಿ ಮನೆಗಳಲ್ಲೇ ಕ್ವಾರಂಟೈನ್ ಆಗಿ ಚಿಕಿತ್ಸೆ ಪಡೆಯುತ್ತಿದ್ದಾರೆ.

ಮೀಸಲು ಪೊಲೀಸ್ ಪಡೆಯ ಸಹಾಯಕ ಸಬ್‌ಇನ್‌ಸ್ಪೆಕ್ಟರ್ ಒಬ್ಬರು ಕೋವಿಡ್‌ನಿಂದ ಮೂರು ದಿನದ ಹಿಂದೆ ಮೃತಪಟ್ಟಿದ್ದರು.

ಕೋವಿಡ್‌ನಿಂದ ವ್ಯಂಗ್ಯ ಚಿತ್ರಕಾರ ಗಂಗಾಧರ್ ಅಡ್ಡೇರಿ ಸಾವು

ಶಿವಮೊಗ್ಗ: ವ್ಯಂಗ್ಯ ಚಿತ್ರಕಾರ, ಶಿಕ್ಷಕ ಗಂಗಾಧರ್ ಅಡ್ಡೇರಿ (43) ಸೋಮವಾರ ನಿಧನರಾದರು.

ವಾರದ ಹಿಂದೆ ಅವರು ಕೊರೊನಾ ಸೋಂಕಿಗೆ ಒಳಗಾಗಿ ಮೆಗ್ಗಾನ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಭಾನುವಾರ ರಾತ್ರಿ ಆಮ್ಲಜನಕದ ಮಟ್ಟ ಕಡಿಮೆಯಾಗಿತ್ತು. ಆಸ್ಪತ್ರೆ ಸಿಬ್ಬಂದಿ ವೆಂಟಿಲೇಟರ್ ವ್ಯವಸ್ಥೆ ಮಾಡುವಷ್ಟರಲ್ಲಿ ಮೃತಪಟ್ಟರು.

ಹೊಸನಗರ ತಾಲ್ಲೂಕಿನ ರಿಪ್ಪನ್‌ಪೇಟೆ ಸಮೀಪದ ಅಡ್ಡೇರಿಯ ಗಂಗಾಧರ್, ಚಿಂತಾಮಣಿ ತಾಲ್ಲೂಕಿನ ಸಂತೇಕಲ್ಲಹಳ್ಳಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ಆಂಗ್ಲಭಾಷಾ ಶಿಕ್ಷಕರಾಗಿದ್ದರು. ಲಾಕ್‌ಡೌನ್ ಘೋಷಣೆ ಸಮಯದಲ್ಲಿ ಊರಿಗೆ ಬಂದಿದ್ದರು. ಬಂದ ಕೆಲವು ದಿನಗಳಲ್ಲೇ ಅವರಿಗೆ ಸೋಂಕು ತಗುಲಿರುವುದು ದೃಢಪಟ್ಟಿತ್ತು.



ಗಂಗಾಧರ್ ಅಡ್ಡೇರಿ

ರಾಜ್ಯಮಟ್ಟದ ಹಲವು ಪತ್ರಿಕೆಗಳಲ್ಲಿ ಅವರ ವ್ಯಂಗ್ಯಚಿತ್ರಗಳು ಪ್ರಕಟವಾಗಿವೆ. ಹಲವು ಪ್ರಶಸ್ತಿಗಳಿಗೂ ಪುರಸ್ಕೃತರಾಗಿದ್ದರು.

ಅವರಿಗೆ ಪತ್ನಿ, ಇಬ್ಬರು ಮಕ್ಕಳು ಇದ್ದಾರೆ.

ನಾಲ್ಕು ದಿನಗಳ ಮೊದಲು ಅಪ್ಪ ಸಾವು: ಅರಣ್ಯ ಇಲಾಖೆ ನಿವೃತ್ತ ನೌಕರರಾಗಿದ್ದ ಅವರ ತಂದೆ ಈಶ್ವರಪ್ಪ ಮೇ 14ರಂದು ಕೋವಿಡ್‌ನಿಂದ ಮೆಗ್ಗಾನ್ ಆಸ್ಪತ್ರೆಯಲ್ಲೇ ಮೃತಪಟ್ಟಿದ್ದರು. ಅವರ ಸಾವಿನ ಸುದ್ದಿ ತಿಳಿಸುವ ಮೊದಲೇ ಪುತ್ರ ಕೂಡ ಇಲ್ಲವಾಗಿದ್ದಾರೆ.

ಕೆನರಾ ಬ್ಯಾಂಕ್ ಲಾಭ ₹ 1,010 ಕೋಟಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾರ್ಚ್ 31ಕ್ಕೆ ಕೊನೆಗೊಂಡ ತ್ರೈಮಾಸಿಕದಲ್ಲಿ ಕೆನರಾ ಬ್ಯಾಂಕ್ ₹ 1,010 ಕೋಟಿ ನಿವ್ವಳ ಲಾಭ ಗಳಿಸಿದೆ. ಹಿಂದಿನ ವರ್ಷದ ಇದೇ ತ್ರೈಮಾಸಿಕದಲ್ಲಿ ಬ್ಯಾಂಕ್ ಒಟ್ಟು ₹ 6,567 ಕೋಟಿ ನಷ್ಟ ಅನುಭವಿಸಿತ್ತು.

ಬ್ಯಾಂಕ್‌ನ ಕಾರ್ಯಾಚರಣೆ ಲಾಭದಲ್ಲಿ ಶೇಕಡ 136.40ರಷ್ಟು ಬೆಳವಣಿಗೆ ಆಗಿದೆ. 2020–21ನೆಯ ಆರ್ಥಿಕ ವರ್ಷದಲ್ಲಿ ಬ್ಯಾಂಕ್ ಒಟ್ಟು ₹ 2,557 ಕೋಟಿ ಲಾಭ ಗಳಿಸಿದೆ. ಹಿಂದಿನ ಆರ್ಥಿಕ ವರ್ಷದಲ್ಲಿ ₹ 5838 ಕೋಟಿ ನಷ್ಟ ಕಂಡಿತ್ತು.

'ಫೆಬ್ರುವರಿ ನಂತರದಲ್ಲಿ ಕೋವಿಡ್ ಪ್ರಕರಣಗಳಲ್ಲಿ ಏರಿಕೆ ಆಗುತ್ತಿದೆ. ಮಾರ್ಚ್ ತ್ರೈಮಾಸಿಕದಲ್ಲಿ ಬ್ಯಾಂಕ್‌ನ ವಹಿವಾಟುಗಳು ಒಳ್ಳೆಯ ರೀತಿಯಲ್ಲಿ ನಡೆದಿವೆ. ಕೋವಿಡ್‌ನಿಂದಾಗಿ ಇದುವರೆಗೆ ಕೆಟ್ಟ ಪರಿಣಾಮ ವಹಿವಾಟಿನ ಮೇಲೆ ಆಗಿಲ್ಲ' ಎಂದು ಕೆನರಾ ಬ್ಯಾಂಕ್‌ನ ವ್ಯವಸ್ಥಾಪಕ ನಿರ್ದೇಶಕ ಎಲ್.ವಿ. ಪ್ರಭಾಕರ್ ಅವರು ವರ್ಚುವಲ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

1998ರ ನಂತರದ ಭೀಕರ ಚಂಡಮಾರುತ ● 2,000ಕ್ಕೂ ಹೆಚ್ಚು ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ● ಇಂದು ಗುಜರಾತ್‌ನಲ್ಲಿ ಮೋದಿ ವೈಮಾನಿಕ ಸಮೀಕ್ಷೆ

ಹಲವೆಡೆ ಮಳೆ, ವಿದ್ಯುತ್ ಸಂಪರ್ಕ ಕಡಿತ

ಅಹಮದಾಬಾದ್ (ಪಿಟಿಐ): ತೌತೆ ಚಂಡಮಾರುತದಿಂದಾಗಿ ಗುಜರಾತ್‌ನ ಹಲವು ಭಾಗಗಳಲ್ಲಿ ಭಾರಿ ಮಳೆಯಾಗಿದೆ. ಮಳೆ ಮತ್ತು ಬಿರುಗಾಳಿಯ ತೀವ್ರತೆಗೆ ಸಾವಿರಾರು ಮರಗಳು ನೆಲಕಚ್ಚಿವೆ. ಸಾವಿರಕ್ಕೂ ಹೆಚ್ಚು ವಿದ್ಯುತ್ ಕಂಬಗಳು ಉರುಳಿರುವ ಕಾರಣ, ಎರಡು ಸಾವಿರಕ್ಕೂ ಹೆಚ್ಚು ಗ್ರಾಮಗಳಿಗೆ ವಿದ್ಯುತ್ ಪೂರೈಕೆ ಸ್ಥಗಿತಗೊಂಡಿದೆ. ಭೂಕುಸಿತ ಮತ್ತು ಸಮುದ್ರ ಕೊರೆತದಿಂದ ರಾಜ್ಯದ 150ಕ್ಕೂ ಹೆಚ್ಚು ರಸ್ತೆ, ಹೆದ್ದಾರಿಗಳಿಗೆ ಹಾನಿಯಾಗಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಬುಧವಾರ ಗುಜರಾತ್‌ನಲ್ಲಿ ವೈಮಾನಿಕ ಸಮೀಕ್ಷೆ ನಡೆಸಲಿದ್ದಾರೆ.


ಅಹಮದಾಬಾದ್‌ನಲ್ಲಿ ಹಲವು ಮರಗಳು ಉರುಳಿ ಬಿದ್ದಿವೆ ಪಿಟಿಐ– ಚಿತ್ರ




ಮುಂಬೈ ಸಮೀಪ ಅರಬ್ಬಿ ಸಮುದ್ರದಲ್ಲಿ ಬಾರ್ಜ್‌ನಲ್ಲಿ ಸಿಕ್ಕಿಬಿದ್ದಿದವರನ್ನು ನೌಕಾಪಡೆಯು ಹೆಲಿಕಾಪ್ಟರ್ ಮೂಲಕ ಮಂಗಳವಾರ ರಕ್ಷಿಸುವ ಕಾರ್ಯಾಚರಣೆ ನಡೆಸಿತು. (ಎಡ ಚಿತ್ರ). ರಕ್ಷಣೆಗೊಂಡ ಜನರು ಸುರಕ್ಷಿತವಾಗಿ ಹೆಲಿಕಾಪ್ಟರ್‌ನಿಂದ ಇಳಿದರು. ಎಎಫ್‌ಪಿ– ಚಿತ್ರ

ಭಾವನಗರ್ ಜಿಲ್ಲೆಯಲ್ಲಿ ವಿದ್ಯುತ್ ಕಂಬ ಬಿದ್ದು ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಜಿಲ್ಲೆಯ ಪಲಿತಾನಾದಲ್ಲಿ ಮನೆ ಕುಸಿದು ತಾಯಿ ಮತ್ತು ಮಗಳು ಮೃತಪಟ್ಟಿದ್ದಾರೆ. ಇನ್ನು ರಾಜಕೋಟ್, ವಲ್ಸಾದ್, ಅಮ್ರೇಲಿ ಮತ್ತು ಪಟಾನ್ ಜಿಲ್ಲೆಗಳಲ್ಲಿ ತಲಾ ಒಬ್ಬರು ಮಳೆ ಸಂಬಂಧಿ ಅವಘಡಗಳಲ್ಲಿ ಮೃತಪಟ್ಟಿದ್ದಾರೆ. ಹಲವರು ಗಾಯಗೊಂಡಿದ್ದಾರೆ.

ಮಳೆಗೆ ಕುಸಿದಿರುವ ಮನೆಗಳನ್ನು ಸರಿಪಡಿಸುವ ಕಾರ್ಯಾಚರಣೆ ನಡೆಯುತ್ತಿದೆ. ಹಲವೆಡೆ ವಿದ್ಯುತ್ ಪೂರೈಕೆಯನ್ನು ಸರಿಪಡಿಸಲಾಗಿದೆ. ಪೂರ್ಣ ಪ್ರಮಾಣದಲ್ಲಿ ಸರಿಪಡಿಸಲು ನಾಲ್ಕೈದು ದಿನಗಳು ಬೇಕಾಗಬಹುದು. ರಾಜ್ಯದ ಹಲವೆಡೆ 16 ಕೋವಿಡ್ ಆಸ್ಪತ್ರೆಗಳಿಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಿದೆ. 12 ಆಸ್ಪತ್ರೆಗಳಿಗೆ ವಿದ್ಯುತ್ ಪೂರೈಕೆ ಆರಂಭಿಸಲಾಗಿದೆ. ಉಳಿದ ಆಸ್ಪತ್ರೆಗಳು ಜನರೇಟರ್ ವಿದ್ಯುತ್‌ನಲ್ಲಿಯೇ ಕಾರ್ಯ-ನಿರ್ವಹಿಸುತ್ತಿವೆ ಎಂದು ರಾಜ್ಯ ವಿಕೋಪ ನಿರ್ವಹಣಾ ಪಡೆ ಹೇಳಿದೆ.

1998ರ ಜೂನ್ 9ರಂದು ಅಪ್ಪಳಿಸಿದ್ದ ಚಂಡಮಾರುತಕ್ಕೆ ರಾಜ್ಯದಾದ್ಯಂತ 1,173 ಜನರು ಮೃತಪಟ್ಟಿದ್ದರು. ಅನಂತರ ಅತಿಹೆಚ್ಚು ಸಾವು ಮತ್ತು ಹಾನಿ ಮಾಡಿರುವುದು ತೌತೆ ಚಂಡಮಾರುತ.

16 ಜನರ ರಕ್ಷಣೆ: ಸಮುದ್ರದ ಮಧ್ಯೆ ಚಂಡಮಾರುತಕ್ಕೆ ಸಿಲುಕಿದ್ದ ಮೀನುಗಾರರು ಮತ್ತು ಮತ್ತೊಂದು ದೋಣಿಯೊಂದರ ಸಿಬ್ಬಂದಿಯನ್ನು ವಾಯಪಡೆಯು ರಕ್ಷಿಸಿದೆ.

ಇಲ್ಲಿನ ವೆರಾವಲ್ ಬಂದರಿನಲ್ಲಿ ಲಂಗರು ಹಾಕಿದ್ದ ಮೀನುಗಾರಿಕಾ ದೋಣಿಯೊಂದು ಚಂಡಮಾರುತಕ್ಕೆ ಸಿಲುಕಿ, ಕೊಚ್ಚಿಹೋಗಿತ್ತು. ಅದರಲ್ಲಿದ್ದ 8 ಮೀನುಗಾರರನ್ನು ಹೆಲಿಕಾಪ್ಟರ್ ಮೂಲಕ ಕಾರ್ಯಾಚರಣೆ ನಡೆಸಿ ರಕ್ಷಿಸಲಾಗಿದೆ. ಸತ್ಪತಿ ಕಡಲ ತೀರದಿಂದ ಕೊಚ್ಚಿ ಹೋಗಿದ್ದ ದೋಣಿಯೊಂದರಲ್ಲಿದ್ದ 8 ಸಿಬ್ಬಂದಿಯನ್ನು ಹೆಲಿಕಾಪ್ಟರ್ ಮೂಲಕ ರಕ್ಷಿಸಲಾಗಿದೆ ಎಂದು ಮೂಲಗಳು ಹೇಳಿವೆ.

ಮುಂಬೈನಲ್ಲಿ ದಾಖಲೆ ಮಳೆ: ಕಳೆದ 24 ಗಂಟೆಗಳಲ್ಲಿ ಮುಂಬೈನ ಕೊಲಾಬಾದಲ್ಲಿ 207 ಮಿ.ಮೀ., ಸಾಂತಾಕ್ರೂಜ್‌ನಲ್ಲಿ 230 ಮಿ.ಮೀ. ಮಳೆಯಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ. ಸೋಮವಾರ ಬಂದ್ ಆಗಿದ್ದ ಬಾಂದ್ರಾ–ವರ್ಲಿ ಸಿ–ಲಿಂಕ್ ಅನ್ನು ಮಂಗಳವಾರ ಮಧ್ಯಾಹ್ನ ಸಂಚಾರಕ್ಕೆ ಮುಕ್ತಗೊಳಿಸಲಾಯಿತು. ಮೊನೊರೈಲು ಸಂಪರ್ಕವೂ ಮಂಗಳವಾರ ಮಧ್ಯಾಹ್ನ 3 ಗಂಟೆಗೆ ಪುನರಾರಂಭವಾಯಿತು.

ಮುಂಜಾಗ್ರತೆ ಕ್ರಮವಾಗಿ ರತ್ನಗಿರಿ, ಸಿಂಧುದುರ್ಗ, ರಾಯಗಡ, ಠಾಣೆ ಮತ್ತು ಪಾಲ್ಘರ್ ಜಿಲ್ಲೆಗಳ ಒಟ್ಟು 13,389 ನಾಗರಿಕರನ್ನು ಸುರಕ್ಷಿತ ಸ್ಥಳಗಳಿಗೆ ಸ್ಥಳಾಂತರಿಸಲಾಗಿತ್ತು.

ಹಾನಿಯ ತೀವ್ರತೆ

- **16,500** ಹಾನಿಯಾದ ಮನೆಗಳ ಸಂಖ್ಯೆ
- **40,000** ನೆಲಕ್ಕುರುಳಿದ ಮರಗಳ ಸಂಖ್ಯೆ
- **1,081** ನೆಲಕಚ್ಚಿದ ವಿದ್ಯುತ್ ಕಂಬಗಳು
- **2,437** ವಿದ್ಯುತ್ ಪೂರೈಕೆ ಕಡಿತಗೊಂಡ ಗ್ರಾಮಗಳು
- **159** ಹಾನಿಯಾಗಿರುವ ರಸ್ತೆ-ಹೆದ್ದಾರಿಗಳು
- **196** ಮರ-ವಿದ್ಯುತ್ ಕಂಬ ಬಿದ್ದು ಸಂಚಾರ ಸ್ಥಗಿತವಾಗಿರುವ ರಸ್ತೆ-ಹೆದ್ದಾರಿಗಳು

ಬಾರ್ಜ್‌ನಲ್ಲಿದ್ದ 317 ಜನರ ರಕ್ಷಣೆ

ತೌತೆ ಚಂಡಮಾರುತದ ಹೊಡೆತದಿಂದ ಅರಬ್ಬಿ ಸಮುದ್ರದಲ್ಲಿ ಸಿಲುಕಿದ್ದ ಎರಡು ಬಾರ್ಜ್‌ಗಳಲ್ಲಿದ್ದ 317 ಜನರನ್ನು ನೌಕಾಪಡೆ ಮತ್ತು ಕರಾವಳಿ ಕಾವಲುಪಡೆಗಳು ಮಂಗಳವಾರ ರಕ್ಷಿಸಿವೆ. ಆದರೆ ಇನ್ನೂ 390 ಜನರು ಸಂಕಷ್ಟದಲ್ಲಿದ್ದು, ಅವರ ರಕ್ಷಣೆಗೆ ಕಾರ್ಯಾಚರಣೆ ನಡೆಯುತ್ತಿದೆ.

ಮೂರು ಬಾರ್ಜ್‌ಗಳು ಹಾಗೂ ಒಂದು ತೈಲ ಘಟಕದಲ್ಲಿ ಕೆಲಸ ಮಾಡುತ್ತಿದ್ದ ಒಟ್ಟು 707 ಜನರು ಸೋಮವಾರ ಸಂಕಷ್ಟಕ್ಕೆ ಸಿಲುಕಿದ್ದರು. ವಸತಿ ಸೌಕರ್ಯವಿದ್ದ ಪಿ–305 ಹೆಸರಿನ ಬಾರ್ಜ್‌ನಲ್ಲಿ 273 ಜನರಿದ್ದರು. ಜಿಎಎಲ್ ಕನ್‌ಸ್ಟ್ರಕ್ಟರ್ ಸರಕು ಸಾಗಣೆ ಬಾರ್ಜ್‌ನಲ್ಲಿ 137 ಜನರು ಇದ್ದರು. ವಸತಿ ಸೌಕರ್ಯವಿದ್ದ ಮತ್ತೊಂದು ಬಾರ್ಜ್ ಎಸ್‌ಎಸ್–3ನಲ್ಲಿ 196 ಜನ ಇದ್ದರು. ಜೊತೆಗೆ ಸಾಗರ್ ಭೂಷಣ್ ತೈಲ ಘಟಕದಲ್ಲಿ 101 ಜನ ಕೆಲಸ ಮಾಡುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಈ ಪೈಕಿ ಪಿ–305 ಬಾರ್ಜ್‌ನಿಂದ 180 ಜನರು ಹಾಗೂ ಜಿಎಎಲ್ ಕನ್‌ಸ್ಟ್ರಕ್ಟರ್ ಬಾರ್ಜ್‌ನಿಂದ 137 ಜನರನ್ನು ಈವರೆಗೆ ರಕ್ಷಣೆ ಮಾಡಲಾಗಿದೆ. ಎರಡು ಚೇತಕ್ ಹೆಲಿಕಾಪ್ಟರ್‌ಗಳು ಕಾರ್ಯೋನ್ಮುಖವಾಗಿದ್ದು, ಎಸ್‌ಎಸ್–3 ಮತ್ತು ಸಾಗರ್ ಭೂಷಣ್ ತೈಲ ಘಟಕದಲ್ಲಿ ಸಿಲುಕಿದವರ ರಕ್ಷಣೆಗೆ ಕಾರ್ಯಾಚರಣೆ ನಡೆಯುತ್ತಿದೆ.

ನೌಕಾಪಡೆಯ ಹಡಗುಗಳಾದ ಐಎನ್‌ಎಸ್ ಬಿಯಾಸ್, ಐಎನ್‌ಎಸ್ ಬೆಟ್ವಾ ಮತ್ತು ಐಎನ್‌ಎಸ್ ತೇಗ್‌ಗಳು ಮುಂಬೈನಿಂದ 35 ನಾಟಿಕಲ್ ಮೈಲು ದೂರದಲ್ಲಿ ಮುಳುಗಿರುವ ಬಾರ್ಜ್ ಪಿ–305ಗಾಗಿ ಹುಡುಕಾಟ ನಡೆಸುತ್ತಿದ್ದು, ಐಎನ್‌ಎಸ್ ಕೊಚ್ಚಿ ಮತ್ತು ಐಎನ್‌ಎಸ್ ಕೋಲ್ಕತ್ತಾ ನೌಕೆಗಳಿಗೆ ನೆರವಾಗುತ್ತಿವೆ. ಪಿ8ಐ ಮತ್ತು ನೌಕಾ ಹೆಲಿಕಾಪ್ಟರ್‌ಗಳು ಈ ಪ್ರದೇಶದಲ್ಲಿ ವೈಮಾನಿಕ ಶೋಧ ಮುಂದುವರಿಸಿವೆ.

ಕೋವಿಶೀಲ್ಡ್ ಎರಡನೇ ಡೋಸ್ ಅಂತರದ ಬಗ್ಗೆ ಚಿಂತೆ ಬೇಡ: ತಜ್ಞರ ಅಭಿಮತ

ಮೊದಲ ಡೋಸ್ 6 ತಿಂಗಳವರೆಗೆ ಪರಿಣಾಮಕಾರಿ

ನವದೆಹಲಿ: ನಾಲ್ಕರಿಂದ ಆರು ವಾರಗಳು, ಆರರಿಂದ ಎಂಟು ವಾರಗಳು ಅಥವಾ 8ರಿಂದ 12 ವಾರಗಳು? ದೇಶದಲ್ಲಿ ಕೋವಿಶೀಲ್ಡ್ ಲಸಿಕೆಯ ಎರಡನೇ ಡೋಸ್‌ನ ಅಂತರದ ಬಗ್ಗೆ ಜನರ ಗೊಂದಲಗಳಿಗೆ ತೆರೆ ಎಳೆದಿರುವ ತಜ್ಞರು, ಕೋವಿಶೀಲ್ಡ್‌ನ ಮೊದಲ ಡೋಸ್ ಆರು ತಿಂಗಳ ಕಾಲ ಪರಿಣಾಮಕಾರಿಯಾಗಿರುತ್ತದೆ ಎಂದಿದ್ದಾರೆ.

ಅಲ್ಲದೇ, ಆರು ತಿಂಗಳ ಮೊದಲು ಯಾವುದೇ ಸಮಯದಲ್ಲಿ ಎರಡನೇ ಡೋಸ್ ಅನ್ನು ಪಡೆಯಬಹುದು ಎಂದೂ ತಜ್ಞರು ತಿಳಿಸಿದ್ದಾರೆ.

ಕೇಂದ್ರ ಸರ್ಕಾರವು ಕಳೆದ ವಾರ ಕೋವಿಶೀಲ್ಡ್ ಲಸಿಕೆಯ ಎರಡನೇ ಡೋಸ್‌ನ ಅಂತರವನ್ನು 12ರಿಂದ 16 ವಾರಗಳಿಗೆ ವಿಸ್ತರಿಸಿತ್ತು. ಇದಕ್ಕೂ ಮುನ್ನ ಎಂಟು ವಾರಗಳ ಅಂತರವಿತ್ತು.

‘ಲಸಿಕೆಗಳ ಕೊರತೆ ಹಾಗೂ ಅನೇಕ ರಾಜ್ಯಗಳಿಗೆ ಲಸಿಕೆ ಸರಬರಾಜಿನ ಕೊರತೆ ಇರುವ ಕಾರಣ ಭಾರತವು ಅಂತರವನ್ನು ಹೆಚ್ಚಿಸಿದೆ ಎನ್ನುವ ಕಳವಳಕ್ಕೆ ಪ್ರತಿಕ್ರಿಯಿಸಿರುವ ರೋಗನಿರೋಧಕ ತಜ್ಞ ಸತ್ಯಜಿತ್ ರಾತ್ ಅವರು, ‘ಲಸಿಕೆಯ ಮೊದಲ ಡೋಸ್ ಸಾಕಷ್ಟು ಹೊಂದಿಕೊಳ್ಳುವ ಗುಣ ಹೊಂದಿದೆ. ಮೊದಲ ಡೋಸ್ ಪಡೆದ 4 ವಾರಗಳ ನಂತರ ಆರು ತಿಂಗಳೊಳಗೆ ಯಾವಾಗ ಬೇಕಾದರೂ ಎರಡನೇ ಡೋಸ್ ಅನ್ನು ಪಡೆಯಬಹುದು’ ಎಂದಿದ್ದಾರೆ.



ವಿಜ್ಞಾನಿಗಳು, ‘ಲಸಿಕೆಯ ಡೋಸ್‌ಗಳನ್ನು ಯಾವಾಗ ತೆಗೆದುಕೊಂಡರೂ ಅವು ಸುರಕ್ಷಿತವಾಗಿರುತ್ತವೆ. ಆದರೆ, ಮೊದಲ ಡೋಸ್ ಪಡೆದ ಒಂದು ತಿಂಗಳೊಳಗೆ ಎರಡನೇ ಡೋಸ್ ಪಡೆದರೆ ಅದು ಅಷ್ಟೊಂದು ಪರಿಣಾಮಕಾರಿಯಾಗಿರುವುದಿಲ್ಲ’ ಎಂದಿದ್ದಾರೆ.

‘ಹಾಗಾಗಿ, ಲಸಿಕೆಯ ಮೊದಲ ಡೋಸ್ ಪಡೆದ ಕನಿಷ್ಠ ನಾಲ್ಕು ವಾರಗಳ ನಂತರ ಅಥವಾ ಆರು ತಿಂಗಳೊಳಗೆ ಯಾವಾಗಲಾದರೂ ಎರಡನೇ ಡೋಸ್ ಅನ್ನು ಪಡೆಯಬಹುದು. ಇದನ್ನು ಸಾಕ್ಷ್ಯಗಳ ಆಧಾರ ಮೇಲೆ ಶಿಫಾರಸು ಮಾಡಲಾಗುತ್ತಿದೆ’ ಎಂದು ನವದೆಹಲಿಯ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಆಫ್ ಇಮ್ಯುನಾಲಜಿ (ಎನ್‌ಐಐ)ನ ರೋಗನಿರೋಧಕ ತಜ್ಞ ಸತ್ಯಜಿತ್ ರಾತ್ ತಿಳಿಸಿದ್ದಾರೆ.

ಭಾರತವು ಎರಡನೇ ಡೋಸ್‌ನ ಅಂತರವನ್ನು ಹೆಚ್ಚಿಸುತ್ತಿದ್ದಂತೆಯೇ ಬ್ರಿಟನ್‌ನಲ್ಲಿ ಕೋವಿಶೀಲ್ಡ್ ಡೋಸ್‌ನ ಅಂತರವನ್ನು ಕಡಿಮೆಗೊಳಿಸಲಾಗಿರುವುದನ್ನು ಉಲ್ಲೇಖಿಸಿರುವ ರೋಗನಿರೋಧ ತಜ್ಞೆ ವಿನೀತಾ ಬಾಲ್, ‘ಈ ನಿರ್ಧಾರಗಳನ್ನು ಅಲ್ಲಿನ ವಾಸ್ತವಿಕ ಅಂಶಗಳ ಆಧಾರದ ಮೇಲೆ ಕೈಗೊಳ್ಳಲಾಗುತ್ತದೆ. ಇದು ರೂಪಾಂತರಿ ವೈರಾಣುವನ್ನು ಉತ್ತಮವಾಗಿ ನಿರ್ವಹಿಸಬಲ್ಲದೇ ಎಂಬ ಬಗ್ಗೆ ಹೌದು ಅಥವಾ ಇಲ್ಲ ಎನ್ನುವ ಉತ್ತರವಿಲ್ಲ’ ಎಂದು ಹೇಳಿದ್ದಾರೆ.

ಇನ್ನು ಪ್ಲಾಸ್ಮಾ ಥೆರಪಿ ಬಳಕೆ ಇಲ್ಲ

ನವದೆಹಲಿ: ದೇಶದಲ್ಲಿ ಕೋವಿಡ್ 19 ಚಿಕಿತ್ಸೆಗೆ ಸಂಬಂಧಿಸಿ ನಿಯಮಾವಳಿಗಳನ್ನು ಸರ್ಕಾರ ಸೋಮವಾರ ಪರಿಷ್ಕರಿಸಿದ್ದು, ಪ್ರಸ್ತುತ ಬಳಕೆಯಲ್ಲಿದ್ದ ಪ್ಲಾಸ್ಮಾ ಥೆರಪಿಯನ್ನು ಕೈಬಿಟ್ಟಿದೆ.

ಪ್ಲಾಸ್ಮಾ ಚಿಕಿತ್ಸೆ ವಿಧಾನದಿಂದ ಕೋವಿಡ್ ರೋಗ ಗುಣಪಡಿಸುವುದರಲ್ಲಿ ಹೆಚ್ಚಿನ ಪ್ರಯೋಜನವಿಲ್ಲದೇ ಇರುವುದರಿಂದ ಸರ್ಕಾರ ಈ ನಿರ್ಧಾರ ಕೈಗೊಂಡಿದೆ.

ಶೇ 2ಕ್ಕಿಂತಲೂ ಕಡಿಮೆ ಪ್ರಮಾಣದಲ್ಲಿ ಸೋಂಕು

ನವದೆಹಲಿ: ಭಾರತದಲ್ಲಿ ಇದುವರೆಗೆ ಒಟ್ಟು ಜನಸಂಖ್ಯೆಯ ಶೇ 2ಕ್ಕಿಂತಲೂ ಕಡಿಮೆ ಜನರು ಕೊರೊನಾ ಸೋಂಕಿಗೀಡಾಗಿದ್ದು, ಉಳಿದ ಶೇ 98ರಷ್ಟು ಜನರು ಸೋಂಕಿಗೆ ಒಳಗಾಗುವ ಸಾಧ್ಯತೆ ಇದೆ ಎಂದು ಕೇಂದ್ರ ಸರ್ಕಾರ ಮಂಗಳವಾರ ಹೇಳಿದೆ.

‘ಇಲ್ಲಿಯವರೆಗೆ ಹೆಚ್ಚಿನ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗಿದ್ದರೂ, ಇದರ ಪ್ರಮಾಣ ಒಟ್ಟು ಜನಸಂಖ್ಯೆಯ ಶೇ 2ಕ್ಕಿಂತಲೂ ಕಡಿಮೆ. ಅಂದರೆ ಶೇ 1.8ರಷ್ಟು ಜನರು ಮಾತ್ರ ಕೋವಿಡ್ ಸೋಂಕಿಗೆ ತುತ್ತಾಗಿದ್ದಾರೆ’ ಎಂದು ಆರೋಗ್ಯ ಸಚಿವಾಲಯದ ಜಂಟಿ ಕಾರ್ಯದರ್ಶಿ ಲವ್ ಅಗರ್‌ವಾಲ್ ತಿಳಿಸಿದ್ದಾರೆ.

270 ವೈದ್ಯರ ಸಾವು: ಐಎಂಎ

ನವದೆಹಲಿ: ‘ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ದೇಶದಾದ್ಯಂತ ಈವರೆಗೆ 270 ವೈದ್ಯರು ಸೋಂಕಿನಿಂದ ಮೃತಪಟ್ಟಿದ್ದಾರೆ’ ಎಂದು ಭಾರತೀಯ ವೈದ್ಯಕೀಯ ಸಂಘ(ಐಎಂಎ) ಮಂಗಳವಾರ ಹೇಳಿದೆ.

ಸೋಂಕಿನಿಂದ ಸಾವಿಗೀಡಾದ ವೈದ್ಯರಲ್ಲಿ ಐಎಂಎ ಮಾಜಿ ಅಧ್ಯಕ್ಷ ಡಾ.ಕೆ.ಕೆ ಅಗರವಾಲ್ ಕೂಡ ಒಬ್ಬರು. ಕೆ.ಕೆ ಅಗರವಾಲ್ ಅವರು ಸೋಮವಾರ ನಿಧನರಾದರು.

‘ಬಿಹಾರದಲ್ಲಿ 78 ವೈದ್ಯರು ಸೋಂಕಿನಿಂದ ಮೃತಪಟ್ಟಿದ್ದಾರೆ. ಉತ್ತರ ಪ್ರದೇಶ, ದೆಹಲಿ ಮತ್ತು ಆಂಧ್ರಪ್ರದೇಶದಲ್ಲಿ ಕ್ರಮವಾಗಿ 37, 29 ಮತ್ತು 22 ವೈದ್ಯರು ಸಾವಿಗೀಡಾಗಿದ್ದಾರೆ. ಕೋವಿಡ್ ಮೊದಲ ಅಲೆ ವೇಳೆ 748 ವೈದ್ಯರು ಸೋಂಕಿಗೆ ಬಲಿಯಾಗಿದ್ದರು’ ಎಂದು ಐಎಂಎ ಮಾಹಿತಿ ನೀಡಿದೆ.

ಗುಣಮಟ್ಟದ ಖಾತರಿಗೆ ಕುಡಿಯುವ ನೀರು ಪರೀಕ್ಷೆ

ನವದೆಹಲಿ: ಕುಡಿಯುವ ಉದ್ದೇಶಕ್ಕಾಗಿ ಗ್ರಾಮಗಳಿಗೆ ಪೂರೈಸುತ್ತಿರುವ ನೀರು ಗುಣಮಟ್ಟದ್ದಾಗಿದೆ ಎಂಬುದರ ಖಾತರಿಗಾಗಿ ನೀರಿನ ಗುಣಮಟ್ಟದ ಪರೀಕ್ಷೆ ನಡೆಸಬೇಕು ಎಂದು ಕೇಂದ್ರ ಜಲಶಕ್ತಿ ಸಚಿವಾಲಯ ಸೂಚನೆ ನೀಡಿದೆ.

ಕೋವಿಡ್ ಪರಿಸ್ಥಿತಿಯ ಹಿನ್ನೆಲೆಯಲ್ಲಿ ರಾಷ್ಟ್ರೀಯ ಜಲಜೀವನ ಮಿಷನ್ (ಎನ್‌ಜೆಜೆಎಂ) ಇದಕ್ಕೆ ಸಂಬಂಧಿಸಿದಂತೆ ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳಿಗೆ ಪತ್ರ ಬರೆದಿದೆ.

ದೇಶದಾದ್ಯಂತ ಎಲ್ಲ ಗ್ರಾಮಗಳಲ್ಲಿ ನೀರಿನ ಪರೀಕ್ಷೆ ನಡೆಸಬೇಕು. ಸಾರ್ವಜನಿಕರು ಮತ್ತು ಸಾರ್ವಜನಿಕ ಸಂಸ್ಥೆಗಳಿಗೆ ಗುಣಮಟ್ಟದ ನೀರು ಪೂರೈಕೆಯಾಗುತ್ತಿದೆ ಎಂಬ ಬಗ್ಗೆ ಕ್ರಮವಹಿಸಬೇಕು ಎಂದು ಸಲಹೆ ಮಾಡಿದೆ.

ಹಲವು ನದಿಗಳಲ್ಲಿ ಮುಖ್ಯವಾಗಿ ಉತ್ತರ ಪ್ರದೇಶ ಮತ್ತು ಬಿಹಾರದಲ್ಲಿ ಶವಗಳು ಹಾಗೂ ಭಾಗಶಃ ಸುಟ್ಟ ದೇಹಗಳು ತೇಲುತ್ತಿವೆ ಎಂಬ ಬೆಳವಣಿಗೆಯ ಹಿಂದೆಯೇ ಸಚಿವಾಲಯದ ಈ ಸಲಹೆ ಹೊರಬಿದ್ದಿದೆ.

ನದಿಯಲ್ಲಿ ಹೆಣಗಳು ತೇಲುತ್ತಿರುವ ಪ್ರಕರಣ ವರದಿಯಾದ ಬಳಿಕ, ಇದರಿಂದಾಗಿ ನೀರು ಕಲುಷಿತಗೊಂಡು ಸಾಂಕ್ರಾಮಿಕ ರೋಗ ಹರಡಬಹುದು ಎಂದು ಆರೋಗ್ಯ ಪರಿಣತರು ಎಚ್ಚರಿಸಿದ್ದರು.

ಕೋವಿಡ್ ಹಿನ್ನೆಲೆಯಲ್ಲಿ ಸಾರ್ವಜನಿಕ ಆರೋಗ್ಯದ ಸುರಕ್ಷತೆಯ ದೃಷ್ಟಿಯಿಂದ ಗುಣಮಟ್ಟದ ನೀರು ಪೂರೈಕೆಯನ್ನು ಖಾತರಿಪಡಿಸಿಕೊಳ್ಳುವುದು ಅಗತ್ಯ. ಸ್ಯಾನಿಟೈಸ್ ವ್ಯವಸ್ಥೆ ಉತ್ತಮಪಡಿಸುವುದು ಮತ್ತು ಸ್ವಚ್ಛತೆಯನ್ನು ಕಾಪಾಡಿಕೊಳ್ಳುವುದು ಅವಶ್ಯ ಎಂದು ಸಚಿವಾಲಯವು ಅಭಿಪ್ರಾಯಪಟ್ಟಿದೆ.

ಚಿದಂಬರಂ ವಿರುದ್ಧ ವಿಚಾರಣೆಗೆ ದೆಹಲಿ ಹೈಕೋರ್ಟ್ ತಡೆ

ನವದೆಹಲಿ (ಪಿಟಿಐ): ಐಎನ್‌ಎಕ್ಸ್ ಮೀಡಿಯಾ ಭ್ರಷ್ಟಾಚಾರ ಪ್ರಕರಣದಲ್ಲಿ ಕಾಂಗ್ರೆಸ್ ಮುಖಂಡ ಪಿ.ಚಿದಂಬರಂ ಹಾಗೂ ಪುತ್ರ ಕಾರ್ತಿ ಅವರ ಪಾತ್ರ ಕುರಿತು ಸಿಬಿಐ ತನಿಖೆ ನಡೆಸುತ್ತಿದ್ದು, ಈ ಸಂಬಂಧ ಕೆಳ ನ್ಯಾಯಾಲಯ ನಡೆಸುತ್ತಿರುವ ವಿಚಾರಣೆಗೆ ದೆಹಲಿ ಹೈಕೋರ್ಟ್ ಮಂಗಳವಾರ ತಡೆ ನೀಡಿದೆ.

ಆರೋಪಿತರಿಗೆ ದಾಖಲೆಗಳನ್ನು ಒದಗಿಸುವಂತೆ ವಿಚಾರಣಾ ನ್ಯಾಯಾಲಯ ನೀಡಿದ್ದ ನಿರ್ದೇಶನವನ್ನು ಪ್ರಶ್ನಿಸಿ ಸಿಬಿಐ ಮೇಲ್ಮನವಿ ಸಲ್ಲಿಸಿದೆ. ಈ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡುವಂತೆ ಸೂಚಿಸಿ ನ್ಯಾಯಮೂರ್ತಿ ಸುರೇಶಕುಮಾರ್ ಕೈಟ್ ಅವರು ಚಿದಂಬರಂ ಹಾಗೂ ಇತರರಿಗೆ ನೋಟಿಸ್ ನೀಡಿದ್ದಾರೆ.

‘ಸ್ಪುಟ್ನಿಕ್ ವಿ’ ಉತ್ಪಾದನೆ, ‘ಅವಕಾಶ’ವಾಗಿ ಪರಿಗಣಿಸಿ

ಅಧಿಕಾರಿಗಳು ‘ದಂತ ಗೋಪುರ’ಗಳಲ್ಲಿ ಬದುಕುತ್ತಿದ್ದಾರಾ: ಹೈಕೋರ್ಟ್ ಪ್ರಶ್ನೆ

ನವದೆಹಲಿ (ಪಿಟಿಐ): ‘ಪ್ರಸ್ತುತ ಕೋವಿಡ್–19 ಬಹುತೇಕ ಪ್ರತಿಯೊಂದು ಕುಟುಂಬವನ್ನು ಬಾಧಿಸುತ್ತಿದೆ. ಆದರೂ, ಕೇಂದ್ರ ಸರ್ಕಾರದ ಅಧಿಕಾರಿಗಳು ವಾಸ್ತವದ ಅರಿವೇ ಇಲ್ಲದೇ ಇನ್ನೂ ‘ದಂತ ಗೋಪುರ’ಗಳಲ್ಲಿ ಜೀವಿಸುತ್ತಿದ್ದಾರೆ’ ಎಂದು ದೆಹಲಿ ಹೈಕೋರ್ಟ್ ಮಂಗಳವಾರ ಚಾಟಿ ಬೀಸಿದೆ.

ಹಲವರ ಜೀವ, ಜೀವನ ಕಸಿಯುತ್ತಿರುವ ಕೋವಿಡ್ ಪಿಡುಗು ಎದುರಿಸಲು ಸ್ಪಂದಿಸದ ಕೇಂದ್ರ ಸರ್ಕಾರವನ್ನು ಉದ್ದೇಶಿಸಿ ನ್ಯಾಯಮೂರ್ತಿಗಳಾದ ಮನ್‌ಮೋಹನ್ ಮತ್ತು ನವೀನ್ ಚಾವ್ಲಾ ಅವರಿದ್ದ ಪೀಠವು ‘ದೇವರೇ ಈ ದೇಶವನ್ನು ಕಾಪಾಡಬೇಕು’ ಎಂದು ಅಭಿಪ್ರಾಯ ವ್ಯಕ್ತಪಡಿಸಿತು.

‘ಲಸಿಕೆ ಕೊರತೆ ಎದುರಿಸುತ್ತಿರುವ ವೇಳೆಯಲ್ಲಿ ಭಾರತದಲ್ಲಿ ‘ಸ್ಪುಟ್ನಿಕ್ ವಿ’ ಲಸಿಕೆ ಉತ್ಪಾದನೆಯನ್ನು ಒಂದು ಅವಕಾಶ ಎಂದು ಪರಿಗಣಿಸಬೇಕು ಎಂದು ಪೀಠ ಹೇಳಿತು. ದೆಹಲಿ ಮೂಲದ ಪನೇಷಿಯಾ ಬಯೊಟೆಕ್ ಸಂಸ್ಥೆ ಜುಲೈ 2020ರ ಆದೇಶದ ಮಾರ್ಪಾಡು ಕೋರಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ಪೀಠ ಈ ಅಭಿಪ್ರಾಯ ವ್ಯಕ್ತಪಡಿಸಿತು.

ದೇಶದ ಪನೇಷಿಯಾ ಬಯೊಟೆಕ್ ಮತ್ತು ರಷ್ಯಾದ ಡೈರೆಕ್ಟ್ ಇನ್‌ವೆಸ್ಟ್‌ಮೆಂಟ್ ಫಂಡ್ (ಆರ್‌ಡಿಐಎಫ್) ನಡುವೆ ‘ಸ್ಪುಟ್ನಿಕ್ ವಿ’ ಲಸಿಕೆ ಉತ್ಪಾನೆಗೆ ಸಹಭಾಗಿತ್ವ ಮೂಡಿರುವುದನ್ನು ಒಂದು ಅವಕಾಶ. ಇಂಥ ಸಂದರ್ಭದಲ್ಲಿ ಉನ್ನತ ಅಧಿಕಾರಿಗಳಿಂದ 30 ನಿಮಿಷದಲ್ಲಿಯೇ ಅನುಮತಿ ಸಿಗುವಂತಾಗಬೇಕು ಎಂದು ಪೀಠ ಹೇಳಿತು.

‘ಯಾರೂ ಈ ಬಗ್ಗೆ ಚಿಂತನೆ ನಡೆಸುತ್ತಿಲ್ಲ. ಲಕ್ಷಾಂತರ ಲಸಿಕೆ ಪಡೆಯುವ ಅವಕಾಶ ಸರ್ಕಾರಕ್ಕೆ ಇದೆ. ಇದನ್ನು ಒಂದು ಅವಕಾಶವಾಗಿ ನೋಡಬೇಕು. ಒಂದು ವೇಳೆ ಇದು ಆಗದಿದ್ದರೆ ಸಾವುಗಳು ಸಂಭವಿಸುತ್ತಲೇ ಇರುತ್ತವೆ. ನಿತ್ಯ ಒಂದಲ್ಲ ಒಂದು ಕೋರ್ಟ್‌ಗಳು ಚಾಟಿ ಬೀಸುತ್ತಿದ್ದರೂ ನೀವು ಇನ್ನೂ ಎಚ್ಚೆತ್ತುಕೊಂಡಿಲ್ಲ’ ಎಂದು ಕಟುವಾಗಿ ಹೇಳಿತು.

‘ಯಾವ ಅಧಿಕಾರಿ ನಿಮಗೆ ಸೂಚನೆ ಕೊಡುತ್ತಿದ್ದಾರೆ. ಅವರು ವಾಸ್ತವದಲ್ಲಿ ಜೀವಿಸುತ್ತಿದ್ದಾರಾ? ದೇಶವನ್ನು ದೇವರೇ ಕಾಪಾಡಬೇಕು. ಅದಕ್ಕೆ ಇಂಥ ಸ್ಥಿತಿ ಎದುರಿಸುತ್ತಿದ್ದೇವೆ. ದೇಶದಲ್ಲಿ ಈಗ ಲಸಿಕೆಯ ಕೊರತೆ ಇದೆ. ಸಾಕಷ್ಟು ಸಾವುಗಳು ಸಂಭವಿಸುತ್ತಿವೆ ಎಂಬುದನ್ನು ನಿಮ್ಮ ಅಧಿಕಾರಿ ನೋಡುತ್ತಿಲ್ಲವೇ?’ ಎಂದು ಪ್ರಶ್ನಿಸಿತು.

‘ಕೇಂದ್ರ ಸರ್ಕಾರದ ನಿಲುವು ಕುರಿತು ಕಟುವಾಗಿ ಟೀಕಿಸಿದ ಪೀಠವು, ‘ನಿಮ್ಮಲ್ಲಿ (ಸರ್ಕಾರ) ಲಸಿಕೆ ಕಡಿಮೆ ಇದೆ. ಆದರೂ ತೀರ್ಮಾನ ತೆಗೆದುಕೊಳ್ಳುತ್ತಿಲ್ಲ. ನಕಾರಾತ್ಮಕವಾಗಿ ಇರಬೇಡಿ. ಬೆಂಕಿ ವ್ಯಾಪಿಸುತ್ತಿದ್ದರೂ ಯಾರೂ ಗಮನಹರಿಸಿದಂತಿಲ್ಲ ನಿಮಗೆ ವಿಸ್ತೃತ ಚಿತ್ರಣವೇ ಅರ್ಥವಾಗುತ್ತಿಲ್ಲವೇ?’ ಎಂದು ಖಾರವಾಗಿ ಪ್ರಶ್ನಿಸಿತು.

2010ರಲ್ಲಿ ಎಚ್1ಎನ್1ಗೆ ಔಷಧ ಉತ್ಪಾದನೆಗೆ ಸಂಬಂಧಿಸಿ ಪನೇಷಿಯಾ ಬಯೊಟೆಕ್ ಪರವಾಗಿ ಮಧ್ಯಸ್ಥಿಕೆ ನ್ಯಾಯಮಂಡಳಿಯು ಆದೇಶ ನೀಡಿತ್ತು. ಈ ಕುರಿತು ಸಲ್ಲಿಸಿದ ಅರ್ಜಿಯಲ್ಲಿ ಪನೇಷಿಯಾ ಬಯೊಟೆಕ್ ಸಂಸ್ಥೆ, ‘ಸ್ಪುಟ್ನಿಕ್ ವಿ ಲಸಿಕೆಯ ಉತ್ಪಾದನೆ ಆರಂಭವಾಗಿದ್ದು, ಚುರುಕುಗೊಳಿಸಬೇಕಿದೆ’ ಎಂದು ತಿಳಿಸಿತ್ತು.

ಈ ಸಂಬಂಧ ಕೇಂದ್ರಕ್ಕೆ ನೋಟಿಸ್ ನೀಡಿದ ಪೀಠವು, ಮನವಿಯನ್ನು ಪರಿಶೀಲಿಸಬೇಕು ಮತ್ತು ಒಂದು ವಾರದಲ್ಲಿ ಪ್ರತಿಕ್ರಿಯೆ ದಾಖಲಿಸಬೇಕು ಎಂದು ತಿಳಿಸಿತು. ಪ್ರಕರಣದ ವಿಚಾರಣೆಯನ್ನು ಮೇ 31ಕ್ಕೆ ನಿಗದಿಪಡಿಸಿತು.

ಪಂಜಾಬ್–ಹರಿಯಾಣ ಹೈಕೋರ್ಟ್ ಅಭಿಮತ

‘ಮದುವೆಯಾಗದೇ ಒಟ್ಟಿಗೆ ಇರುವುದನ್ನು ಒಪ್ಪಲಾಗದು’

ಚಂಡೀಗಡ (ಪಿಟಿಐ): ‘ಮದುವೆಯಾಗದೇ ಒಟ್ಟಿಗೆ ಬದುಕುವುದನ್ನು ಸಾಮಾಜಿಕವಾಗಿ ಹಾಗೂ ನೈತಿಕವಾಗಿ ಒಪ್ಪಲಾಗದು’ ಎಂದು ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್ ಹೇಳಿದೆ.

ಗುಲ್ಜಾಕುಮಾರಿ (19) ಹಾಗೂ ಗುರ್ವಿಂದರ್ ಸಿಂಗ್ (22) ಎಂಬುವವರು ಸಲ್ಲಿಸಿದ್ದ ಅರ್ಜಿಯ ವಿಚಾರಣೆ ವೇಳೆ ನ್ಯಾಯಮೂರ್ತಿ ಎಚ್.ಎಸ್.ಮದಾನ್ ಈ ಅಭಿಪ್ರಾಯ ವ್ಯಕ್ತಪಡಿಸಿದರು.

‘ನಾವು ಮದುವೆಯಾಗಲು ಬಯಸಿದ್ದೇವೆ. ಗುಲ್ಜಾಕುಮಾರಿ ಪಾಲಕರಿಂದ ನಮ್ಮ ಜೀವಕ್ಕೆ ಅಪಾಯ ಇದೆ. ಹೀಗಾಗಿ ರಕ್ಷಣೆ ನೀಡಬೇಕು’ ಎಂದು ಕೋರಿ ಅವರು ಸಲ್ಲಿಸಿದ್ದರು.



‘ಅರ್ಜಿದಾರರು ಒಟ್ಟಿಗೆ ಬದುಕುತ್ತಿದ್ದು, ಅದಕ್ಕೆ ಅನುಮೋದನೆ ನೀಡಬೇಕು ಎಂದು ಅವರು ಈ ಅರ್ಜಿ ಮೂಲಕ ಕೋರಿದ್ದಾರೆ. ಅವರು ಒಟ್ಟಿಗೆ ಇರುವುದನ್ನು ಸಾಮಾಜಿಕವಾಗಿ ಹಾಗೂ ನೈತಿಕವಾಗಿ ಒಪ್ಪಲಾಗದು. ಅವರಿಗೆ ರಕ್ಷಣೆ ನೀಡುವಂತೆ ಸೂಚಿಸಿ ಆದೇಶ ಹೊರಡಿಸಲು ಸಾಧ್ಯವಿಲ್ಲ’ ಎಂದು ಹೇಳಿದ ನ್ಯಾಯಮೂರ್ತಿ ಮದಾನ್, ಅರ್ಜಿಯನ್ನು ವಜಾಗೊಳಿಸಿದರು.

ಅರ್ಜಿದಾರರ ಪರ ವಕೀಲ ಜೆ.ಎಸ್.ಠಾಕೂರ್,‘ ಗುಲ್ಜಾಕುಮಾರಿ ಹಾಗೂ ಗುರ್ವಿಂದರ್ ಸಿಂಗ್ ತರ್ನ್ ತರನ್ ಜಿಲ್ಲೆಯಲ್ಲಿ ಒಟ್ಟಿಗೆ ಬದುಕುತ್ತಿದ್ದಾರೆ. ಕುಮಾರಿ ಅವರ ಪಾಲಕರು ಲೂಧಿಯಾನದಲ್ಲಿ ಇರುತ್ತಾರೆ. ಇವರಿಬ್ಬರ ನಡುವಿನ ಸಂಬಂಧಕ್ಕೆ ಕುಮಾರಿ ಪಾಲಕರ ಸಹಮತ ಇಲ್ಲ’ ಎಂದು ಹೈಕೋರ್ಟ್ ಗಮನಕ್ಕೆ ತಂದರು.

‘ಕುಮಾರಿಯ ವಯಸ್ಸು ಹಾಗೂ ಇತರ ವೈಯಕ್ತಿಕ ವಿವರಗಳಿಗೆ ಸಂಬಂಧಿಸಿದ ದಾಖಲೆಗಳು ಆಕೆಯ ಕುಟುಂಬದ ಬಳಿ ಇರುವ ಕಾರಣ, ಈ ಜೋಡಿ ಮದುವೆಯಾಗಲು ಸಾಧ್ಯವಾಗಿಲ್ಲ’ ಎಂದೂ ಠಾಕೂರ್ ವಾದಿಸಿದರು.

ಸಿಬಿಎಸ್‌ಇ: ಫಲಿತಾಂಶ ಇನ್ನಷ್ಟು ವಿಳಂಬ

ನವದೆಹಲಿ (ಪಿಟಿಐ): ಶಾಲೆಗಳು 10ನೇ ತರಗತಿ ವಿದ್ಯಾರ್ಥಿಗಳ ಮೌಲ್ಯಾಂಕನ ಪಟ್ಟಿಯನ್ನು ಕಳುಹಿಸಬೇಕಾದ ಅವಧಿಯನ್ನು ಜೂನ್ 30ರವರೆಗೆ ಕೇಂದ್ರ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯು (ಸಿಬಿಎಸ್‌ಇ) ವಿಸ್ತರಿಸಿದೆ.

ಸಿಬಿಎಸ್‌ಇ ಇದಕ್ಕೂ ಮೊದಲು ಮೌಲ್ಯಾಂಕನದ ಇಡೀ ಪ್ರಕ್ರಿಯೆಯನ್ನು ಜೂನ್ 11ರೊಳಗೆ ಪೂರ್ಣಗೊಳಿಸಬೇಕು ಮತ್ತು ಫಲಿತಾಂಶವನ್ನು ಜೂನ್ 20ರಂದು ಪ್ರಕಟಿಸಲಾಗುವುದು ಎಂದು ಪ್ರಕಟಿಸಿತ್ತು. ಕೋವಿಡ್ ಕಾರಣದಿಂದ ವಿವಿಧ ರಾಜ್ಯಗಳಲ್ಲಿ ಲಾಕ್‌ಡೌನ್ ಪ್ರಕ್ರಿಯೆ ಜಾರಿಯಲ್ಲಿರುವುದು ಹಾಗೂ ಶಿಕ್ಷಕರು ಮತ್ತು ಶಾಲೆ ಸಿಬ್ಬಂದಿಯ ಸುರಕ್ಷತೆ ಗಮನದಲ್ಲಿ ಇರಿಸಿಕೊಂಡು ಈ ಕ್ರಮ ತೆಗೆದುಕೊಳ್ಳಲಾಗಿದೆ ಎಂದು ತಿಳಿಸಿದೆ.

ಪರಮ್‌ವೀರ್‌ಸಿಂಗ್ ಅರ್ಜಿ ವಿಚಾರಣೆ: ಹಿಂದೆ ಸರಿದ ನ್ಯಾಯಮೂರ್ತಿ ಗವಾಯಿ

ನವದೆಹಲಿ (ಪಿಟಿಐ): ತಮ್ಮ ವಿರುದ್ಧದ ಎಲ್ಲ ವಿಚಾರಣೆಗಳನ್ನು ಮಹಾರಾಷ್ಟ್ರದ ಹೊರಗಡೆಯ ಸ್ವತಂತ್ರ ಸಂಸ್ಥೆಯೊಂದಕ್ಕೆ ವರ್ಗಾಯಿಸಬೇಕು ಎಂದು ಕೋರಿ ಮುಂಬೈನ ಮಾಜಿ ಪೊಲೀಸ್ ಕಮಿಷನರ್ ಪರಮ್ ವೀರ್ ಸಿಂಗ್ ಅವರು ಸಲ್ಲಿಸಿರುವ ಅರ್ಜಿಯ ವಿಚಾರಣೆಯಿಂದ ಸುಪ್ರೀಂಕೋರ್ಟ್ ನ್ಯಾಯಮೂರ್ತಿ ಬಿ.ಆರ್.ಗವಾಯಿ ಮಂಗಳವಾರ ಹಿಂದೆ ಸರಿದರು.

ಈ ಅರ್ಜಿ ವಿಚಾರಣೆಯನ್ನು ನ್ಯಾಯಮೂರ್ತಿಗಳಾದ ವಿನೀತ್ ಸರನ್ ಹಾಗೂ ಬಿ.ಆರ್.ಗವಾಯಿ ಅವರಿರುವ ರಜಾಕಾಲದ ನ್ಯಾಯಪೀಠ ನಡೆಸಬೇಕಿತ್ತು. ನ್ಯಾಯಮೂರ್ತಿ ಸರನ್ ಅವರು, ‘ಈ ಅರ್ಜಿಯ ವಿಚಾರಣೆ ನಡಸಲು ನ್ಯಾಯಮೂರ್ತಿ ಗವಾಯಿ ಅವರಿಗೆ ಕೆಲವು ಅಡಚಣೆಗಳಿವೆ. ಬೇರೆ ಪೀಠದ ಮುಂದೆ ಈ ಅರ್ಜಿಯನ್ನು ಮಂಡಿಸಿ ಎಂದಷ್ಟೇ ನಾವು ಹೇಳಬಲ್ಲೆವು’ ಎಂದು ಹೇಳಿದರು.

ಇಸ್ರೇಲ್‌ನಿಂದ ಮುಂದುವರಿದ ದಾಳಿ; 450 ಕಟ್ಟಡಗಳು ನೆಲಸಮ, ಹಲವರು ಅತಂತ್ರ

ಗಾಜಾ: 52 ಸಾವಿರ ಪ್ಯಾಲೆಸ್ಟೀನಿಯರ ಸ್ಥಳಾಂತರ

ಜಿನಿವಾ (ರಾಯಿಟರ್ಸ್): ಗಾಜಾ ನಗರದ ಮೇಲೆ ಇಸ್ರೇಲ್ ಸೇನೆಯು ನಡೆಸಿದ ನಿರಂತರ ವಾಯುದಾಳಿಯಿಂದ ಸುಮಾರು 450 ಕಟ್ಟಡಗಳು ಜಖಂ ಅಥವಾ ನೆಲಸಮಗೊಂಡಿವೆ. 52 ಸಾವಿರಕ್ಕೂ ಅಧಿಕ ಪ್ಯಾಲೆಸ್ಟೀನಿಯರನ್ನು ಸ್ಥಳಾಂತರಿಸಲಾಗಿದೆ ಎಂದು ವಿಶ್ವಸಂಸ್ಥೆಯ ನೆರವು ತಂಡದ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಅಲ್ಲದೆ, ವಾಯುದಾಳಿಯ ನಂತರ ಅತಂತ್ರರಾಗಿರುವ 47 ಸಾವಿರಕ್ಕೂ ಅಧಿಕ ಜನರು ವಿಶ್ವಸಂಸ್ಥೆಯು ಗಾಜಾದಲ್ಲಿ ನಡೆಸುತ್ತಿರುವ ವಿವಿಧ ಶಾಲೆಗಳಲ್ಲಿ ಆಶ್ರಯ ಪಡೆದಿದ್ದಾರೆ ಎಂದು ವಿಶ್ವಸಂಸ್ಥೆಯು ಸಂಯೋಜನೆ ಮತ್ತು ಮಾನವೀಯ ವ್ಯವಹಾರಗಳ ಕಚೇರಿಯ ವಕ್ತಾರರಾದ ಜೆನ್ಸ್ ಲಾರ್ಕೆ ತಿಳಿಸಿದ್ದಾರೆ.

ಅವರ ಪ್ರಕಾರ, ಗಾಜಾದಲ್ಲಿ 132 ಕಟ್ಟಡಗಳು ಪೂರ್ಣ, 316 ಕಟ್ಟಡಗಳು ಭಾಗಶಃ ಜಖಂಗೊಂಡಿವೆ. ಇವುಗಳಲ್ಲಿ ಆರು ಆಸ್ಪತ್ರೆಗಳು ಮತ್ತು 9 ಪ್ರಾಥಮಿಕ ಆರೋಗ್ಯ ಕೇಂದ್ರಗಳು ಇವೆ. ಅಗತ್ಯ ವಸ್ತುಗಳ ಪೂರೈಕೆಗಾಗಿ ಇಸ್ರೇಲ್ ಗಡಿಯ ಒಂದು ಭಾಗವನ್ನು ಮುಕ್ತಗೊಳಿಸಿರುವುದು ಸ್ವಾಗತಾರ್ಹ ಎಂದಿದ್ದಾರೆ.


ದಕ್ಷಿಣ ಗಾಜಾದ ರಫಾಹ್‌ನಲ್ಲಿ ಇಸ್ರೇಲ್ ವಾಯುದಾಳಿಯಿಂದ ನೆಲಸಮಗೊಂಡ ಕಟ್ಟಡದ ಅವಶೇಷಗಳನ್ನು ಮಂಗಳವಾರ ಪರಿಶೀಲಿಸುತ್ತಿರುವ ಪ್ಯಾಲೆಸ್ಟೀನ್ ರಕ್ಷಣಾ ತಂಡದ ಸಿಬ್ಬಂದಿ

ಪ್ರಾಣಹಾನಿ ಇಲ್ಲ, ದಾಳಿ ನಿರಂತರ: ಕಳೆದ 24 ಗಂಟೆಗಳಲ್ಲಿ ಇಸ್ರೇಲ್ ದಾಳಿಯಿಂದ ಪ್ಯಾಲೆಸ್ಟೀನಿಯರು ಮೃತರಾದ ಘಟನೆ ವರದಿಯಾಗಿಲ್ಲ ಎಂದು ಗಾಜಾ ಆರೋಗ್ಯ ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

ಈ ಮಧ್ಯೆ, ಇಸ್ರೇಲಿ ಸೇನೆಯ ಮುಖ್ಯ ವಕ್ತಾರರು, ‘ಮುಂದಿನ 24 ಗಂಟೆಗಳು ಕೂಡಾ ನಿಗದಿತ ಗುರಿಯತ್ತ ಕಾರ್ಯಾಚರಣೆ ನಡೆಯಲಿದೆ ಎಂದು ತಿಳಿಸಿದ್ದಾರೆ. ಇಸ್ರೇಲಿ ರಕ್ಷಣಾ ಪಡೆಗಳು ಈಗ ಕದನವಿರಾಮ ಕುರಿತು ಚರ್ಚಿಸುತ್ತಿಲ್ಲ. ನಾವು ಈಗ ದಾಳಿಯತ್ತ ಗಮನ ಕೇಂದ್ರೀಕರಿಸಿದ್ದೇವೆ’ ಎಂದು ಸೇನಾ ಬಾನುಲಿಗೆ ತಿಳಿಸಿದರು.

ಗಾಜಾದ ನಿವಾಸಿಗಳ ಪ್ರಕಾರ, ಕಳೆದ ರಾತ್ರಿಯಿಂದೀಚೆಗೆ ಸುಮಾರು 60 ಬಾರಿ ವಾಯುದಾಳಿ ನಡೆದಿದೆ.

ಜೆರುಸೆಲೆಂ ವರದಿ (ಎ.ಪಿ): ಇನ್ನೊಂದೆಡೆ ಗಾಜಾ ಕೂಡಾ ಪ್ರತಿ ದಾಳಿ ನಡೆಸಿದ್ದು, ಇಸ್ರೇಲ್ ಮೇಲೆ ರಾಕೆಟ್‌ಗಳ ಸುರಿಮಳೆಗರೆದಿದೆ. ಬಹುತೇಕ ಇಸ್ರೇಲ್‌ನ ನಗರಗಳನ್ನು ಗುರಿಯಾಗಿಸಿಕೊಂಡು ಈ ದಾಳಿ ನಡೆದಿದೆ.

ಇಸ್ರೇಲಿ ಸೇನೆ ಮತ್ತು ಪ್ಯಾಲೆಸ್ಟೀನಿಯರ ನಡುವೆ ಘರ್ಷಣೆ ತೀವ್ರಗೊಂಡು ದಾಳಿ ನಡೆದಂತೆ ಇಸ್ರೇಲ್‌ನಲ್ಲಿ ನಿವಾಸಿಗಳು ಸುರಕ್ಷಿತ ತಾಣ ಅರಸಿಹೋಗುವುದು ಸಾಮಾನ್ಯವಾಗಿದೆ.

ಬೈಡನ್‌ಗಿಂತ ಕಮಲಾ ಹ್ಯಾರಿಸ್ ಆದಾಯವೇ ಜಾಸ್ತಿ

ವಾಷಿಂಗ್ಟನ್ (ಪಿಟಿಐ): ಅಮೆರಿಕ ಅಧ್ಯಕ್ಷ ಜೋ ಬೈಡನ್ ಹಾಗೂ ಉಪಾಧ್ಯಕ್ಷೆ ಕಮಲಾ ಹ್ಯಾರಿಸ್ ಅವರು ತಾವು ಸಲ್ಲಿಸಿರುವ ಆದಾಯ ತೆರಿಗೆ ರಿಟರ್ನ್ಸ್ ವಿವರಗಳನ್ನು ಸಾರ್ವಜನಿಕರ ಮಾಹಿತಿಗಾಗಿ ಬಿಡುಗಡೆ ಮಾಡಿದ್ದಾರೆ.

ಬೈಡನ್ ಅವರಿಗಿಂತ ಕಮಲಾ ಹ್ಯಾರಿಸ್ ಅವರ ಆದಾಯವೇ ಜಾಸ್ತಿ ಇರುವುದನ್ನು ಈ ವಿವರಗಳು ಹೇಳುತ್ತವೆ. 2020ರಲ್ಲಿ ಕಮಲಾ ಹ್ಯಾರಿಸ್ ಅವರ ಆದಾಯ ₹ 7.30 ಕೋಟಿಗೂ ಅಧಿಕ ಇದೆ. ಬೈಡನ್ ಅವರ ಆದಾಯ ಇದೇ ಅವಧಿಯಲ್ಲಿ ₹ 4.43 ಕೋಟಿ ಇತ್ತು ಎಂಬುದು ಈ ದಾಖಲೆಗಳಿಂದ ತಿಳಿದು ಬರುತ್ತದೆ ಎಂದು ಶ್ವೇತಭವನ ತಿಳಿಸಿದೆ.

ಬೈಡನ್ ಹಾಗೂ ಪತ್ನಿ ಜಿಲ್ ಅವರು ಜಂಟಿಯಾಗಿ ತಮ್ಮ ಆದಾಯ ತೆರಿಗೆ ರಿಟರ್ನ್ಸ್ ಸಲ್ಲಿಸಿದ್ದಾರೆ. ಜಿಲ್ ಅವರು ವೃತ್ತಿಯಿಂದ ಶಿಕ್ಷಕಿಯಾಗಿದ್ದಾರೆ. 2020ರಲ್ಲಿ ಅವರ ಆದಾಯ ₹ 4.43 ಕೋಟಿ. 2019ರಲ್ಲಿ ಇಬ್ಬರ ಒಟ್ಟು ಆದಾಯ ₹ 7.19 ಕೋಟಿ ಇತ್ತು.

ಟೈರ್, ಪೆಟ್ರೋಲ್ ಬಳಸಿ ಅಂತ್ಯಸಂಸ್ಕಾರ: ಅಮಾನತು

ಬಲ್ಲಿಯಾ: ಉತ್ತರ ಪ್ರದೇಶದ ಮಾಲ್ದೆಪುರ ಗ್ರಾಮದ ಗಂಗಾ ನದಿಯಲ್ಲಿ ತೇಲಿಬಂದ ಶವವೊಂದಕ್ಕೆ ಪೆಟ್ರೋಲ್ ಮತ್ತು ಟೈರ್ ಬಳಸಿ ಅಂತ್ಯಸಂಸ್ಕಾರ ನೆರವೇರಿಸಿದ ಐವರು ಪೊಲೀಸ್ ಕಾನ್‌ಸ್ಟೇಬಲ್‌ಗಳನ್ನು ಅಮಾನತು ಮಾಡಲಾಗಿದೆ ಎಂದು ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ಜೈಸಿಂಗ್, ಉಮೇಶ್ ಪ್ರಜಾಪತಿ, ವೀರೇಂದ್ರ ಯಾದವ್, ಪುನೀತ್ ಪಾಲ್ ಮತ್ತು ಜೈ ಅಮಾನತುಗೊಂಡ ಪೊಲೀಸ್ ಕಾನ್‌ಸ್ಟೇಬಲ್‌ಗಳು.

‘ಪೊಲೀಸರು ಮೃತದೇಹದ ಅಂತ್ಯಸಂಸ್ಕಾರವನ್ನು ನಡೆಸುತ್ತಿರುವ ವಿಡಿಯೊ ಸೋಮವಾರ ವೈರಲ್ ಆಗಿತ್ತು. ಅಂತಿಮ ವಿಧಿ–ವಿಧಾನಗಳನ್ನು ನೆರವೇರಿಸುವಾಗ ಪೊಲೀಸರು ಅಸೂಕ್ಷ್ಮತೆಯಿಂದ ವರ್ತಿಸಿದ್ದಾರೆ. ಈ ಸಂಬಂಧ ಐವರು ಪೊಲೀಸ್ ಕಾನ್‌ಸ್ಟೇಬಲ್‌ಗಳನ್ನು ಅಮಾನತುಗೊಳಿಸಲಾಗಿದ್ದು, ತನಿಖೆಗೆ ಆದೇಶಿಸಲಾಗಿದೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ವಿಪಿನ್ ಟಾಡ ತಿಳಿಸಿದ್ದಾರೆ.


ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಸಂಜಯ್ ಯಾದವ್ ಅವರು ತನಿಖೆ ನಡೆಸಲಿದ್ದಾರೆ ಎಂದೂ ಅವರು ಮಾಹಿತಿ ನೀಡಿದ್ದಾರೆ.

ಗಂಗಾ ನದಿಯಲ್ಲಿ ತೇಲಿಕೊಂಡು ಬಂದಿದ್ದ ಶವಗಳ ಅಂತ್ಯಸಂಸ್ಕಾರವನ್ನು ಮೇ 15ರಂದು ನಡೆಸಲಾಗಿತ್ತು. ಈ ಸಂದರ್ಭದಲ್ಲಿ ಶವಗಳ ಮೇಲೆ ಟೈರ್ ಇಟ್ಟು ಅದರ ಮೇಲೆ ಪೆಟ್ರೋಲ್ ಸುರಿದು ಬೆಂಕಿ ಹಚ್ಚಿ ಅಂತ್ಯಸಂಸ್ಕಾರ ನಡೆಸಲಾಗಿತ್ತು ಎಂದು ಫೆಫಾನಾ ಪೊಲೀಸ್ ಠಾಣಾಧಿಕಾರಿ ಸಂಜಯ್ ತ್ರಿಪಾಠಿ ಮಾಹಿತಿ ನೀಡಿದ್ದಾರೆ.

ನಿಧನ ವಾರ್ತೆ

ತಮಿಳಿನ ಖ್ಯಾತ ಬರಹಗಾರ ಕೆ. ರಾಜನಾರಾಯಣ್

ಪುದುಚೇರಿ: ‘ತಮಿಳಿನ ಖ್ಯಾತ ಬರಹಗಾರ, ಕಾದಂಬರಿಕಾರ ಮತ್ತು ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೆ. ರಾಜನಾರಾಯಣ್ ಅವರು (98) ಸೋಮವಾರ ರಾತ್ರಿ ನಿಧನರಾದರು’ ಎಂದು ಕುಟುಂಬದ ಮೂಲಗಳು ತಿಳಿಸಿವೆ. ಅವರಿಗೆ ಇಬ್ಬರು ಪುತ್ರರು ಇದ್ದಾರೆ. ಕಿ ರಾ ಎಂದು ಜನಪ್ರಿಯರಾಗಿದ್ದ ಕೆ.ರಾಜನಾರಾಯಣ್ ಅವರು ವಯೋಸಹಜ ಕಾಯಿಲೆಯಿಂದಾಗಿ ಕೊನೆ ಉಸಿರೆಳೆದರು.



ಪುದುಚೇರಿಯ ಲೆಫ್ಟಿನೆಂಟ್ ಗವರ್ನರ್ ಡಾ. ತಮಿಳಿಸೈ ಸೌಂದರರಾಜನ್ ಅವರು ಮಂಗಳವಾರ ಕಿ ರಾ ಅವರ ನಿವಾಸಕ್ಕೆ ಭೇಟಿ ನೀಡಿ, ಅಂತಿಮ ನಮನ ಸಲ್ಲಿಸಿದರು.

ಆಸ್ಟ್ರೇಲಿಯಾ ವಿರುದ್ಧ ಟೆಸ್ಟ್ ಆಡಲಿರುವ ಭಾರತ ಮಹಿಳಾ ತಂಡ

ನವದೆಹಲಿ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡವು ಮುಂದಿನ ತಿಂಗಳು ನಡೆಯಲಿರುವ ಇಂಗ್ಲೆಂಡ್ ವಿರುದ್ಧದ ಟೆಸ್ಟ್ ಪಂದ್ಯದ ಬಳಿಕ ಆಸ್ಟ್ರೇಲಿಯಾ ವಿರುದ್ಧವೂ ಏಕೈಕ ಟೆಸ್ಟ್‌ನಲ್ಲಿ ಆಡಲಿದೆ.

ಭಾರತದ ಆಟಗಾರ್ತಿಯರು ಏಳು ವರ್ಷಗಳ ಬಳಿಕ ಇಂಗ್ಲೆಂಡ್‌ನಲ್ಲಿ ಮೊದಲ ಟೆಸ್ಟ್ ಆಡಲಿದ್ದು, ಜೂನ್ 16ರಿಂದ ಈ ಪಂದ್ಯ ನಡೆಯಲಿದೆ. ಆಸ್ಟ್ರೇಲಿಯಾ ಪ್ರವಾಸದಲ್ಲಿ ಒಂದು ಟೆಸ್ಟ್ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದು, ಬಳಿಕ ಏಕದಿನ ಮತ್ತು ಟ್ವೆಂಟಿ-20 ಪಂದ್ಯಗಳನ್ನೂ ಆಡಲಿದ್ದಾರೆ.

‘ಇಂಗ್ಲೆಂಡ್ ಮತ್ತು ಆಸ್ಟ್ರೇಲಿಯಾ ಇನ್ನೂ ಟೆಸ್ಟ್ ಆಡುತ್ತಿರುವ ತಂಡಗಳಾಗಿವೆ. ಆ ತಂಡಗಳು ಭಾರತಕ್ಕೆ ಬಂದಾಗ ಅಥವಾ ಭಾರತವು ಆ ದೇಶಗಳ ಪ್ರವಾಸ ಕೈಗೊಳ್ಳಲು ವೇಳಾಪಟ್ಟಿಯನ್ನು ಸಿದ್ಧಪಡಿಸಲಾಗುತ್ತದೆ’ ಎಂದು ಬಿಸಿಸಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

‘ಕಳೆದ ತಿಂಗಳು ನಡೆದ ಬಿಸಿಸಿಐ ಅಪೆಕ್ಸ್ ಸಮಿತಿ ಸಭೆಯಲ್ಲಿ ಈ ವಿಷಯ ಚರ್ಚೆಗೆ ಬಂದಿತ್ತು’ ಎಂದು ಅವರು ಹೇಳಿದ್ದಾರೆ.

ಕ್ಯಾಮರಾನ್ ಬ್ಯಾಂಕ್ರಾಫ್ಟ್ ಹೇಳಿಕೆಗೆ ತಿರುಗೇಟು: ಮಾಜಿ ಆಟಗಾರರ ಮೇಲೆ ಆಕ್ರೋಶ

ಆಸ್ಟ್ರೇಲಿಯಾ: ಕ್ರಿಕೆಟ್ ‘ವಿರೂಪ’ಕ್ಕೆ ಕೋಪ

ಸಿಡ್ನಿ (ಎಎಫ್‌ಪಿ):ದಕ್ಷಿಣ ಆಫ್ರಿಕಾ ಎದುರಿನ ಟೆಸ್ಟ್ ಪಂದ್ಯದಲ್ಲಿ ನಡೆದ ಚೆಂಡು ವಿರೂಪ ಪ್ರಕರಣಕ್ಕೆ ಸಂಬಂಧಿಸಿ ತಮಗೆ ಮಾಹಿತಿಯೇ ಇರಲಿಲ್ಲ ಎಂದು ಆಸ್ಟ್ರೇಲಿಯಾದ ಪ್ರಮುಖ ಬೌಲರ್‌ಗಳು ಹೇಳಿಕೆ ನೀಡಿದ್ದಾರೆ. ಚೆಂಡು ವಿರೂಪಗೊಳಿಸುವ ಹುನ್ನಾರದ ಬಗ್ಗೆ ತಂಡದ ಬೌಲರ್‌ಗಳಿಗೆ ಮಾಹಿತಿ ಇತ್ತು ಎಂದು ಪ್ರಕರಣದಲ್ಲಿ ಭಾಗಿಯಾಗಿದ್ದ ಕ್ಯಾಮರಾನ್ ಬ್ಯಾಂಕ್ರಾಫ್ಟ್ ಹೇಳಿದ ಹಿನ್ನೆಲೆಯಲ್ಲಿ ಈ ಹೇಳಿಕೆ ಹೊರಬಿದ್ದಿದೆ.

ವೇಗಿಗಳಾದ ಪ್ಯಾಟ್ ಕಮಿನ್ಸ್, ಜೋಶ್ ಹ್ಯಾಜಲ್‌ವುಡ್, ಮಿಷೆಲ್ ಸ್ಟಾರ್ಕ್ ಮತ್ತು ಸ್ಪಿನ್ನರ್ ನೇಥನ್ ಲಯನ್ ಅವರು ಹೊರಡಿಸಿರುವ ಪ್ರಕಟಣೆಯಲ್ಲಿ ಬ್ಯಾಂಕ್ರಾಫ್ಟ್ ಹೇಳಿಕೆ ನಿರಾಧಾರ ಎಂದು ಸ್ಪಷ್ಟನೆ ನೀಡಲಾಗಿದೆ. ಕೆಲವು ಪತ್ರಕರ್ತರು ಮತ್ತು ಮಾಜಿ ಆಟಗಾರರಿಂದ ತಂಡದ ಸಮಗ್ರತೆಗೆ ಧಕ್ಕೆಯಾಗಿದೆ. ಆಧಾರ ಇಲ್ಲದ ಆರೋಪಗಳಿಗೆ ಶೀಘ್ರದಲ್ಲೇ ಉತ್ತರ ಕಂಡುಕೊಳ್ಳದೇ ಇದ್ದರೆ ಭವಿಷ್ಯದಲ್ಲಿ ದುಷ್ಪರಿಣಾಮ ಉಂಟಾಗಲಿದೆ ಎಂದು



ನೇಥನ್ ಲಯನ್ ಮತ್ತು ಪ್ಯಾಟ್ ಕಮಿನ್ಸ್ –ಎಎಫ್‌ಪಿ ಚಿತ್ರ

ಕೂಡ ಅಭಿಪ್ರಾಯಪಟ್ಟಿದ್ದಾರೆ.

‘2018ರಲ್ಲಿ ಕೇಪ್‌ಟೌನ್‌ನಲ್ಲಿ ನಡೆದಿದ್ದ ಮೂರನೇ ಟೆಸ್ಟ್ ಪಂದ್ಯದಲ್ಲಿ ಚೆಂಡಿನ ಮೇಲೆ ಸ್ಯಾಂಡ್‌ಪೇಪರ್‌ನಿಂದ ಉಜ್ಜುವ ಹುನ್ನಾರದ ಬಗ್ಗೆ ಇತರ ಬೌಲರ್‌ಗಳಿಗೂ ಮಾಹಿತಿ ಇತ್ತು’ ಎಂದು ‘ದಿ ಗಾರ್ಡಿಯನ್’ ಪತ್ರಿಕೆಗೆ ನೀಡಿದ್ದ ಸಂದರ್ಶನದಲ್ಲಿ ಬ್ಯಾಂಕ್ರಾಫ್ಟ್ ಹೇಳಿದ್ದರು. ಈ ಹೇಳಿಕೆಯ ಬೆನ್ನಲ್ಲೇ ಪ್ರಕರಣದ ಬಗ್ಗೆ ಸಮರ್ಪಕವಾಗಿ ತನಿಖೆ ಮಾಡುವಲ್ಲಿ ಕ್ರಿಕೆಟ್ ಆಸ್ಟ್ರೇಲಿಯಾ ವಿಫಲವಾಗಿದೆ ಎಂದು ಮಾಜಿ ಆಟಗಾರರಾದ ಮೈಕೆಲ್ ಕ್ಲರ್ಕ್ ಮತ್ತು ಆ್ಯಡಂ ಗಿಲ್‌ಕ್ರಿಸ್ಟ್ ದೂರಿದ್ದರು.

ಫೀಲ್ಡಿಂಗ್ ಮಾಡುತ್ತಿದ್ದ ಬ್ಯಾಂಕ್ರಾಫ್ಟ್ ಹಳದಿ ಬಣ್ಣದ ಸ್ಯಾಂಡ್‌ಪೇಪರ್‌ನ ತುಂಡೊಂದನ್ನು ಪ್ಯಾಂಟಿನ ಜೇಬಿನಲ್ಲಿ ಅಡಗಿಸಿಡುವ ದೃಶ್ಯ ಕ್ಯಾಮರಾಗಳಲ್ಲಿ ಸೆರೆಯಾಗುವುದರೊಂದಿಗೆ ಪ್ರಕರಣ ಬಯಲಾಗಿತ್ತು. ಅಂದು ತಂಡದ ನಾಯಕರಾಗಿದ್ದ ಸ್ಟೀವ್ ಸ್ಮಿತ್ ಮತ್ತು ಉಪನಾಯಕರಾಗಿದ್ದ ಡೇವಿಡ್ ವಾರ್ನರ್ ಅವರನ್ನು ತಲಾ ಒಂದು ವರ್ಷ ನಿಷೇಧಿಸಲಾಗಿತ್ತು. ಬ್ಯಾಂಕ್ರಾಫ್ಟ್ ಮೇಲೆ ಒಂಬತ್ತು ತಿಂಗಳ ನಿಷೇಧ ಹೇರಲಾಗಿತ್ತು. ಡ್ಯಾರೆನ್ ಲೆಹ್ಮನ್ ಕೋಚ್ ಹುದ್ದೆ ತೊರೆದಿದ್ದರು.

ಹೊಸ ಮಾಹಿತಿ ಏನೂ ಇಲ್ಲ: ಬ್ಯಾಂಕ್ರಾಫ್ಟ್



ಕ್ಯಾಮರಾನ್ ಬ್ಯಾಂಕ್ರಾಫ್ಟ್

ಚೆಂಡು ವಿರೂಪ ಪ್ರಕರಣಕ್ಕೆ ಸಂಬಂಧಿಸಿ ತಮ್ಮ ಬಳಿ ಹೊಸ ಮಾಹಿತಿ ಏನೂ ಇಲ್ಲ ಎಂದು ಕ್ಯಾಮರಾನ್ ಬ್ಯಾಂಕ್ರಾಫ್ಟ್ ಕ್ರಿಕೆಟ್ ಆಸ್ಟ್ರೇಲಿಯಾಗೆ ತಿಳಿಸಿದ್ದಾರೆ. ಸಂದರ್ಶನದಲ್ಲಿ ಅವರು ನೀಡಿದ್ದ ಹೇಳಿಕೆಯ ಹಿನ್ನೆಲೆಯಲ್ಲಿ ತನಿಖೆ ನಡೆಸಲು ಕ್ರಿಕೆಟ್ ಆಸ್ಟ್ರೇಲಿಯಾ ಮುಂದಾಗಿತ್ತು.

‘ಇಂಗ್ಲೆಂಡ್‌ನಲ್ಲಿ ಕೌಂಟಿ ಕ್ರಿಕೆಟ್ ಆಡುತ್ತಿರುವ ಬ್ಯಾಂಕ್ರಾಫ್ಟ್ ಸೋಮವಾರ ರಾತ್ರಿಯೇ ಉತ್ತರ ನೀಡಿದ್ದಾರೆ. ಕ್ರಿಕೆಟ್ ಆಸ್ಟ್ರೇಲಿಯಾ ಜೊತೆ ಹಂಚಿಕೊಳ್ಳಲು ವಿಶೇಷವಾಗಿ ಯಾವ ಮಾಹಿತಿಯೂ ಇಲ್ಲ ಎಂದಿದ್ದಾರೆ’ ಎಂದು ಸಿಡ್ನಿ ಮಾರ್ನಿಂಗ್ ಹೆರಾಲ್ಡ್ ಪತ್ರಿಕೆ ವರದಿ ಮಾಡಿದೆ.

ಸಂಕ್ಷಿಪ್ತ ಸುದ್ದಿ

ಹಾಕಿ: ಬರಲಿದೆ ಧ್ಯಾನ್‌ಚಂದ್ ಸಾಕ್ಷ್ಯಚಿತ್ರ



ಧ್ಯಾನ್ ಚಂದ್

ನವದೆಹಲಿ (ಪಿಟಿಐ): ಹಾಕಿ ಮಾಂತ್ರಿಕ ಧ್ಯಾನ್ ಚಂದ್ ಅವರ ಕುರಿತ ಸಾಕ್ಷ್ಯಚಿತ್ರ ನಿರ್ಮಿಸಲು ಉದ್ಯಮಿ ಹಾಗೂ ನಿರ್ಮಾಪಕರಾದ ಜೊಯೀತಾ ರಾಯ್ ಮತ್ತು ಪ್ರತೀಕ್ ಕುಮಾರ್ ಮಿಶ್ರಾ ಮುಂದಾಗಿದ್ದಾರೆ. ಧ್ಯಾನ್‌ಚಂದ್ ಅವರ ಬಾಲ್ಯ ಮತ್ತು ಜೀವನದಲ್ಲಿ ಅನುಭವಿಸಿದ ಕಷ್ಟಗಳನ್ನು ಇದರಲ್ಲಿ ಬಿಂಬಿಸಲಾಗುತ್ತದೆ ಎನ್ನಲಾಗಿದೆ.

ಧ್ಯಾನ್ ಚಂದ್ ಅವರಿಗೆ ಭಾರತರತ್ನ ನೀಡಬೇಕೆಂದು ಜೊಯೀತಾ ಮತ್ತು ಪ್ರತೀಕ್ ಕೆಲವು ವರ್ಷಗಳಿಂದ ಆನ್‌ಲೈನ್ ಮೂಲಕ ಅಭಿಯಾನ ಮಾಡುತ್ತಿದ್ದಾರೆ. ಸಾಕ್ಷ್ಯಚಿತ್ರಕ್ಕೆ ಸಂಬಂಧಿಸಿ ಧ್ಯಾನ್‌ಚಂದ್ ಅವರ ಪುತ್ರ ಹಾಗೂ ಹಾಕಿ ಆಟಗಾರ ಅಶೋಕ್ ಧ್ಯಾನ್ ಚಂದ್ ಜೊತೆ ಮಾತುಕತೆ ನಡೆದಿದೆ ಎಂದು ಅವರು ತಿಳಿಸಿದ್ದಾರೆ.

ಝಾನ್ಸಿ ಮತ್ತು ಅಲಹಾಬಾದ್‌ನಲ್ಲಿ ಕಳೆದ ವರ್ಷ ಶೂಟಿಂಗ್ ಆರಂಭಿಸಲು ನಿರ್ಧರಿಸಲಾಗಿತ್ತು. ಆದರೆ ಕೋವಿಡ್‌ನಿಂದಾಗಿ ಅಡ್ಡಿಯಾಗಿದೆ ಎನ್ನಲಾಗಿದೆ. ಜೂನ್‌ನಲ್ಲಿ ನಿರ್ಮಾಣ ಕಾರ್ಯ ಶುರುವಾಗಲಿದ್ದು ಡಿಸೆಂಬರ್ 3ರಂದು ಬಿಡುಗಡೆ ಮಾಡುವ ಯೋಜನೆ ಇದೆ. ಅಂದಿಗೆ ಧ್ಯಾನ್ ಚಂದ್ ನಿಧನರಾಗಿ 42 ವರ್ಷಗಳಾಗಲಿವೆ.

ಕೊಲೆ ಬೆದರಿಕೆಗಳು ಬಂದಿದ್ದವು: ಡುಪ್ಲೆಸಿ

ನವದೆಹಲಿ (ಪಿಟಿಐ): 2011ರ ವಿಶ್ವಕಪ್ ಕ್ರಿಕೆಟ್ ಕ್ವಾರ್ಟರ್‌ಫೈನಲ್ ಪಂದ್ಯದ ಸೋಲಿನ ಬಳಿಕ ತನಗೆ ಕೊಲೆ ಬೆದರಿಕೆಗಳು ಬಂದಿದ್ದವು ಎಂದು ದಕ್ಷಿಣ ಆಫ್ರಿಕಾ ತಂಡದ ಆಟಗಾರ ಫಫ್ ಡುಪ್ಲೆಸಿ ಬಹಿರಂಗಪಡಿಸಿದ್ದಾರೆ.

ಬಾಂಗ್ಲಾದೇಶದ ಢಾಕಾದ ಶೇರ್ ಎ ಬಾಂಗ್ಲಾ ಕ್ರೀಡಾಂಗಣದಲ್ಲಿ ನಡೆದ ಈ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡವು ನ್ಯೂಜಿಲೆಂಡ್ ಎದುರು 49 ರನ್‌ಗಳಿಂದ ಸೋತು ಟೂರ್ನಿಯಿಂದ ಹೊರಬಿದ್ದಿತ್ತು. ಆ ಪಂದ್ಯದಲ್ಲಿ ಡುಪ್ಲೆಸಿ ಅವರು ಒಂಟಿ ರನ್ ಕದಿಯುವ ವೇಳೆ ನಾನ್‌ಸ್ಟ್ರೈಕ್‌ನಲ್ಲಿದ್ದ ಎಬಿ ಡಿವಿಲಿಯರ್ಸ್ ರನೌಟ್ ಆಗಿದ್ದರು.

‘ಆ ಪಂದ್ಯದ ಬಳಿಕ ನನಗೆ ಮತ್ತು ನನ್ನ ಪತ್ನಿಗೆ ಜೀವ ಬೆದರಿಕೆಗಳು ಬರತೊಡಗಿದವು’ ಎಂದು ಇಎಸ್‌ಪಿಎನ್‌ಕ್ರಿಕ್‌ಇನ್ಫೊ ವೆಬ್‌ಸೈಟ್‌ಗೆ ಡುಪ್ಲೆಸಿ ಹೇಳಿದ್ದಾರೆ.

ಬಾಕ್ಸಿಂಗ್: ಭಾರತ ತಂಡದಲ್ಲಿ ವಿಕಾಸ್



ವಿಕಾಸ್ ಕೃಷನ್

ನವದೆಹಲಿ (ಪಿಟಿಐ): ಅಮಿತ್ ಪಂಘಾಲ್ ಮತ್ತು ವಿಕಾಸ್ ಕೃಷನ್ ಸೇರಿದಂತೆ ಒಲಿಂಪಿಕ್ಸ್‌ಗೆ ಅರ್ಹತೆ ಗಳಿಸಿರುವ ಬಹುತೇಕ ಎಲ್ಲ ಬಾಕ್ಸರ್‌ಗಳು ಕೂಡ ದುಬೈಯಲ್ಲಿ ನಡೆಯಲಿರುವ ಏಷ್ಯನ್ ಚಾಂಪಿಯನ್‌ಷಿಪ್‌ಗೆ ಪ್ರಕಟಿಸಿರುವ ತಂಡದಲ್ಲಿ ಸ್ಥಾನ ಗಳಿಸಿದ್ದಾರೆ.

ಮೇ 24ರಂದು ಸ್ಪರ್ಧೆಗಳು ಆರಂಭವಾಗಲಿವೆ. ಭಾರತ ತಂಡ 21ರಂದು ದುಬೈಗೆ ಪಯಣಿಸಲಿದೆ.

ತಂಡ: ವಿನೋದ್ ತನ್ವರ್ (49 ಕೆಜಿ), ಅಮಿತ್ ಪಂಘಾಲ್ (52 ಕೆಜಿ), ಮೊಹಮ್ಮದ್ ಹಸಮುದ್ದೀನ್ (56 ಕೆಜಿ), ವರಿಂದರ್ ಸಿಂಗ್ (60 ಕೆಜಿ), ಶಿವ ಥಾಪಾ (64 ಕೆಜಿ), ವಿಕಾಸ್ ಕೃಷನ್ (69 ಕೆಜಿ), ಆಶಿಶ್ ಕುಮಾರ್ (75 ಕೆಜಿ), ಸುಮಿತ್ ಸಾಂಗ್ವಾನ್ (81 ಕೆಜಿ), ಸಂಜೀತ್ (91 ಕೆಜಿ), ನರೇಂದರ್ (+91 ಕೆಜಿ).

29ರಂದು ಬಿಸಿಸಿಐ ಎಸ್‌ಜಿಎಂ

ನವದೆಹಲಿ (ಪಿಟಿಐ): ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಯ (ಬಿಸಿಸಿಐ) ವಿಶೇಷ ಸಾಮಾನ್ಯ ಸಭೆಯು (ಎಸ್‌ಜಿಎಂ) ಇದೇ 29ರಂದು ನಡೆಯಲಿದೆ. ಭಾರತದಲ್ಲಿ ಕ್ರಿಕೆಟ್ ಋತು ಮತ್ತು ಈ ವರ್ಷ ನಿಗದಿಯಾಗಿರುವ ಟ್ವೆಂಟಿ-20 ವಿಶ್ವಕಪ್ ಆಯೋಜನೆ ಕುರಿತು ಚರ್ಚೆ ನಡೆಯಲಿದೆ.

ಈ ಕುರಿತು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಅವರು ಪ್ರಕಟಣೆ ನೀಡಿದ್ದಾರೆ.

‘ಎಬಿಡಿ ನಿವೃತ್ತಿ ನಿರ್ಧಾರ ಅಚಲ’




ಎಬಿ ಡಿವಿಲಿಯರ್ಸ್

ಜೊಹಾನ್ಸ್‌ಬರ್ಗ್ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್‌ನಿಂದ ನಿವೃತ್ತರಾಗಿರುವ ಎಬಿ ಡಿವಿಲಿಯರ್ಸ್ (ಎಬಿಡಿ) ನಿರ್ಧಾರ ಅಚಲವಾಗಿದ್ದು ವಾಪಸ್ ಸ್ಪರ್ಧಾ ಕಣಕ್ಕೆ ಇಳಿಯಲು ಸಿದ್ಧರಿಲ್ಲ ಎಂದು ಕ್ರಿಕೆಟ್ ದಕ್ಷಿಣ ಆಫ್ರಿಕಾ (ಸಿಎಸ್‌ಎ) ಮಂಗಳವಾರ ಸ್ಪಷ್ಟಪಡಿಸಿದೆ. ಇದರೊಂದಿಗೆ, ಭಾರತದಲ್ಲಿ ನಡೆಯಲಿರುವ ಟಿ20 ವಿಶ್ವಕಪ್ ಟೂರ್ನಿಯಲ್ಲಿ ಡಿವಿಲಿಯರ್ಸ್ ಆಡುತ್ತಾರೆ ಎಂಬ ವದಂತಿಗೆ ತೆರೆಬಿದ್ದಂತಾಗಿದೆ.

‘ಡಿವಿಲಿಯರ್ಸ್ ಜೊತೆ ಚರ್ಚಿಸಲಾಗಿದೆ. ತಮ್ಮ ನಿರ್ಧಾರದಲ್ಲಿ ಬದಲಾವಣೆ ಇಲ್ಲ ಎಂದು ಅವರು ತಿಳಿಸಿದ್ದಾರೆ. ಆದ್ದರಿಂದ ಅವರ ನಿವೃತ್ತಿ ನಿರ್ಧಾರ ಅಂತಿಮ’ ಎಂದು ಸಿಎಸ್‌ಎ ತಿಳಿಸಿದೆ. ವೆಸ್ಟ್ ಇಂಡೀಸ್ ಪ್ರವಾಸಕ್ಕೆ ದಕ್ಷಿಣ ಆಫ್ರಿಕಾ ತಂಡವನ್ನು ಈಚೆಗೆ ಪ್ರಕಟಿಸಲಾಗಿತ್ತು. ಕೆರಿಬಿಯನ್ ನೆಲದಲ್ಲಿ ನಡೆಯಲಿರುವ ಎರಡು ಟೆಸ್ಟ್ ಮತ್ತು ಐದು ಟಿ20 ಪಂದ್ಯಗಳ ಬಗ್ಗೆಯೇ ಈ ಸಂದರ್ಭದಲ್ಲಿ ಚರ್ಚೆಯಾಗಿತ್ತು. ಡಿವಿಲಿಯರ್ಸ್ ನಿವೃತ್ತಿ ವಿಚಾರ ಪ್ರಸ್ತಾಪ ಆಗಿರಲಿಲ್ಲ. ಇದರ ಬೆನ್ನಲ್ಲೇ ಡಿವಿಲಿಯರ್ಸ್ ವಿಷಯ ಮುನ್ನೆಲೆಗೆ ಬಂದಿತ್ತು. ಹೀಗಾಗಿ ಸಿಎಸ್‌ಎ ಹೇಳಿಕೆ ನೀಡಿದೆ.

‘ಡಿವಿಲಿಯರ್ಸ್ 2018ರ ಮೇ ತಿಂಗಳಲ್ಲಿ ಅಂತರರಾಷ್ಟ್ರೀಯ ಕ್ರಿಕೆಟ್‌ಗೆ ವಿದಾಯ ಹೇಳಿದ್ದರು.

ಸುಶೀಲ್‌ಗಿಲ್ಲ ನಿರೀಕ್ಷಣಾ ಜಾಮೀನು



ಸುಶೀಲ್ ಕುಮಾರ್– ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಯುವ ಕುಸ್ತಿಪಟುವಿನ ಕೊಲೆಗೆ ಸಂಬಂಧಿಸಿದ ಆರೋಪ ಎದುರಿಸುತ್ತಿರುವ ಒಲಿಂಪಿಯನ್ ಕುಸ್ತಿಪಟು ಸುಶೀಲ್ ಕುಮಾರ್ ಅವರಿಗೆ ನಿರೀಕ್ಷಣಾ ಜಾಮೀನನ್ನು ದೆಹಲಿಯ ನ್ಯಾಯಾಲಯ ನಿರಾಕರಿಸಿದೆ. ಪ್ರಕರಣದಲ್ಲಿ ಸುಶೀಲ್ ಕುಮಾರ್ ಅವರ ಕುಮ್ಮಕ್ಕು ಇರುವುದು ಸ್ಪಷ್ಟವಾಗುತ್ತಿದೆ. ಅವರ ವಿರುದ್ಧದ ಆರೋಪ ಗಂಭೀರವಾದದ್ದು ಎಂದು ನ್ಯಾಯಾಧೀಶರು ಅಭಿಪ್ರಾಯಪಟ್ಟಿದ್ದಾರೆ. ಕೊಲೆ ಪ್ರಕರಣ ಬಹಿರಂಗ ಆಗುತ್ತಿದ್ದಂತೆ ಸುಶೀಲ್ ಕುಮಾರ್ ತಲೆಮರೆಸಿಕೊಂಡಿದ್ದಾರೆ.

ರಾಷ್ಟ್ರ ರಾಜಧಾನಿಯ ಕ್ರೀಡಾಂಗಣವೊಂದರಲ್ಲಿ ಮೇ ನಾಲ್ಕರಂದು ನಡೆದ ಗಲಾಟೆಯಲ್ಲಿ ಕುಸ್ತಿಪಟು ಸಾಗರ್ ರಾಣಾ ಸಾವಿಗೀಡಾಗಿದ್ದರು. ಅವರ ಗೆಳೆಯರಾದ ಸೋನು ಮತ್ತು ಅಮಿತ್ ಕುಮಾರ್‌ಗೆ ಗಾಯವಾಗಿತ್ತು. ಸುಶೀಲ್ ಕುಮಾರ್ ಮತ್ತು ಇತರ ಕೆಲವರು ಇದರಲ್ಲಿ ಭಾಗಿಯಾಗಿದ್ದಾರೆ ಎನ್ನಲಾಗಿದೆ.

ಪ್ರಕರಣದ ತನಿಖೆ ನಡೆಯುತ್ತಿದ್ದು ಆರೋಪಿಗಳ ವಿರುದ್ಧ ಜಾಮೀನುರಹಿತ ವಾರಂಟ್ ಹೊರಡಿಸಲಾಗಿದೆ. ಕೆಲವು ಆರೋಪಿಗಳನ್ನು ಇನ್ನೂ ಬಂಧಿಸಲಾಗಿಲ್ಲ. ಬಂಧನಕ್ಕೆ ಹೆದರಿ ಸುಶೀಲ್, ನಿರೀಕ್ಷಣಾ ಜಾಮೀನಿಗಾಗಿ ಸೋಮವಾರ ನ್ಯಾಯಾಲಯದ ಮೊರೆ ಹೋಗಿದ್ದರು. ತಮ್ಮ ಮೇಲಿನ ಆರೋಪಗಳು ಪೂರ್ವಗ್ರಹಪೀಡಿತ ಎಂದಿದ್ದಾರೆ.


ಸುಶೀಲ್ ಅವರನ್ನು ಹುಡುಕಿಕೊಟ್ಟವರಿಗೆ ಬಹುಮಾನ ನೀಡುವುದಾಗಿ ದೆಹಲಿ ಪೊಲೀಸರು ಘೋಷಿಸಿದ್ದಾರೆ.

ಬಿಸಿಸಿಐಗೆ ಋಣಿ ಎಂದ ವೇದಾ ಕೃಷ್ಣಮೂರ್ತಿ

ನವದೆಹಲಿ: ಕೋವಿಡ್–19ರಿಂದಾಗಿ ಎರಡು ವಾರಗಳಲ್ಲಿ ತಾಯಿ ಮತ್ತು ಸಹೋದರಿಯನ್ನು ಕಳೆದುಕೊಂಡ ಭಾರತ ಮಹಿಳಾ ಕ್ರಿಕೆಟ್ ತಂಡದ ಆಟಗಾರ್ತಿ ವೇದಾ ಕೃಷ್ಣಮೂರ್ತಿ ಅವರು ವಿಷಾದದ ಸಂದರ್ಭದಲ್ಲಿ ಸಮಾಧಾನಪಡಿಸಿದ ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಟ್ವಿಟರ್‌ನಲ್ಲಿ ಕೃತಜ್ಞತೆ ಸಲ್ಲಿಸಿದ್ದಾರೆ.

ವೇದಾ ದು:ಖದ ಮಡುವಿನಲ್ಲಿದ್ದಾಗ ಇಂಗ್ಲೆಂಡ್ ಪ್ರವಾಸಕ್ಕೆ ಭಾರತ ಮಹಿಳಾ ತಂಡವನ್ನು ಆಯ್ಕೆ ಮಾಡಲಾಗಿತ್ತು. ವೇದಾ ಅವರನ್ನು ಕೈಬಿಡಲಾಗಿತ್ತು. ಆದರೆ ಇದಕ್ಕೂ ಮುನ್ನ ಸೌಜನ್ಯಕ್ಕಾದರೂ ಅವರ ಅಭಿಪ್ರಾಯ ತಿಳಿಯಲು ಬಿಸಿಸಿಐ ಮುಂದಾಗಲಿಲ್ಲ ಎಂದು ಆಸ್ಟ್ರೇಲಿಯಾದ ಮಾಜಿ ನಾಯಕಿ ಲಿಸಾ ಸ್ಥಳೇಕರ್ ದೂರಿದ್ದರು.

ಷೇರುಪೇಟೆ ವಹಿವಾಟು	
ಹಿಂದಿನ ಅಂತ್ಯ	49,581
ಇಂದಿನ ಅಂತ್ಯ	50,193
ಏರಿಕೆ	612



ಎನ್‌ಎಸ್‌ಇ ನಿಫ್ಟಿ	
ಹಿಂದಿನ ಅಂತ್ಯ	14,923
ಇಂದಿನ ಅಂತ್ಯ	15,108
▲	185
ದಿನದ ಗರಿಷ್ಠ	15,137

ವಿನಿಮಯ ದರ	
$ ಡಾಲರ್	73.05
£ ಪೌಂಡ್	103.57
€ ಯುರೊ	88.94
¥ ಯೆನ್ (100ಕ್ಕೆ)	67

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ	
ಬೆಂಗಳೂರು	
100 ಮೊಟ್ಟೆಗೆ	₹485
12 ಮೊಟ್ಟೆಗೆ	₹65
ಮೈಸೂರು	
100 ಮೊಟ್ಟೆಗೆ	₹485

ಖಾದ್ಯ ತೈಲ ಮುಂಬೈ (10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1490 (1493)
ಸೂರ್ಯಕಾಂತಿ (ರಿಫೈನ್ಡ್)	₹1710 (1710)
ಪಾಮೋಲಿನ್	₹1382 (1390)

ಪ್ರಶ್ನೋತ್ತರ



ಯು.ಪಿ.ಪುರಾಣಿಕ್
ಬ್ಯಾಂಕಿಂಗ್-ಹಣಕಾಸು ತಜ್ಞ
uppuranik@gmail.com
ಮೊ: 9448015300

ಸೋಮಣ್ಣ, ತುಮಕೂರು

● **ಪ್ರಶ್ನೆ:** ಕೃಷಿ ಜಮೀನು ಮಾರಾಟ ಮಾಡಿದಾಗ ಬಂಡವಾಳ ವೃದ್ಧಿ ತೆರಿಗೆ ಪಾವತಿಸಬೇಕು ಎಂದಾದರೆ, ಜಮೀನು ಪಟ್ಟಣದಿಂದ ಎಷ್ಟು ದೂರದಲ್ಲಿರಬೇಕು? ಬಂಡವಾಳ ವೃದ್ಧಿ ತೆರಿಗೆ ಲೆಕ್ಕ ಹಾಕುವಾಗ ಯಾವ ಖರ್ಚುಗಳನ್ನು ಕಳೆದು ತೆರಿಗೆ ಕೊಡಬಹುದು?

ಉತ್ತರ: ಕೃಷಿ ಜಮೀನು ಮಾರಾಟ ಮಾಡಿದಾಗ, ಸೆಕ್ಷನ್ 48 ಆಧಾರದ ಮೇಲೆ ಬಂಡವಾಳ ವೃದ್ಧಿ ತೆರಿಗೆ ಕೊಡುವ ಅಗತ್ಯವಿಲ್ಲ. ಆದರೆ ಅಂತಹ ಜಮೀನು ಕೆಳಗೆ ವಿವರಿಸಿದಂತೆ ಜನಸಂಖ್ಯೆಯುಳ್ಳ ಪಟ್ಟಣದ ಸಮೀಪ ಇರುವಲ್ಲಿ ಜಮೀನು ಮಾರಾಟ ಮಾಡಿ ಬಂದ ಬಂಡವಾಳ ವೃದ್ಧಿಯಲ್ಲಿ ತೆರಿಗೆ ಕೊಡಬೇಕಾಗುತ್ತದೆ.

1) 10 ಸಾವಿರದಿಂದ ಒಂದು ಲಕ್ಷದೊಳಗಿನ ಜನಸಂಖ್ಯೆ ಇರುವ ಮುನ್ಸಿಪಾಲಿಟಿ– ಎರಡು ಕಿ.ಮೀ ತನಕ
2) ಒಂದು ಲಕ್ಷದಿಂದ 10 ಲಕ್ಷದೊಳಗಿನ ಜನಸಂಖ್ಯೆ ಇರುವ ಮುನ್ಸಿಪಾಲಿಟಿ–6 ಕಿ.ಮೀ ತನಕ
3) 10 ಲಕ್ಷಕ್ಕೂ ಹೆಚ್ಚಿನ ಜನಸಂಖ್ಯೆ ಇರುವ ಮುನ್ಸಿಪಾಲಿಟಿ– 8 ಕಿ.ಮೀ ತನಕ

ಬಂಡವಾಳ ವೃದ್ಧಿ ತೆರಿಗೆ ಕೊಡುವಾಗ ಈ ಕೆಳಗಿನ ಖರ್ಚು ಕಳೆದು ತೆರಿಗೆ ಕೊಡಬಹುದಾಗಿದೆ.

1) ಬ್ರೋಕರೇಜ್
2) ಕಾನೂನು ಸಲಹೆಯ ಖರ್ಚು
3) ಆಸ್ತಿ ಕೊಂಡ ನಂತರ ಆವರಣ ಗೋಡೆ, ಮನೆ ಕಟ್ಟಿಸುವುದು ಅಥವಾ ಇನ್ನಿತರ ಬಂಡವಾಳವೃದ್ಧಿ ಚಟುವಟಿಕೆ.

ಈ ಎಲ್ಲಾ ಖರ್ಚುಗಳಿಗೂ ಆಧಾರ ಇರಬೇಕು. ಹೆಚ್ಚಿನ ವಿವರ ಬೇಕಿದ್ದರೆ ಕರೆ ಮಾಡಿ.

ಸ್ನೇಹಲತಾ, ಕೆ.ಆರ್‌.ಪುರ, ಬೆಂಗಳೂರು

● **ಪ್ರಶ್ನೆ:** ನಾನು ಐ.ಟಿ. ಕಂಪನಿಯಲ್ಲಿ ಕೆಲಸ ಮಾಡುತ್ತೇನೆ. ನನ್ನ ಸಂಬಳ ₹ 65 ಸಾವಿರ. ಅವಿವಾಹಿತೆ. ಪಾಲಕರೊಂದಿಗೆ ಇದ್ದೇನೆ. ಉತ್ತಮ ಉಳಿತಾಯ ಯೋಜನೆ, ತೆರಿಗೆ ಉಳಿಸುವ ವಿಧಾನ ತಿಳಿಸಿ.

ಉತ್ತರ: ಉತ್ತಮ ಹೂಡಿಕೆಯಾಗಿ, ಆದಾಯ ತೆರಿಗೆ ಉಳಿಸಲು ಪಿಪಿಎಫ್‌ನಲ್ಲಿ ₹ 1 ಲಕ್ಷ ಹಾಗೂ ಜೀವ ವಿಮೆಯಲ್ಲಿ ₹ 50 ಸಾವಿರ ವಾರ್ಷಿಕವಾಗಿ ತುಂಬುತ್ತಾ ಬನ್ನಿ. ₹ 15 ಸಾವಿರ ಆರ್‌.ಡಿ. ಮಾಡಿರಿ. ಹೀಗೆ ಮಾಡಿದಲ್ಲಿ, ಸೆಕ್ಷನ್ 80ಸಿ ಆಧಾರದ ಮೇಲೆ ನೀವು ನಿಮ್ಮ ಒಟ್ಟು ಆದಾಯದಿಂದ ₹ 1.50 ಲಕ್ಷ ಕಳೆದು ತೆರಿಗೆ ಸಲ್ಲಿಸಬಹುದು. ಇದೇ ವೇಳೆ, ಜೀವನದ ಸಂಜೆಯಲ್ಲಿ ಪಿಂಚಣಿ ಪಡೆಯಲು ವಾರ್ಷಿಕ ಕನಿಷ್ಠ ₹ 50 ಸಾವಿರವನ್ನು ರಾಷ್ಟ್ರೀಯ ಪಿಂಚಣಿ ಯೋಜನೆಯಲ್ಲಿ (ಎನ್‌ಪಿಎಸ್) ತೊಡಗಿಸಿರಿ. ಇಲ್ಲಿ ಕೂಡ ಸೆಕ್ಷನ್ 80ಸಿಸಿಡಿ (1ಬಿ) ಆಧಾರದ ಮೇಲೆ ಗರಿಷ್ಠ ₹ 50 ಸಾವಿರವನ್ನು ಒಟ್ಟು ಆದಾಯದಿಂದ ಕಳೆದು ತೆರಿಗೆ ಕೊಡಬಹುದು. ನಿಮಗೆ ಸ್ಟ್ಯಾಂಡರ್ಡ್ ಡಿಡಕ್ಷನ್ ಸೆಕ್ಷನ್ 16 (1ಎ) ಆಧಾರದ ಮೇಲೆ ₹ 50 ಸಾವಿರ ಇದ್ದು, ನಾನು ತಿಳಿಸಿದಂತೆ ಹೂಡಿಕೆ ಮಾಡಿದಲ್ಲಿ ನಿಮ್ಮ ಒಟ್ಟು ಆದಾಯದಿಂದ ₹ 2.50 ಲಕ್ಷ ಕಳೆದು ತೆರಿಗೆ ಕೊಡಬಹುದು. ನಿಮ್ಮ ವಾರ್ಷಿಕ ವೇತನ ₹ 7.80 ಲಕ್ಷ. ಇದರಲ್ಲಿ ₹ 2.50 ಲಕ್ಷ ಕಳೆದಾಗ ₹ 5.30 ಲಕ್ಷಕ್ಕೆ ತೆರಿಗೆ ಕೊಡಬೇಕಾಗುತ್ತದೆ. ನೀವು ಸೆಕ್ಷನ್ 80ಡಿ ಆಧಾರದ ಮೇಲೆ ನಿಮಗಾಗಲಿ, ನಿಮ್ಮ ಹೆತ್ತವರಿಗಾಗಲಿ ಆರೋಗ್ಯ ವಿಮೆ ಮಾಡಿ ವಾರ್ಷಿಕ ₹ 30 ಸಾವಿರ ತುಂಬಿದಲ್ಲಿ, ನೀವು ಸಂಪೂರ್ಣವಾಗಿ ಆದಾಯ ತೆರಿಗೆ ವಿನಾಯಿತಿ ಪಡೆಯಬಹುದು. ನೀವು ಅವಿವಾಹಿತರಾಗಿದ್ದು, ಒಂದೆರಡು ವರ್ಷಗಳಲ್ಲಿ ಮದುವೆ ಆಗಬೇಕಾದ್ದರಿಂದ ಕನಿಷ್ಠ ₹ 25 ಸಾವಿರದ ಆರ್‌.ಡಿ. ಮಾಡಿ ಒಂದು ವರ್ಷಕ್ಕೆ ಇಡಿ. ಮದುವೆ ತನಕ ಈ ಪ್ರಕ್ರಿಯೆ ನಿಲ್ಲಿಸಬೇಡಿ. ಈ ಅವಧಿಯಲ್ಲಿಯೇ ಮದುವೆ ನಿಶ್ಚಯವಾದರೆ ಅವಧಿಗೂ ಮುನ್ನವೇ ಅಸಲಿನಲ್ಲಿ ಏನೂ ಕಡಿತ ಇಲ್ಲದೆ ಆರ್‌.ಡಿ. ಮೊತ್ತ ವಾಪಸ್ ಪಡೆಯಬಹುದು.

ರಾಮಸ್ವಾಮಿಗೌಡ, ಶಿವಮೊಗ್ಗ

● **ಪ್ರಶ್ನೆ:** ನನ್ನ ಪರಿಚಯಸ್ಥರೊಬ್ಬರು ಇಲ್ಲಿಯ ಸಹಕಾರ ಬ್ಯಾಂಕ್‌ನಲ್ಲಿ ದೀರ್ಘಾವಧಿ ಠೇವಣಿಯಲ್ಲಿ ಹಣ ಇಟ್ಟಿದ್ದರು. ಈ ಠೇವಣಿಗೆ ಅವರ ಪತ್ನಿ ಹೆಸರನ್ನು ನಾಮಿನಿಯಾಗಿ ಸೂಚಿಸಿದ್ದರು. ಅವಧಿ ಮುಗಿಯುವ ಮೊದಲು ಠೇವಣಿದಾರರು ತೀರಿಕೊಂಡರು. ಅವಧಿ ಮುಗಿದ ಮೇಲೆ ನಾಮಿನಿ ಖಾತೆಗೆ ಠೇವಣಿ ವರ್ಗಾಯಿಸಲು ₹ 100 ಛಾಪಾ ಕಾಗದದ ಮೇಲೆ ಮುಚ್ಚಳಿಕೆ ಪತ್ರ ಬರೆಸಿಕೊಂಡರು. ಪತ್ನಿ ಕೂಡಾ ಅದೇ ಬ್ಯಾಂಕ್‌ನಲ್ಲಿ ಖಾತೆ ಹೊಂದಿದ್ದರು. ಇದು ಸರಿಯೇ?

ಉತ್ತರ: ಠೇವಣಿದಾರ ಬ್ಯಾಂಕ್‌ನಲ್ಲಿ ಠೇವಣಿ ಇರಿಸುವಾಗ ನಾಮ ನಿರ್ದೇಶನ ಮಾಡಿ ಅಂತಹ ವ್ಯಕ್ತಿಯ ವಯಸ್ಸು, ಠೇವಣಿದಾರನಿಗೆ ಇರುವ ಸಂಬಂಧ, ಓಪನಿಂಗ್ ಫಾರಂನಲ್ಲಿ ನೋಂದಾಯಿಸಿದ ನಂತರ ನಾಮ ನಿರ್ದೇಶನ ಹೊಂದಿದವರು ₹ 100ರ ಬಾಂಡ್ ಪೇಪರಿನ ಮೇಲೆ ಹಣ ಪಡೆಯುವಾಗ, ಮುಚ್ಚಳಿಕೆ ಪತ್ರ ಕೊಡುವ ಅಗತ್ಯವಿಲ್ಲ. ಆದರೆ ಮರಣ ಹೊಂದಿರುವ ಠೇವಣಿದಾರರ ಮರಣಪತ್ರವನ್ನು ಬ್ಯಾಂಕ್‌ಗೆ ನೀಡಬೇಕಾಗುತ್ತದೆ. ಇದು ಪ್ರಚಲಿತದಲ್ಲಿ ಇರುವ ಕಾನೂನು. ಪ್ರಾಯಶಃ ಠೇವಣಿದಾರರ ಮಕ್ಕಳು ಮುಂದೆ ಏನಾದರೂ ತಕರಾರು ಮಾಡಿದರೆ ಬ್ಯಾಂಕ್‌ಗೆ ಭದ್ರತೆ ಬೇಕು ಎನ್ನುವ ಅಭಿಪ್ರಾಯದಿಂದ ಮುಚ್ಚಳಿಕೆ ಪತ್ರ ಪಡೆದಿರಬಹುದು.

ಹಣಕಾಸು, ತೆರಿಗೆ ಸಮಸ್ಯೆಗೆ ಪರಿಹಾರ

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ. ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು–560001.

ಇ–ಮೇಲ್: businessdesk@prajavani.co.in

ಮುಂಬೈನಲ್ಲಿ ₹ 99ರ ಗಡಿ ದಾಟಿದ ಪೆಟ್ರೋಲ್



ನವದೆಹಲಿ (ಪಿಟಿಐ): ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ತೈಲ ದರ ಏರಿಕೆಗೆ ಅನುಗುಣವಾಗಿ ಸರ್ಕಾರಿ ಸ್ವಾಮ್ಯದ ತೈಲ ಮಾರಾಟ ಕಂಪನಿಗಳು ದೇಶದಲ್ಲಿ ಮಂಗಳವಾರ ಪೆಟ್ರೋಲ್, ಡೀಸೆಲ್ ದರ ಹೆಚ್ಚಿಸಿವೆ. ಇದರಿಂದ ಮುಂಬೈನಲ್ಲಿ ಪೆಟ್ರೋಲ್ ದರವು ಲೀಟರಿಗೆ ₹ 99ರ ಗಡಿಯನ್ನು ದಾಟಿದೆ. ಪೆಟ್ರೋಲ್ ದರ ₹ 99.14ಕ್ಕೆ, ಡೀಸೆಲ್ ದರ ₹ 90.71ಕ್ಕೆ ತಲುಪಿದೆ.

ತೈಲ ಕಂಪನಿಗಳು ಪೆಟ್ರೋಲ್ ದರವನ್ನು ಲೀಟರಿಗೆ 27 ಪೈಸೆ ಮತ್ತು ಡೀಸೆಲ್ ದರವನ್ನು 29 ಪೈಸೆಗಳಷ್ಟು ಏರಿಕೆ ಮಾಡಿವೆ. ಇದರಿಂದಾಗಿ ಈ ತಿಂಗಳಿನಲ್ಲಿ 10ನೇ ಬಾರಿಗೆ ದರ ಹೆಚ್ಚಳ ಮಾಡಿದಂತಾಗಿದೆ. ಪರಿಣಾಮವಾಗಿ ದೇಶದ ಹಲವು ಭಾಗಗಳಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ದರಗಳು ಸಾರ್ವಕಾಲಿಕ ಗರಿಷ್ಠ ಮಟ್ಟ ತಲುಪಿವೆ.

ದೆಹಲಿಯಲ್ಲಿ ಪೆಟ್ರೋಲ್ ದರ ಲೀಟರಿಗೆ ₹ 92.85 ಮತ್ತು ಡೀಸೆಲ್ ದರ ಲೀಟರಿಗೆ ₹ 83.51ಕ್ಕೆ ತಲುಪಿದೆ. ಬೆಂಗಳೂರಿನಲ್ಲಿ ಪೆಟ್ರೋಲ್ ದರ ₹ 95.94 ಮತ್ತು ಡೀಸೆಲ್ ದರ ₹ 88.53ರಷ್ಟಾಗಿದೆ.

ಮತ್ತೆ 50 ಸಾವಿರದ ಗಡಿ ದಾಟಿದ ಸೆನ್ಸೆಕ್ಸ್

ಮುಂಬೈ (ಪಿಟಿಐ): ಕೋವಿಡ್-19ರ ಹೊಸ ಪ್ರಕರಣಗಳ ಸಂಖ್ಯೆ ಇಳಿಕೆ ಆಗುತ್ತಿರುವುದು ಹೂಡಿಕೆಗಳನ್ನು ಹೆಚ್ಚಿಸಿದೆ. ಇದರಿಂದಾಗಿ ಷೇರುಪೇಟೆಗಳ ವಹಿವಾಟು ಮಂಗಳವಾರ ಎರಡು ತಿಂಗಳ ಗರಿಷ್ಠ ಮಟ್ಟದಲ್ಲಿ ಅಂತ್ಯವಾಗಿದೆ.

ಮುಂಬೈ ಷೇರುಪೇಟೆ ಸಂವೇದಿ ಸೂಚ್ಯಂಕ ಸೆನ್ಸೆಕ್ಸ್ 50 ಸಾವಿರದ ಗಡಿಯನ್ನು ಮತ್ತೆ ದಾಟಿದೆ. ದಿನದ ವಹಿವಾಟಿನಲ್ಲಿ 612 ಅಂಶ ಏರಿಕೆ ಕಂಡು, 50,193ಕ್ಕೆ ತಲುಪಿತು. ಎರಡು ದಿನಗಳ ವಹಿವಾಟಿನಲ್ಲಿ ಹೂಡಿಕೆದಾರರ ಸಂಪತ್ತು ₹ 5.78 ಲಕ್ಷ ಕೋಟಿಯಷ್ಟು ವೃದ್ಧಿಯಾಗಿದೆ.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 185 ಅಂಶ ಏರಿಕೆಯಾಗಿ 15,108ಕ್ಕೆ ತಲುಪಿದೆ.

ಕೋವಿಡ್ ಪ್ರಕರಣಗಳಲ್ಲಿ ಇಳಿಕೆ ಮತ್ತು ಆರ್ಥಿಕತೆಯು ವೇಗವಾಗಿ ಚೇತರಿಕೆ ಕಂಡುಕೊಳ್ಳಲಿದೆ ಎನ್ನುವ ಆಶಾವಾದವು ಹೂಡಿಕೆಯನ್ನು ಉತ್ತೇಜಿಸಿತು ಎಂದು ರಿಲಯನ್ಸ್ ಸೆಕ್ಯುರಿಟೀಸ್‌ನ ಯೋಜನಾ ಮುಖ್ಯಸ್ಥ ವಿನೋದ್ ಮೋದಿ ಹೇಳಿದ್ದಾರೆ.

ಡಾಲರ್ ಎದುರು ರೂಪಾಯಿ ಮೌಲ್ಯ 17 ಪೈಸೆ ಹೆಚ್ಚಾಗಿ ಒಂದು ಡಾಲರ್‌ಗೆ ₹ 73.05ರಂತೆ ವಿನಿಮಯಗೊಂಡಿತು.

ಚಿನ್ನ ₹ 333, ಬೆಳ್ಳಿ ₹ 2,021 ಹೆಚ್ಚಳ



ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಚಿನ್ನ, ಬೆಳ್ಳಿ ದರ ಹೆಚ್ಚಾಗಿದೆ. 10 ಗ್ರಾಂ ಚಿನ್ನದ ದರ ₹ 333ರಷ್ಟು ಏರಿಕೆ ಕಂಡು ₹ 47,833ಕ್ಕೆ ತಲುಪಿದೆ. ಬೆಳ್ಳಿ ಧಾರಣೆ ಕೆ.ಜಿ.ಗೆ ₹ 2,021ರಷ್ಟು ಏರಿಕೆ ಕಂಡು ₹ 73,122ಕ್ಕೆ ತಲುಪಿದೆ.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನ ದರ ಏರಿಕೆ ಮತ್ತು ಡಾಲರ್ ಮೌಲ್ಯ ಇಳಿಕೆಯ ಕಾರಣಗಳಿಂದಾಗಿ ದೇಶಿ ಮಾರುಕಟ್ಟೆಯಲ್ಲಿ ಚಿನ್ನದ ದರ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಮುಂಬೈ ಧಾರಣೆ

ಶೇಂಗಾ 18-5-2021	
ಜಾವಾ 70/80(ಹೊಸ)	9850-9900
ಜಾವಾ 80/90(ಹೊಸ)	9350-9100
ದಪ್ಪ ಮಧ್ಯಪ್ರದೇಶ(ಹೊಸ)	10150-10200
ದಪ್ಪ ಗುಜರಾತ್(ಹೊಸ)	9400-9500
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1450 (1450)
ಪಾಮ್ ವಾರದ ಡೆಲಿವರಿ	1380 (1385)
ಸೂರ್ಯಕಾಂತಿ ಎಣ್ಣೆ ಕಚ್ಚಾ	1650 (1650)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	48,100 (48,050)
ಬೆಳ್ಳಿ ಕೆ.ಜಿ	72,900 (71,750)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಅಡಿಕೆ		ಹೊಸತು	36000-40000	ಚಾಲಿ	32122-36440
ಬಂಟ್ವಾಳ		ಹಳತು	46000-50000	ರಾಶಿ	39860-39860
ಕೋಕ	10000-22500	**ಪುತ್ತೂರು**		ತಟ್ಟಿಬೆಟ್ಟೆ	34650-34650
ಹೊಸತು	23500-39000	ಹೊಸತು	28000-39500	**ರಾಮನಗರ ರೇಷ್ಮೆ ಧಾರಣೆ**	
ಹಳತು	42500-49000	**ಯಲ್ಲಾಪುರ**		ಮಿಶ್ರತಳಿ (ಸಿ.ಬಿ)	222-303
ಕಾರ್ಕಳ		ಬಿಳಿಗೋಟು	30330-30660	ದ್ವಿತಳಿ (ಬಿ.ವಿ)	282-375

ಟಾಟಾ ಮೋಟರ್ಸ್ ನಷ್ಟ ₹ 7,585 ಕೋಟಿ

ನವದೆಹಲಿ (ಪಿಟಿಐ): ಟಾಟಾ ಮೋಟರ್ಸ್ ಕಂಪನಿಯ ನಿವ್ವಳ ನಷ್ಟವು 2020–21ನೇ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ₹ 7,585 ಕೋಟಿಗಳಷ್ಟಾಗಿದೆ.

ಅದಕ್ಕೂ ಹಿಂದಿನ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ಕಂಪನಿಯ ನಿವ್ವಳ ನಷ್ಟ ₹ 9,864 ಕೋಟಿಗಳಷ್ಟಿತ್ತು ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ. ಕಂಪನಿಯ ಒಟ್ಟಾರೆ ವರಮಾನವು ₹ 89,319 ಕೋಟಿಗಳಷ್ಟಾಗಿದೆ. ಹಿಂದಿನ ಹಣಕಾಸು ವರ್ಷದ ನಾಲ್ಕನೇ ತ್ರೈಮಾಸಿಕದಲ್ಲಿ ₹ 63,057 ಕೋಟಿಗಳಷ್ಟಿತ್ತು.

2020–21ನೇ ಹಣಕಾಸು ವರ್ಷದ ಒಟ್ಟು ನಷ್ಟವು ₹ 13,395 ಕೋಟಿ ಆಗಿದೆ. 2019–20ನೇ ಹಣಕಾಸು ವರ್ಷದಲ್ಲಿ ₹ 11,975 ಕೋಟಿ ನಷ್ಟ ಅನುಭವಿಸಿತ್ತು. ಒಟ್ಟಾರೆ ವರಮಾನ ₹ 2.64 ಲಕ್ಷ ಕೋಟಿಗಳಿಂದ ₹ 2.52 ಲಕ್ಷ ಕೋಟಿಗಳಿಗೆ ಇಳಿಕೆ ಕಂಡಿದೆ.